# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 4 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 167 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




# ಮೈಸೂರು ನಗರ ಪ್ರದಕ್ಷಿಣೆ ಮೂಲಕ ದೀಪಾಲಂಕಾರ ವೀಕ್ಷಿಸಿ ಸಿಎಂ ದಿಲ್‌ಖುಷ್

**● ಮಾರ್ಗದುದ್ದಕ್ಕೂ ವಾಹನ ದಟ್ಟಣೆಯಿಂದ ರೋಸಿ ಹೋದ ಜನ ● ಕೆಲವೆಡೆ ಕೇಳಿಬಂದ ಮೋದಿ... ಮೋದಿ... ಘೋಷಣೆ**

ಮೈಸೂರು, ಅ.3(ಎಸ್‌ಬಿಡಿ)– ಮುಖ್ಯಮಂತ್ರಿ ಸಿದ್ದರಾಮಯ್ಯ, ಅಂಬಾರಿ ಬಸ್ ಸವಾರಿ ಮೂಲಕ ಅತ್ಯಾಕರ್ಷಕ ದಸರಾ ವಿದ್ಯುತ್ ದೀಪಾಲಂಕಾರವನ್ನು ಶುಕ್ರವಾರ ರಾತ್ರಿ ಕಣ್ತುಂಬಿಕೊಂಡರು.

ರಾಮಸ್ವಾಮಿ ವೃತ್ತದ ಬಳಿ ರಾತ್ರಿ 7.25ಕ್ಕೆ ಅಂಬಾರಿ ಬಸ್ ಹತ್ತಿದ ಸಿಎಂ, ಅಲ್ಲಿ ನೆರೆದಿದ್ದ ಜನರತ್ತ ಕೈ ಬೀಸಿ ನಗರ ಪ್ರದಕ್ಷಿಣೆ ಆರಂಭಿಸಿದರು. ಚಾಮರಾಜ ಜೋಡಿ ರಸ್ತೆ, ಬಸವೇಶ್ವರ ವೃತ್ತ, ವಿದ್ಯಾಪೀಠ ವೃತ್ತ, ಜಯಚಾಮರಾಜೇಂದ್ರ ವೃತ್ತ(ಹಾರ್ಡಿಂಜ್ ಸರ್ಕಲ್), ಚಾಮರಾಜ ವೃತ್ತ, ಕೆ.ಆರ್.ವೃತ್ತ, ಸಯ್ಯಾಜಿ



ಮೈಸೂರು ದಸರಾ ಅಂಗವಾಗಿ ಸೆಸ್ಕ್ ವತಿಯಿಂದ ಮಾಡಲಾಗಿರುವ ಅತ್ಯಾಕರ್ಷಕ ವರ್ಣಮಯ ವಿದ್ಯುತ್ ದೀಪಾಲಂಕಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಗಣ್ಯರೊಂದಿಗೆ ಅಂಬಾರಿ ಬಸ್ ಸವಾರಿ ಮೂಲಕ ಶುಕ್ರವಾರ ರಾತ್ರಿ ಕಣ್ತುಂಬಿಕೊಂಡರು.

ರಾವ್ ರಸ್ತೆ, ಆಯುರ್ವೇದಿಕ್ ಆಸ್ಪತ್ರೆ ವೃತ್ತ, ಹಳೇ ಆರ್‌ಎಂಸಿ ಜಂಕ್ಷನ್, ಬಂಬೂ ಬಜಾರ್, ಹೈವೇ ವೃತ್ತದ ಮೂಲಕ ಎಲ್‌ಐಸಿ ವೃತ್ತದವರೆಗೆ ಝಗಮಗಿಸುವ ವಿದ್ಯುತ್ ದೀಪಾಲಂಕಾರವನ್ನು ವೀಕ್ಷಿಸಿದರು.

ರಾತ್ರಿ 8.10ರ ವೇಳೆಗೆ ಬಸ್‌ನಿಂದ ಕೆಳಗಿಳಿದು, ಎಲ್‌ಐಸಿ ವೃತ್ತದಲ್ಲಿ ವಿದ್ಯುತ್ ದೀಪಗಳಿಂದ ರೂಪಿಸಿರುವ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಇನ್ನಿತರ ಆಕೃತಿಗಳನ್ನು ವೀಕ್ಷಿಸಿದರು. ಈ ವೇಳೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್)ದ ವ್ಯವಸ್ಥಾಪಕ ನಿರ್ದೇಶಕ ■6ನೇ ಪುಟಕ್ಕೆ



ಮುಖ್ಯಮಂತ್ರಿಗಳ ನಗರ ಪ್ರದಕ್ಷಿಣೆ ವೇಳೆ ಕೋಟೆ ಮಾರಮ್ಮ ದೇವಸ್ಥಾನ ರಸ್ತೆಯಲ್ಲಿ ಸಾಲುಗಟ್ಟಿ ನಿಂತಿರುವ ವಾಹನಗಳು.

# ಅನಿವಾರ್ಯವಾದರೆ ಜಾತಿ ಸಮೀಕ್ಷೆ ಅವಧಿ ವಿಸ್ತರಣೆ

## ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

**● 80 ಲಕ್ಷ ಮನೆಗಳಲ್ಲಿ ಸಮೀಕ್ಷೆ ● 3 ಕೋಟಿ ಜನರ ಮಾಹಿತಿ ಸಂಗ್ರಹ ● ಜಾತಿ ಒಡಕು ಸಮೀಕ್ಷೆ ಉದ್ದೇಶವಲ್ಲ ● ಮತಾಂತರ ಆದವರೇ ಮೂಲ ಜಾತಿ ಉಲ್ಲೇಖಿಸಿದ್ದಾರೆ**

ಮೈಸೂರು, ಅ.3(ಬಿಎಲ್‌ಯು)– ರಾಜ್ಯದಲ್ಲಿ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸಮೀಕ್ಷೆ ಬಿರುಸಿನಿಂದ ನಡೆಯುತ್ತಿದ್ದು, ಅಕ್ಟೋಬರ್ 7 ರೊಳಗೆ ಸಮೀಕ್ಷೆ ಪೂರ್ಣಗೊಳ್ಳುವ ವಿಶ್ವಾಸವಿದೆ. ಒಂದು ವೇಳೆ ಸಮೀಕ್ಷೆ ಅಪೂರ್ಣಗೊಂಡರೆ ಪರಿಸ್ಥಿತಿ ನೋಡಿಕೊಂಡು ಗಣತಿ ಮುಂದೂಡುವ ಬಗ್ಗೆ ತೀರ್ಮಾನ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಮೈಸೂರಿನ ಟಿ.ಕೆ.ಬಡಾವಣೆಯ ತಮ್ಮ ನಿವಾಸದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಒಟ್ಟು 1.80 ಕೋಟಿ ಮನೆಯಲ್ಲಿ 80 ಲಕ್ಷ ಮನೆಗಳ ಸಮೀಕ್ಷೆ ನಡೆಸಲಾಗಿದೆ. ಈ ಮೂಲಕ



3 ಕೋಟಿ ಜನರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಸಮೀಕ್ಷೆ ಆರಂಭಗೊಂಡ ಮೂರು ದಿನ ತಾಂತ್ರಿಕ ಸಮಸ್ಯೆ ಉಂಟಾದ ಕಾರಣ ಸಮೀಕ್ಷೆ ವೇಗ ಕಳೆದುಕೊಂಡಿತ್ತು. ಆದರೆ ಈಗ ಬಹಳ ಚುರುಕಿನಿಂದ ಸಮೀಕ್ಷೆ ನಡೆಯುತ್ತಿದೆ. ಅ.7ರೊಳಗೆ ಸಮೀಕ್ಷೆ ಪೂರ್ಣಗೊಳ್ಳುತ್ತದೆ ಎಂಬ ವಿಶ್ವಾಸವಿದೆ. ■6ನೇ ಪುಟಕ್ಕೆ

### ಜಾತಿ ಸಮೀಕ್ಷೆ ಬಗ್ಗೆ ರಾಜ್ಯ ಸರ್ಕಾರದಿಂದ ಅಧಿಕೃತ ಮಾಹಿತಿ

ಮೈಸೂರು, ಅ.3(ಬಿಎಲ್‌ಯು)– ಮೈಸೂರು ಸೇರಿದಂತೆ ರಾಜ್ಯದಲ್ಲಿ ಸೆ.22 ರಿಂದ ಆರಂಭವಾಗಿರುವ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ (ಜಾತಿಗಣತಿ) ಸಮೀಕ್ಷೆ ಬಗ್ಗೆ ರಾಜ್ಯ ಸರ್ಕಾರ ಅಂಕಿ ಅಂಶ ಸಹಿತ ಅಧಿಕೃತ ಮಾಹಿತಿ ನೀಡಿದೆ. ಈ ಸಂಬಂಧ ಮುಖ್ಯಮಂತ್ರಿಗಳ ಅಧಿಕೃತ ವಾಟ್ಸ್ ಆ್ಯಪ್ ಗ್ರೂಪ್‌ನಲ್ಲಿ ಮಾಹಿತಿ ನೀಡಲಾಗಿದೆ.

- ಒಟ್ಟು ಮನೆಗಳ ಗುರಿ – 1,43,77,978
- ಮನೆಗಳ ಸಮೀಕ್ಷೆ 02–10–2025ವರೆಗೆ ಪ್ರಗತಿ 81,27,206
- ಮನೆಗಳ ಸಮೀಕ್ಷೆ ಇಂದಿನ ಪ್ರಗತಿ – 9.35,044
- ಒಟ್ಟು ಮನೆಗಳ ಸಮೀಕ್ಷೆ ಪ್ರಗತಿ – 90.61.880
- ಸಮೀಕ್ಷೆಯಾಗಿರುವ ಒಟ್ಟು ಜನಸಂಖ್ಯೆ – 3,42,31,444
- ಒಟ್ಟು ಶೇಖಡವಾರು ಪ್ರಗತಿ – ಶೇಕಡಾ 63.03

### ಅಗತ್ಯ ಬಿದ್ದರೆ ಕೋರ್ಟ್ ಮೊರೆ ಹೋಗಿ ಜಿಎಸ್‌ಟಿ ಬಾಕಿ ಪಡೆಯುತ್ತೇವೆ

ಕೇಂದ್ರ ಸರ್ಕಾರ ಕರ್ನಾಟಕ್ಕೆ ನ್ಯಾಯಯುತವಾಗಿ ಜಿಎಸ್‌ಟಿ ನೀಡುತ್ತಿಲ್ಲ. ಈ ಕುರಿತಂತೆ ಅಗತ್ಯ ಬಿದ್ದರೆ ನ್ಯಾಯಾಲಯದ ಮೊರೆ ಹೋಗುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಕೇಂದ್ರದಿಂದ ತೆರಿಗೆ ಪಾಲು 3,200 ಕೋಟಿ ಬಂದಿರುವ ಬಗ್ಗೆ ಪ್ರತಿ ಕ್ರಿಯೆ ನೀಡಿದ ಅವರು, ಕರ್ನಾಟಕದಿಂದ ಕೇಂದ್ರ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ 4.5 ಲಕ್ಷ ಕೋಟಿ ನೀಡುತ್ತೇವೆ. ಅದು ನಮಗೆ ಕೇವಲ 3.5 ಪರ್ಸೆಂಟ್ ಜಿಎಸ್‌ಟಿ ಹಣ ನೀಡುತ್ತದೆ ಅಂದರೆ 1 ರೂಪಾಯಿ ಕೊಟ್ಟರೆ, ನಮಗೆ ಕೇವಲ 14 ಪೈಸೆ ನೀಡುತ್ತದೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿದರು.

**ಮಲತಾಯಿ ಧೋರಣೆ:** ಆದರೆ ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಕೇಂದ್ರ ಸರ್ಕಾರ ನಮಗಿಂತಲೂ ಹೆಚ್ಚಿನ ತೆರಿಗೆ ಪಾಲು ನೀಡುತ್ತಿದೆ. ಈ ಮೂಲಕ ಕೇಂದ್ರ ಮಲತಾಯಿ ಧೋರಣೆ ತಳೆಯುತ್ತಿದೆ ಎಂದು ಕಿಡಿಕಾರಿದರು.

15 ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ನೀಡಬೇಕಾದ ವಿಶೇಷ ಅನುದಾನವನ್ನು ರದ್ದು ಮಾಡಿದರು. ಈ ಮೂಲಕ ಆಯೋಗದ ಶಿಫಾರಸ್ಸು ಮಾಡಿದಂತೆ 5,490 ಕೋಟಿ, ಕೆರೆಗಳ ಅಭಿವೃದ್ಧಿಗೆ 3 ಸಾವಿರ ಕೋಟಿ, ಪೆರಿ ಫೆರಲ್ ರಿಂಗ್ ರಸ್ತೆ ನಿರ್ಮಾಣಕ್ಕೆ 3 ಸಾವಿರ ಕೋಟಿ, ಭದ್ರಾ ಮೇಲ್ದಂಡೆ ಯೋಜನೆಗೆ 5 ಸಾವಿರ ಕೋಟಿ ಅನುದಾನ ನೀಡಬೇಕಿತ್ತು. ಆದರೆ ಕೇಂದ್ರ ಸರ್ಕಾರ ನಮಗೆ ನಯಾ ಪೈಸೆ ನೀಡಿಲ್ಲ ಎಂದು ಆರೋಪಿಸಿದರು.

ಒಟ್ಟಾರೆ ನಮಗೆ 17 ಸಾವಿರ ಕೋಟಿ ಅನುದಾನ ಖೋತಾ ಆಗಿದೆ. ಈ ಹಿನ್ನೆಲೆ ಕೇಂದ್ರ ಸರ್ಕಾರ ನ್ಯಾಯಯುತವಾಗಿ ನಮಗೆ ತೆರಿಗೆ ಪಾಲನ್ನು ನೀಡಬೇಕು. ಅಗತ್ಯ ಬಿದ್ದರೆ ಈ ಸಂಬಂಧ ಕಾನೂನು ಹೋರಾಟ ಮಾಡಿ ನಮ್ಮ ತೆರಿಗೆ ಪಾಲು ಪಡೆಯುತ್ತೇವೆ ಎಂದು ಸಿದ್ದರಾಮಯ್ಯ ಹೇಳಿದರು. ಕೇಂದ್ರ ಸರ್ಕಾರದ ಅನುದಾನ ಕಡಿಮೆಯಾಗಿರುವ ಹಿನ್ನೆಲೆ ಗ್ಯಾರಂಟಿ ಯೋಜನೆಯ ವೆಚ್ಚ ಭರಿಸಿ ಹಣಕಾಸು ಸ್ಥಿತಿಯನ್ನು ಉತ್ತಮ ಪಡಿಸುವುದು ನಮಗೆ ಸವಾಲಿನ ಸಂಗತಿಯಾಗಿದೆ.

# ಖ್ಯಾತ ಪತ್ರಕರ್ತ, ಲೇಖಕ ಟಿಜೆಎಸ್ ಜಾರ್ಜ್ ಇನ್ನಿಲ್ಲ


ಬೆಂಗಳೂರು, ಅ.3– ಟಿಜೆಎಸ್ ಎಂದೇ ಪ್ರಸಿದ್ಧರಾಗಿದ್ದ ಖ್ಯಾತ ಪತ್ರಕರ್ತ ಥೈಲ್ ಜಾಕೋಬ್ ಸೋನಿ ಜಾರ್ಜ್(ಟಿಜೆಎಸ್ ಜಾರ್ಜ್–97) ಶುಕ್ರವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಇವರ ಪಾರ್ಥಿವ ಶರೀರವನ್ನು ಬೆಂಗಳೂರಿನ ವಸಂತನಗರದ ಅಪಾರ್ಟ್‌ಮೆಂಟ್‌ನಲ್ಲಿ ಇರಿಸಲಾಗಿದ್ದು, ಅಂತ್ಯಕ್ರಿಯೆ ಭಾನುವಾರ (ಅ.5) ದಂದು ಬೆಂಗಳೂರಿನ ಹೆಬ್ಬಾಳ್ ಸ್ಮಶಾನದಲ್ಲಿ ನೆರವೇರಲಿದೆ.

ವಯೋಸಹಜ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದ ಜಾರ್ಜ್ ಅವರಿಗೆ ಇತ್ತೀಚೆಗೆ ಶಸ್ತ್ರಚಿಕಿತ್ಸೆ ಕೂಡ ಆಗಿತ್ತು ಎಂದು ಕುಟುಂಬದ ಮೂಲಗಳು ತಿಳಿಸಿದ್ದು, ಇವರು ಪುತ್ರ ಜೀತ್ ಥೈಲ್, ಪುತ್ರಿ ಶೀಬಾ ಥೈಲ್ ಸೇರಿದಂತೆ ಅಪಾರ ಬಂಧು ಮಿತ್ರರ ಅಗಲಿದ್ದಾರೆ. ಇವರ ಪತ್ನಿ ಅಮ್ಮು ಜಾರ್ಜ್ ಈ ಹಿಂದೆಯೇ ನಿಧನರಾಗಿದ್ದಾರೆ.

ಟಿಜೆಎಸ್ ಜಾರ್ಜ್ 1950ರಲ್ಲಿ ಬಾಂಬೆ ಎಂದು ಕರೆಯಲ್ಪಡುವ ಭಾರತದ ಮ್ಯಾಕ್ಸಿಮಮ್ ಸಿಟಿಯಲ್ಲಿರುವ 'ದಿ ಫ್ರೀ ಪ್ರೆಸ್ ಜರ್ನಲ್'ನಲ್ಲಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ಹಾಂಗ್ ಕಾಂಗ್‌ನಿಂದ ಪ್ರಕಟವಾಗುವ 'ಏಷ್ಯಾ ವೀಕ್'ನ ಸ್ಥಾಪಕ ಸಂಪಾದಕರಾಗುವ ಮೊದಲು ಅವರು 'ದಿ ಸರ್ಚ್‌ಲೈಟ್', 'ಇಂಟರ್ನ್ಯಾಷನಲ್ ಪ್ರೆಸ್ ಇನ್‌ಸ್ಟಿಟ್ಯೂಟ್' ಮತ್ತು 'ಫಾರ್ ಈಸ್ಟರ್ನ್ ಎಕನಾಮಿಕ್ ರಿವ್ಯೂ'ನಲ್ಲಿ ಕೆಲಸ ಮಾಡಿದರು.

ಸರ್ಚ್‌ಲೈಟ್‌ನಲ್ಲಿ ಟಿಜೆಎಸ್ ಭಾರತದಲ್ಲಿ ದೇಶದ್ರೋಹದ ಆರೋಪ ಹೊರಿಸಲ್ಪಟ್ಟ ಮೊದಲ ಭಾರತೀಯ ಸಂಪಾದಕರು.. ಆಗಿನ ಬಿಹಾರ ಮುಖ್ಯಮಂತ್ರಿ ಕೆ.ಬಿ.ಸಹಾಯ್ ವಿರುದ್ಧದ



ಟಿಜೆಎಸ್ ಜಾರ್ಜ್ [1928 - 2025]

ಅಂಕಣಗಳಿಗಾಗಿ ಅವರನ್ನು ಬಂಧಿಸಿದಾಗ, ಆ ಸಮಯದಲ್ಲಿ ಭಾರತದ ರಕ್ಷಣಾ ಸಚಿವರಾಗಿದ್ದ ವಿ.ಕೆ.ಕೃಷ್ಣ ಮೆನನ್, ಜಾರ್ಜ್ ಅವರನ್ನು ಸಮರ್ಥಿಸಿಕೊಳ್ಳಲು ಪಾಟ್ನಾಗೆ ಧಾವಿಸಿದರು.

ಟಿಜೆಎಸ್ ತನ್ನ ವೃತ್ತಿಜೀವನದ ಉಳಿದ ಅವಧಿಯಲ್ಲಿ ಸತ್ಯವನ್ನು ಮಾತನಾಡುವುದರಿಂದ ಎಂದಿಗೂ ಹಿಂದೆ ಸರಿಯಲಿಲ್ಲ. 'ಏಷ್ಯಾವೀಕ್' ಸ್ಥಾಪಕ ಸಂಪಾದಕರಾಗಿ ಅವರು ತಮ್ಮ ನಿಯತಕಾಲಿಕೆಯಲ್ಲಿ ಪ್ರಕಟವಾದ ತೀಕ್ಷ್ಣವಾದ ಲೇಖನಗಳ ಮೂಲಕ ಆಗ್ನೇಯ ಏಷ್ಯಾದ ಅನೇಕ ಆಡಳಿತಗಾರರ ವಿರೋಧ ಎದುರಿಸಿದರು.

'ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್'ನ ಸಂಪಾದಕೀಯ ಸಲಹೆಗಾರರಾಗಿ ಜಾರ್ಜ್ ಸಾಮಾಜಿಕ ಅನ್ಯಾಯ, ಭ್ರಷ್ಟಾಚಾರ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಧ್ವನಿ ಎತ್ತಿದ್ದರು. ಸಾಪ್ತಾಹಿಕ ಅಂಕಣ 'ಪಾಯಿಂಟ್ ಆಫ್ ವ್ಯೂ' 25 ವರ್ಷಗಳ ಕಾಲ ಪ್ರಕಟವಾಗುತ್ತಾ ಬಂದಿತ್ತು. ಜೂನ್ 12, 2022 ರಂದು 'ಇಂದು ವಿದಾಯ ಹೇಳುವ ಸಮಯ' ಶೀರ್ಷಿಕೆಯೊಂದಿಗೆ ತಮ್ಮ ಲೇಖನಿಯನ್ನು ತ್ಯಜಿಸಿದರು. ಜಾರ್ಜ್ ಅವರ ಪಾಯಿಂಟ್ ಆಫ್ ವ್ಯೂ ಕನ್ನಡಪ್ರಭದಲ್ಲಿ 'ನೇರಮಾತು' ಹೆಸರಿನಲ್ಲಿ ಪ್ರಕಟವಾಗುತ್ತಿತ್ತು. ಸಾಹಿತ್ಯ ಮತ್ತು ಶಿಕ್ಷಣಕ್ಕೆ ನೀಡಿದ ಅತ್ಯುತ್ತಮ ಕೊಡುಗೆಗಾಗಿ 2011 ರಲ್ಲಿ ಕೇಂದ್ರ ಸರ್ಕಾರ ಇವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿ ಪುರಸ್ಕರಿಸಿತ್ತು.

ಟಿಜೆಎಸ್ ಜಾರ್ಜ್, ಮೇ 7, 1928 ರಂದು ಮ್ಯಾಜಿಸ್ಟ್ರೇಟ್ ಆಗಿದ್ದ ಥೈಲ್ ಥಾಮಸ್ ಜಾಕೋಬ್ ■6ನೇ ಪುಟಕ್ಕೆ

### ಕೆಬಿಜಿಯವರ ಅತ್ಯಾಪ್ತರು

ಟಿಜೆಎಸ್ ಜಾರ್ಜ್ ಅವರು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರೂ ಆದ ಇತ್ತೀಚೆಗೆ ನಿಧನರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ) ಅವರ ಅತ್ಯಾಪ್ತರು. ಮಾತ್ರವಲ್ಲ ಕೆಬಿಜಿ ಕುಟುಂಬದ ಆಪ್ತರೂ ಹೌದು. ಪತ್ರಿಕೆಗಳ ವಿವಿಧ ಕಾರ್ಯಕ್ರಮಗಳಲ್ಲಿ ಅವರು ಪಾಲ್ಗೊಂಡಿದ್ದರು. **'ಸ್ಟಾರ್ ಆಫ್ ಮೈಸೂರ್'**ನಲ್ಲಿ ಅವರ **'ಪಾಯಿಂಟ್ ಆಫ್ ವ್ಯೂ'** ಅಂಕಣದಲ್ಲಿ ಹಲವು ವರ್ಷ ಗಳಿಂದ ಲೇಖನಗಳನ್ನು ಬರೆಯುತ್ತಾ ಬಂದಿದ್ದರು. ಹಾಗಾಗಿ ಅವರದೇ ಆದ ಒಂದು ಓದುಗರ ಬಳಗವನ್ನು ಸೃಷ್ಟಿಸಿ ಕೊಂಡಿದ್ದರು. ಹಾಗೆಯೇ ಇವರ ಲೇಖನಗಳ ಕನ್ನಡ ಅವತರಣಿಕೆ ಆಗಾಗ **'ಮೈಸೂರು ಮಿತ್ರ'**ದಲ್ಲೂ ಪ್ರಕಟವಾಗುತ್ತಿದ್ದವು. ಕೆಬಿಜಿಯವರು ಪೂರ್ಣ ಪ್ರಮಾಣದ ಪತ್ರಕರ್ತರಾಗಿ ರೂಪು ಗೊಂಡಿದ್ದೇ ಟಿಜೆಎಸ್ ಜಾರ್ಜ್ ಅವರ ಗರಡಿಯಲ್ಲಿ. ಅದನ್ನು ಕೆಬಿಜಿಯವರು ಆಗಾಗ ಕೃತಜ್ಞತಾ ಪೂರ್ವಕವಾಗಿ ಸ್ಮರಿಸಿಕೊಳ್ಳುತ್ತಿದ್ದರು.



ಡಾ.ಕೆ.ಬಿ.ಗಣಪತಿ

# ಕೆಆರ್‌ಎಸ್ ಡ್ಯಾಂ ಬಳಿ ವಾರದಲ್ಲಿ ಮೂರು ದಿನ ಕಾವೇರಿ ಆರತಿ

## ವೀಕ್ಷಣೆಗೆ ಬೃಹತ್ ಸ್ಟೇಡಿಯಂ ನಿರ್ಮಾಣ; ಡಿಸಿಎಂ ಡಿಕೆ ಶಿವಕುಮಾರ್ ಘೋಷಣೆ

ಬೆಂಗಳೂರು, ಅ.3– ವಾರಣಾಸಿಯ ಗಂಗಾ ಆರತಿ ಮಾದರಿಯಲ್ಲಿ ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಮಂಡ್ಯ ಜಿಲ್ಲೆ ಕೆಆರ್‌ಎಸ್‌ನಲ್ಲಿ ಐತಿಹಾಸಿಕ ಕಾವೇರಿ ಆರತಿಯನ್ನು ಅಭೂತಪೂರ್ಣವಾಗಿ ನೆರವೇರಿಸಿದ 55 ಪಂಡಿತ, ಪುರೋಹಿತರನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕುಮಾರಪಾರ್ಕ್ ಗಾಂಧಿ ಭವನ ರಸ್ತೆಯಲ್ಲಿರುವ ಸರ್ಕಾರಿ ನಿವಾಸದಲ್ಲಿ ಶುಕ್ರವಾರ ಫಲ, ತಾಂಬೂಲ, ವಸ್ತ್ರ ನೀಡಿ ಸಾಂಪ್ರದಾಯಿಕವಾಗಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಾವೇರಿ ಆರತಿಯನ್ನು ನಿಲ್ಲಿಸುವುದಿಲ್ಲ, ಮುಂದುವರೆಸುತ್ತೇವೆ. ಪ್ರಯತ್ನಕ್ಕೆ ಸೋಲಾಗಬಹುದು ಪ್ರಾರ್ಥನೆಗೆ ಸೋಲಾಗುವುದಿಲ್ಲ. ನಾವೆಲ್ಲರೂ ಸೇರಿ ಪ್ರಾರ್ಥನೆ ಸಲ್ಲಿಸೋಣ. ಆರತಿಗಾಗಿ ಸ್ಟೇಡಿಯಂ ಮಾದರಿ ಮಂಟಪ ನಿರ್ಮಾಣ ಮಾಡೋಣ ಎಂದರು.



**ವಾರದಲ್ಲಿ 3 ದಿನ ಕಾವೇರಿ ಆರತಿ:** ಪ್ರತಿ ಶುಕ್ರವಾರ, ಶನಿವಾರ, ಭಾನುವಾರ ಕಾವೇರಿ ಆರತಿ ನಡೆಯಲಿದೆ. ಇದರಿಂದ ಪುರೋಹಿತರಿಗೆ, ಸ್ಥಳೀಯರಿಗೆ ಉದ್ಯೋಗ ದೊರೆಯಬೇಕು. ನಾನು ಅಥವಾ ಇನ್ಯಾರೋ ಪುರೋಹಿತರಾಗಲು ಸಾಧ್ಯವಿಲ್ಲ. ನೀವೇ ಆ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ. ಬೆಳಗ್ಗೆ ಹೊತ್ತು ಭಕ್ತಾದಿಗಳು ಕಾವೇರಿಗೆ ಪೂಜೆ ಸಲ್ಲಿಸುವ ರೀತಿಯಲ್ಲೂ ವ್ಯವಸ್ಥೆ ಮಾಡಲಾಗುವುದು. ವಾರ ಪೂರ್ತಿ ಆರತಿ ಕಾರ್ಯಕ್ರಮ ನಡೆಯಬೇಕು ಎಂಬುದು ನನ್ನ ಆಸೆಯಾಗಿದೆ ಎಂದರು.

ಕಾವೇರಿ ಆರತಿ ಮೂಲಕ ರಾಜ್ಯದಲ್ಲಿ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಲಾಗಿದೆ. ಜೀವನದಿ ■6ನೇ ಪುಟಕ್ಕೆ



# ಹಾಯಾಗಿ ದಿನ ಕಳೆದ ಜಂಬೂಸವಾರಿ ಯಶಸ್ಸಿನ ರೂವಾರಿಗಳಾದ ಗಜಪಡೆ

**● ಅಂಬಾರಿ ಹೊತ್ತ ಅಭಿಮನ್ಯುವಿಗೆ ಬಿಸಿನೀರ ಮಜ್ಜನ ● ಬಿಗಿ ಪಹರೆ ನಡುವೆ ಗಜಪಡೆ ವೀಕ್ಷಣೆಗೆ ಮುಗಿಬಿದ್ದ ಪ್ರವಾಸಿಗರು ● ನಾಳೆ ಕಾಡಿನತ್ತ ಪಯಣ**

ಮೈಸೂರು, ಅ.3(ಎಂಟಿವೈ)– ದಸರಾ ಮಹೋತ್ಸವದ ಜಂಬೂ ಸವಾರಿ ಮೆರವಣಿಗೆಯಲ್ಲಿ ಯಶಸ್ವಿಯಾಗಿ ಪಾಲ್ಗೊಂಡು ಅಪಾರ ಪ್ರಶಂಸೆಗೆ ಪಾತ್ರವಾದ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆ ಶುಕ್ರವಾರ ಅರಮನೆ ಆವರಣದಲ್ಲಿ ರಿಲ್ಯಾಕ್ಸ್ ಮೂಡ್‌ನಲ್ಲಿ ದಿನದೂಡಿದವು.

ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೂ ಕಿಕ್ಕಿರಿದು ಸೇರಿದ್ದ ಅಪಾರ ಜನಸ್ತೋಮದ ನಡುವೆ ಕ್ಯಾಪ್ಟನ್ ಅಭಿಮನ್ಯು ಚಿನ್ನದ ಅಂಬಾರಿ ಹೊತ್ತು ರಾಜಗಾಂಭೀರ್ಯದಿಂದ ಹೆಜ್ಜೆ ಹಾಕಿ ಎಲ್ಲರ ಮೆಚ್ಚುಗೆಗೆ ಪಾತ್ರನಾದರೆ, ಕುಮ್ಕಿ ಆನೆಗಳಾದ ಕಾವೇರಿ, ರೂಪ ಸೇರಿದಂತೆ ನಿಶಾನೆ, ನೌಪತ್ ಹಾಗೂ ಸಾಲಾನೆಗಳು ತಮ್ಮ ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದವು.

ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಅ.4ರಂದು ಮೊದಲ ತಂಡದಲ್ಲಿ ಒಂಭತ್ತು, ಅ.25ರಂದು ಎರಡನೇ ತಂಡದಲ್ಲಿ ಐದು ಆನೆಗಳು ಮೈಸೂರಿಗೆ ಆಗಮಿಸಿದವು. ಅವುಗಳಿಗೆ ಪ್ರತಿದಿನ ಜಂಬೂಸವಾರಿ ಮಾರ್ಗದಲ್ಲಿ ವಿವಿಧ ಹಂತದ ತಾಲೀಮಿನಲ್ಲಿ ಯಶಸ್ವಿಯಾಗಿ ಪಾಲ್ಗೊಂಡಿದ್ದ ಗಜಪಡೆಯ ಎಲ್ಲಾ 14 ಆನೆಗಳು ಗುರುವಾರ(ಅ.2) ಸಂಜೆ ನಡೆದ ಜಂಬೂಸವಾರಿ ಮೆರವಣಿಗೆಯಲ್ಲಿ ತಮ್ಮ ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಬಾಯಿಸಿದವು. ಜಂಬೂಸವಾರಿ ಮೆರವಣಿಗೆ ಪೂರ್ಣ ಪ್ರಮಾಣದಲ್ಲಿ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ತಲುಪಿದ ಬಳಿಕ ಅಭಿಮನ್ಯು ಮೇಲಿದ್ದ ಚಿನ್ನದ ಅಂಬಾರಿಯನ್ನು ಕ್ರೇನ್ ಸಹಾಯದಿಂದ ಕೆಳಗಿಳಿಸಿ, ಲಾರಿಯೊಳಗೆ ಇಟ್ಟು ಅರಮನೆಗೆ ವಾಪಸ್ ಕೊಂಡೊಯ್ದ ಬಳಿಕ ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲಿ ■6ನೇ ಪುಟಕ್ಕೆ



ಗಜಪಡೆಯ ಮಹೇಂದ್ರ ಆನೆಗೆ ಮಜ್ಜನ ಮಾಡಿಸುತ್ತಿರುವುದು.

# ಮಲೆಮಹದೇಶ್ವರ ವನ್ಯಜೀವಿ ಧಾಮದಲ್ಲಿ ಮತ್ತೊಂದು ಹುಲಿಯ ಭೀಕರ ಹತ್ಯೆ

**● ದೇಹವನ್ನು ಮೂರು ಭಾಗಗಳಾಗಿ ತುಂಡರಿಸಿ ಬಿಸಾಡಿರುವ ರಾಕ್ಷಸರು**
**● ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಅರಣ್ಯ ಸಚಿವ ಖಂಡ್ರೆ**
**● ಪಿಸಿಸಿಎಫ್ ಸ್ಮಿತಾ ಬಿಜ್ಜೂರು ನೇತೃತ್ವದ ತನಿಖಾ ತಂಡ ರಚನೆ**

ಹನೂರು, ಅ.3– ಮಲೆಮಹದೇಶ್ವರ ವನ್ಯಜೀವಿ ವ್ಯಾಪ್ತಿಯ ಹನೂರು ವಲಯದ ಪಚ್ಚೆದೊಡ್ಡಿ ಗ್ರಾಮದ ಬಳಿ ಹುಲಿಯ ಕೊಂದು, ಅದರ ಕಳೇಬರವನ್ನು ಮೂರು ಭಾಗಗಳಾಗಿ ಕತ್ತರಿಸಿರುವ ಅಮಾನುಷ ಘಟನೆ ಬೆಳಕಿಗೆ ಬಂದಿದೆ.

ಪಚ್ಚೆದೊಡ್ಡಿ ಗ್ರಾಮದ ಹತ್ತಿರ ಅರಣ್ಯ ಸಿಬ್ಬಂದಿ ಗಸ್ತು ತಿರುಗುತ್ತಿದ್ದಾಗ ಸತ್ತ ಹುಲಿಯ ಅರ್ಧ ದೇಹ ಪತ್ತೆಯಾಗಿದೆ. ಕೂಡಲೇ ಸಿಬ್ಬಂದಿ ಮೇಲಾಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ಈ ವೇಳೆ ಹುಲಿಯ ತಲೆ, ದೇಹದ ಸ್ವಲ್ಪ ಭಾಗ, ಮುಂದಿನ ಎರಡು ಕಾಲುಗಳು ಮಾತ್ರ ಪತ್ತೆಯಾಗಿವೆ.

ಹುಲಿಯ ಇನ್ನುಳಿದ ಅವಶೇಷಗಳನ್ನು ಹುಡುಕಾಡಿದಾಗ ಇವು ದೊರೆತ 100 ಮೀ. ಅಂತರದಲ್ಲಿ ಹುಲಿಯ ಇನ್ನುಳಿದ ಎರಡು ಭಾಗಗಳು ಪತ್ತೆಯಾಗಿದ್ದು, ಮರಣೋತ್ತರ ಪರೀಕ್ಷೆ ನಡೆಸಲಾಗಿದೆ.

ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಸೀನ್ ಆಫ್ ಕ್ರೈಂ, ನಾಯಿ ತನಿಖಾ ದಳ ಹಾಗೂ ಪೊಲೀಸ್ ಇಲಾಖೆಯ ಸಹಾಯದಿಂದ ತನಿಖೆ



ನಡೆಸಲಾಗುತ್ತಿದೆ. ಹುಲಿ ಹತ್ಯೆಗೆ ಕಾರಣರಾದವರನ್ನು ಆದಷ್ಟು ಬೇಗ ಪತ್ತೆ ಹಚ್ಚಲಾಗುವುದು ಎಂದು ಮಲೆಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಭಾಸ್ಕರ್ 'ಮೈಸೂರು ಮಿತ್ರ'ನಿಗೆ ತಿಳಿದ್ದಾರೆ.

**ತನಿಖೆಗೆ ಸಚಿವರ ಸೂಚನೆ:** ಹನೂರು ವಲಯದಲ್ಲಿ ಹುಲಿ ಹತ್ಯೆ ಸಂಬಂಧ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ, ಪಿಸಿಸಿಎಫ್ ಸ್ಮಿತಾ ಬಿಜ್ಜೂರು ನೇತೃತ್ವದ ತಂಡ ರಚಿಸಿ, ತನಿಖೆಗೆ ಆದೇಶ ನೀಡಿದ್ದಾರೆ. ಈ ಸಂಬಂಧ ಅಪರ ■6ನೇ ಪುಟಕ್ಕೆ


ಮೈಸೂರು ಮಿತ್ರ ಶನಿವಾರ 4 ಅಕ್ಟೋಬರ್ 2025

# ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಬೆಳದಿಂಗಳ ಸಂಗೀತ


ಪಂ. ಪ್ರವೀಣ್ ಗೋಡ್ಖಿಂಡಿ


ವಿದ್ವಾನ್ ಆರ್. ಕುಮರೇಶ್


ವಿದ್ವಾನ್ ಅರ್ಜುನ್ ಕುಮಾರ್


ಪಂ. ರವೀಂದ್ರ ಯಾವಗಲ್

ಮೈಸೂರು, ಅ. 3– ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಅ. 7ರಂದು ಸಂಜೆ 6 ಗಂಟೆಗೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–284ರ ಅಂಗವಾಗಿ ಪಂ. ಪ್ರವೀಣ್ ಗೋಡ್ಖಿಂಡಿ ಹಾಗೂ ವಿದ್ವಾನ್ ಆರ್. ಕುಮರೇಶ್ ಅವರಿಂದ ಜುಗಲ್ ಬಂದಿ ಗಾಯನ ಏರ್ಪಡಿಸಲಾಗಿದೆ.

ಪಂ. ಪ್ರವೀಣ್ ಗೋಡ್ಖಿಂಡಿಯವರು ಕಿರಾಣಾ ಘರಾಣೆಯ ಶ್ರೇಷ್ಠ ಕಲಾವಿದರು. ತಂದೆ ವಿದ್ವಾನ್ ವೆಂಕಟೇಶ ಗೋಡ್ಖಿಂಡಿಯವರು ಇವರ ಮೊದಲ ಗುರುಗಳು. ಆರನೆಯ ವಯಸ್ಸಿಗೇ ಸಾರ್ವಜನಿಕ ಕಚೇರಿ ನೀಡಿದವರು. ಹೆಸರಾಂತ ಮೃದಂಗ ವಿದ್ವಾನ್ ಆನೂರು ಅನಂತಕೃಷ್ಣ ಶರ್ಮರ ಬಳಿ ಶಿಷ್ಯವೃತ್ತಿ ಮುಂದುವರಿಸಿದರು. ಪಾಶ್ಚಾತ್ಯ ಮತ್ತು ಕರ್ನಾಟಕ ಸಂಗೀತದ ವೈಶಿಷ್ಟ್ಯಗಳನ್ನು ಅಳವಡಿಸಿಕೊಂಡಿರುವರು. ಸೂರ್ ಸಿಂಗಾರ್ ಸಂಸತ್ತಿನ 'ಸೂರಮಣಿ' ಪ್ರಶಸ್ತಿ, ಆಕಾಶವಾಣಿ ರಾಷ್ಟ್ರೀಯ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, ಪಂ. ಪನ್ನಾಲಾಲ್ ಘೋಷ್ ಸಂಸ್ಮರಣ ಗೌರವ ಪುರಸ್ಕಾರ, ಉಡುಪಿ ಹಾಗೂ ಶೃಂಗೇರಿ ಮಠಗಳಿಂದ 'ಆಸ್ಥಾನ ಸಂಗೀತ ವಿದ್ವಾನ್' ಪ್ರಶಸ್ತಿ ಇವರಿಗೆ ಸಂದಿರುವ ಪ್ರಮುಖ ಪುರಸ್ಕಾರಗಳು.

ವಿದ್ವಾನ್ ಆರ್. ಕುಮರೇಶ್ 'ವಯೊಲಿನ್ ಸಂತ' ಎಂದೇ ಪಿಟೀಲು ವಾದನ ಕ್ಷೇತ್ರದಲ್ಲಿ ಪ್ರಖ್ಯಾತರು. ಐದನೆಯ ವಯಸ್ಸಿಗೆ ಕಚೇರಿ ನೀಡಲು ಪ್ರಾರಂಭಿಸಿದವರು. ಹತ್ತನೆಯ ವರ್ಷಕ್ಕೆ 100 ಕಚೇರಿಗಳನ್ನು ಪೂರೈಸಿದರು. ಹದಿನೇಳನೆಯ ವಯಸ್ಸಿಗೇ ತಮಿಳುನಾಡಿನ ಅಧಿಕೃತ ರಾಜ್ಯ ವಿದ್ವಾಂಸರಾದರು. 'ಕಲೈಮಾಮಣಿ' ಪ್ರಶಸ್ತಿಗೆ ಭಾಜನರಾದ ಕಿರಿಯ ಕಲಾವಿದರು.

ವಿದ್ವಾನ್ ಅರ್ಜುನ್ ಕುಮಾರ್ ಅವರು ಮೃದಂಗ ವಾದನದಲ್ಲಿ ಸಹಕರಿಸಲಿದ್ದಾರೆ. ಇವರು ತಂದೆ ವಿದ್ವಾನ್ ಅರ್ಜುನ್‌ರವರ ಬಳಿ ಪ್ರಾರಂಭಿಕ ಶಿಕ್ಷಣ ಪಡೆದು, ಅನಂತರ ಲಯವಾದ್ಯ ಪ್ರವೀಣ ವಿದ್ವಾನ್ ಟಿ.ಎ.ಎಸ್. ಮಣಿಯವರಲ್ಲಿ ಶಿಕ್ಷಣ ಮುಂದುವರಿಸಿದರು. ಸಂಪ್ರದಾಯದಲ್ಲಿ ನಿಷ್ಠೆ, ಹೊಸತನದ ಅನ್ವೇಷಣೆ ಇವರ ವೈಶಿಷ್ಟ್ಯ. ಅಸಂಖ್ಯಾತ ಹಿರಿಯ ಕಲಾವಿದರಿಗೆ ಪಕ್ಕವಾದ್ಯ ನುಡಿಸಿದ ಖ್ಯಾತಿ. ಕೇಂದ್ರ ಸರ್ಕಾರದ ಶಿಷ್ಯವೇತನ ಪಡೆದು ಪದ್ಮ ಭೂಷಣ, ಸಂಗೀತಕಲಾ ನಿಧಿ ಡಾ. ಉಮಯಾಳಪುರಂ ಕೆ. ಶಿವರಾಮನ್‌ರವರ ಬಳಿ ಶಿಷ್ಯವೃತ್ತಿ ಮುಂದುವರಿಸಿದರು. ಜುಗಲ್‌ಬಂದಿ, ದ್ವಂದ್ವ ಕಚೇರಿ ಪ್ರಕಾರಗಳಲ್ಲಿಯೂ ಪರಿಣಿತರಾಗಿರುವವರು.

ತಬಲಾ ವಾದನದಲ್ಲಿ ಸಹಕರಿಸಲಿರುವ ಪಂ. ರವೀಂದ್ರ ಯಾವಗಲ್ ಅವರು ತಂದೆ ರಾಮಚಂದ್ರ ಯಾವಗಲ್ ಅವರ ಬಳಿ ತಬಲ ವಾದನದ ಪ್ರಾಥಮಿಕ ಶಿಕ್ಷಣ ಪಡೆದರು. ಅನಂತರ ಪಂ. ಶೇಷಗಿರಿ ಹಾನಗಲ್ ಅವರ ಬಳಿ ತರಬೇತಿ. ಇವರು ಕಿರಿಯ ವಯಸ್ಸಿನಲ್ಲಿಯೇ ಕುಂದಗೋಳದ ಸವಾಯಿ ಗಂಧರ್ವ ಮಹೋತ್ಸವದಲ್ಲಿ ಪಾಲ್ಗೊಂಡ ಹಿರಿಮೆ ಹೊಂದಿದ್ದಾರೆ. ಬೆಂಗಳೂರು ಆಕಾಶವಾಣಿಯಲ್ಲಿ ನಾಲ್ಕು ದಶಕಗಳಷ್ಟು ಕಾಲ ಸೇವೆ ಸಲ್ಲಿಸಿರುವರು. ದೇಶವಿದೇಶಗಳಲ್ಲಿ ಅಸಂಖ್ಯಾತ ಸಂಗೀತ ದಿಗ್ಗಜರಿಗೆ ಪಕ್ಕವಾದ್ಯ ಸಹಕಾರ ನೀಡಿರುವರು. ಏಕವ್ಯಕ್ತಿ ವಾದನದಲ್ಲೂ ನೈಪುಣ್ಯತೆ ಹೊಂದಿದ್ದಾರೆ.

# ಅಧಿಕಾರ ಹಸ್ತಾಂತರ ಜಂಜಾಟದಲ್ಲಿ ರಾಜ್ಯ ಸರ್ಕಾರ ಜನರ ಪಾಲಿಗೆ ಸತ್ತಿದೆ

## ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ



ಬೆಂಗಳೂರು, ಅ.3(ಕೆಎಂಶಿ)–ಅಧಿಕಾರ ಜಂಜಾಟದಲ್ಲಿ ಮುಳುಗುವ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರ ಜನರ ಪಾಲಿಗೆ ಬದುಕಿಲ್ಲ, ಸತ್ತಿದೆ ಎಂದು ವಿಧಾನಸಭೆಯ ವಿರೋಧಪಕ್ಷದ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.

ಕಳೆದ ಎರಡೂವರೆ ವರ್ಷಗಳಿಂದ ಸುದ್ದಿ ಮಾಧ್ಯಮಗಳಲ್ಲಿ ನಿರಂತರವಾಗಿ ಮುಖ್ಯಮಂತ್ರಿ ಬದಲಾವಣೆ, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ, ಡಾ.ಪರಮೇಶ್ವರ್ ಮುಖ್ಯಮಂತ್ರಿ, ಜಾರಕಿಹೊಳಿ ಮುಖ್ಯಮಂತ್ರಿ ಸುದ್ದಿಗಳು ಬರುತ್ತಿವೆ. ಇದನ್ನು ಯಾರಾದರೂ ಸರ್ಕಾರ ಎನ್ನುತ್ತಾರೆಯೇ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಅವರಿಗೆ ಸಾಮಾನ್ಯ ಜ್ಞಾನ ಮತ್ತು ಜವಾಬ್ದಾರಿ ಇದ್ದಿದ್ದರೆ ಅತಿವೃಷ್ಟಿಯಿಂದ ತೊಂದರೆಗೆ ಒಳಗಾದ ಪ್ರದೇಶಗಳಿಗೆ ತೆರಳಿ ಪ್ರವಾಹ ಸಂತ್ರಸ್ತರಿಗೆ ಸಮರೋಪಾದಿಯಲ್ಲಿ ಪರಿಹಾರ ಕಾರ್ಯ ಕೈಗೊಳ್ಳಬೇಕಿತ್ತು ಎಂದರು.

ಅತಿವೃಷ್ಟಿ ಪೀಡಿತ ಪ್ರದೇಶಗಳ ರೈತರು ಹಬ್ಬ ಆಚರಿಸಲಾಗದೆ ಬೀದಿಯಲ್ಲಿದ್ದಾರೆ. ಎಷ್ಟು ಮನೆಗಳು ಹಾನಿಯಾಗಿವೆ ಎಂಬ ಮಾಹಿತಿಯೂ ಮುಖ್ಯಮಂತ್ರಿ ಬಳಿ ಇಲ್ಲ, ಇದು ತುಘಲಕ್ ಸರ್ಕಾರ, ಇಂಥ ನೀಚ ಸರ್ಕಾರವನ್ನು ನೋಡಿಯೇ ಇಲ್ಲ.

ಈ ಹಿಂದಿನ ಬಿಜೆಪಿ ಆಡಳಿತದ ವಿರುದ್ಧ ಶೇ.40 ಕಮಿಷನ್ ಆರೋಪ ಮಾಡಿದ ಕಾಂಗ್ರೆಸ್, ಅಧಿಕಾರಕ್ಕೆ ಬಂದು ಅದಕ್ಕಿಂತ ದುಪ್ಪಟ್ಟು ಕಮಿಷನ್ ಪಡೆಯುವ ಸರ್ಕಾರ ಎಂಬುದಾಗಿ ಗುತ್ತಿಗೆದಾರರಿಂದಲೇ ಆರೋಪ ಹೊತ್ತಿದೆ. ಬೆಳೆ ಹಾನಿ ಕುರಿತು ಮುಖ್ಯಮಂತ್ರಿ ನೀಡಿದ ಅಂಕಿ–ಅಂಶವೂ ಅಪ್ಪಟ ಸುಳ್ಳು. ರೈತರು ಸಂಕಷ್ಟದಲ್ಲಿದ್ದರೆ, ಅತ್ತ ಆರಾಮವಾಗಿ ದಸರಾ ಉದ್ಘಾಟನೆ ನೆರವೇರಿಸಿ, ಸಂತೋಷ ಕೂಟದಲ್ಲಿ ಭಾಗಿಯಾಗಿ, ಐದು ವರ್ಷ ನಾನೇ ಮುಖ್ಯಮಂತ್ರಿ ಎಂದು ಹೇಳಿಕೊಳ್ಳುವುದರಲ್ಲೇ ನಿರತರಾಗಿದ್ದಾರೆ.

ಮುಖ್ಯಮಂತ್ರಿ ಗಾದಿಯಿಂದ ಯಾವಾಗ ಇಳಿತೀಯಪ್ಪ ಸಿದ್ದರಾಮಯ್ಯ ಎಂದು ಒಂದೆಡೆ ಕಾಂಗ್ರೆಸ್ ಶಾಸಕರೇ ಪ್ರಶ್ನಿಸುತ್ತಿದ್ದರೆ, ಇನ್ನೊಂದೆಡೆ, ರಂಗನಾಥ್, ಶಿವರಾಮೇಗೌಡ ಅವರಿಂದ ಹಿಡಿದು ಬಹಳಷ್ಟು ಶಾಸಕರು ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಹಸ್ತಾಂತರ ಯಾವಾಗ ಎಂದು ಕೇಳುತ್ತಿದ್ದಾರೆ ಎಂದರು.

# ಅ.14ರಿಂದ ಮೈಸೂರಲ್ಲಿ ಬೌದ್ಧ ಮಹಾ ಸಮ್ಮೇಳನ 'ಮಾನವ ಮೈತ್ರಿ'




ಮೈಸೂರು,ಅ.3(ಜಿಎ)–ಮೈಸೂರಿನಲ್ಲಿ ಕರ್ನಾಟಕ ರಾಜ್ಯ ಬಿಕ್ಕು ಸಂಘ, ರಾಜ್ಯ ಬೌದ್ಧ ಸಂಘ–ಸಂಸ್ಥೆ, ರಾಜ್ಯ ಅಂಬೇಡ್ಕರ್ ವಾದಿ ಸಂಘ–ಸಂಸ್ಥೆಗಳು ಮತ್ತು ವಿಶ್ವ ಮೈತ್ರಿ ಬುದ್ಧ ವಿಹಾರದ ವತಿಯಿಂದ ಅ.14, 15ರಂದು ಬೌದ್ಧ ಮಹಾ ಸಮ್ಮೇಳನ 'ಮಾನವ ಮೈತ್ರಿ' ಆಯೋಜಿಸಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸಮ್ಮೇಳನ ನಡೆಯಲಿದ್ದು, ಅ.14, 15ರಂದು 2 ದಿನಗಳು ಅಂತರ ರಾಷ್ಟ್ರೀಯ ಬೌದ್ಧ ಸಾಂಸ್ಕೃತಿಕ ಸಂಗಮದ ಮೂಲಕ 'ಮಾನವ ಮೈತ್ರಿಯ ಪಯಣವನ್ನು ಹಮ್ಮಿಕೊಂಡಿದ್ದು, ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ಬಿಕ್ಕುಗಳನ್ನು ಗೌರವಿಸಲಾಗುತ್ತದೆ ಎಂದರು.

ಧ್ಯಾನ, ಚಿಂತನೆ ಮತ್ತು ವಿಚಾರಗಳನ್ನೊಳಗೊಂಡ ಐತಿಹಾಸಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಅಂಬೇಡ್ಕರ್ ಅವರಂತೆ ದೇಶದಾದ್ಯಂತ ಬೌದ್ಧ ಚಿಂತನೆಗಳನ್ನು ಬಿತ್ತುತ್ತಾ ಸಾಗುತ್ತಿರುವ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಬಿಕ್ಕುಗಳು, ಧಮ್ಮ ಮಹಾ ಮಾತ್ರರು, ಬೌದ್ಧ ಚಿಂತಕರು ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಸಮ್ಮೇಳನಕ್ಕೆ ಎಐಸಿಸಿ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಆಹ್ವಾನಿಸಬೇಕಿತ್ತು. ಆದರೆ, ಅವರ ಅನಾರೋಗ್ಯದ ಕಾರಣ ಸಾಧ್ಯವಾಗಿಲ್ಲ. ಆರೋಗ್ಯ ಸರಿಯಾದರೆ ಅವರನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸುತ್ತೇವೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್ ಸೇರಿದಂತೆ ಎಲ್ಲಾ ಜನ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಮನೋರಖ್ಖಿತ ಭಂತೇಜಿ, ಬೋಧಿರತ್ನ ಭಂತೇಜಿ, ಡಾ.ಕಲ್ಯಾಣಸಿರಿ ಭಂತೇಜಿ, ಸುಗತಪಾಲ ಭಂತೇಜಿ ಮತ್ತಿತರರು ಉಪಸ್ಥಿತರಿದ್ದರು.

## ಅಭಿನಂದನೆ...




ಖಾಸಗಿ ಕಾರ್ಯಕ್ರಮ ನಿಮಿತ್ತ ಮೈಸೂರಿಗೆ ಆಗಮಿಸಿದ್ದ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರನ್ನು, ನಗರ ಬಿಜೆಪಿ ಅಧ್ಯಕ್ಷರೂ ಆದ ಮಾಜಿ ಶಾಸಕ ಎಲ್. ನಾಗೇಂದ್ರ, ಅವರು ಸ್ವಾಗತಿಸಿ, ಸನ್ಮಾನಿಸಿದರು. ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ, ಮಾಜಿ ಜಿಲ್ಲಾಧ್ಯಕ್ಷ ಎಸ್.ಡಿ.ಮಹೇಂದ್ರ, ಪರೀಕ್ಷಿತರಾಜೇ ಅರಸು ಇತರ ಮುಖಂಡರು ಉಪಸ್ಥಿತರಿದ್ದರು.

## ಸುದರ್ಶನ ಕ್ರಿಯೆ ಶಿಬಿರ

ಮೈಸೂರು, ಅ. 3– ಶ್ರೀ ರವಿಶಂಕರ್ ಅವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಅ. 7 ರಿಂದ 11 ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6 ರಿಂದ 8.30 ಹಾಗೂ ಸಂಜೆ 6 ರಿಂದ 8.30 ರವರೆಗೆ ಎರಡು ಅವಧಿಯಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9480476825, 9483589825 ಸಂಪರ್ಕಿಸಬಹುದು.

## ಅಭಿನಂದನೆ...



ವಿಶ್ವ ವಿಖ್ಯಾತ ಮೈಸೂರು ದಸರಾ ಉತ್ಸವದ ಜಂಬೂ ಸವಾರಿಗೆ ಆಗಮಿಸಿದ್ದ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಅವರನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಎಂಎಲ್ಸಿ ಶಿವಕುಮಾರ್, ರವಿ ಮಂಚೇಗೌಡನ ಕೊಪ್ಪಲು, ನಾಗೇಶ್ ಇದ್ದಾರೆ.

# ಬ್ಯಾಂಕಿಂಗ್, ಕೇಂದ್ರ ಸರ್ಕಾರದ ಹುದ್ದೆಗಳ ನೇಮಕಾತಿ ತರಬೇತಿ

ಮೈಸೂರು,ಅ.3– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವು ಬ್ಯಾಂಕಿಂಗ್ ಮತ್ತು ಕೇಂದ್ರ ಸರ್ಕಾರದ ಹುದ್ದೆಗಳ ನೇಮಕಾತಿ ಪರೀಕ್ಷೆಗಳಿಗೆ 50 ದಿನಗಳ ವಿಶೇಷ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದೆ. ಆಸಕ್ತರು ಅ.10ರೊಳಗಾಗಿ ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಲ್ಲಿ ತಮ್ಮ ಹೆಸರನ್ನು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯೊಳಗಾಗಿ ನೋಂದಾಯಿಸಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:0821–2515944/9964760090 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಎಸ್.ಕೆ ನವೀನ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶ್ರೀಗಳಿಂದ ಆಶೀರ್ವಾದ....



ದಸರಾ ಜಂಬೂ ಸವಾರಿ ದಿನ ಮೈಸೂರು ನಗರ ಕಾಂಗ್ರೆಸ್ ಉಪಾಧ್ಯಕ್ಷರಾದ ವಿಕ್ರಾಂತ್ ಪಿ.ದೇವೇಗೌಡ, ಮುಖಂಡರಾದ ಶಿವಮಲ್ಲು, ಸುತ್ತೂರು ಶ್ರೀಗಳ ಭೇಟಿ ಮಾಡಿ ಆಶೀರ್ವಾದ ಪಡೆದರು.

# ಕೈಲಾಸಂ – ಒಂದು ವಿಲಕ್ಷಣ ಪ್ರತಿಭೆ; ಚರ್ಚೆ

ಮೈಸೂರು, ಅ. 3– ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯ ವತಿಯಿಂದ 'ಕೈಲಾಸಂ – ಒಂದು ವಿಲಕ್ಷಣ ಪ್ರತಿಭೆ' ಚರ್ಚೆಯನ್ನು ಅ. 5 ರಂದು ಬೆಳಗ್ಗೆ 11 ಗಂಟೆಗೆ ಹಾರ್ಡ್ವಿಕ್ ಪಿಯು ಕಾಲೇಜು ಆವರಣದಲ್ಲಿರುವ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಕೈಲಾಸಂ ಕಳೆದ ಶತಮಾನದಲ್ಲಿ ಬದುಕಿದ್ದ ಅಸಾಮಾನ್ಯ ಪ್ರತಿಭಾವಂತ, ನಾಟಕಕಾರ, ನಟ ಹಾಗೂ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಬರೆದ ಅನನ್ಯ ಲೇಖಕ. ಆತ ತನ್ನ ನಾಟಕಗಳಲ್ಲಿ, ಬರಹಗಳಲ್ಲಿ ಬಿತ್ತಿದ ಪ್ರಶ್ನೆಗಳು ಇಂದಿಗೂ ಚರ್ಚೆ ರೂಪದಲ್ಲಿ ಅಸ್ತಿತ್ವದಲ್ಲಿದೆ. ಆತನ ಕೃತಿಗಳ ಮರು ಓದು ಮತ್ತು ಆತನ ನಾಟಕಗಳ ಪ್ರದರ್ಶನಗಳು ಇಂದಿನ ಅಗತ್ಯವೂ ಆಗಿದೆ.

ಚರ್ಚೆಯಲ್ಲಿ ಕೆ. ವೆಂಕಟರಾಜು, ಹಿರಿಯ ರಂಗಕರ್ಮಿ, ಶಾಂತಲಾ ಕಲಾವಿದರು, ಚಾಮರಾಜನಗರ, ಮಂಜುನಾಥ್ ಬಿ.ಆರ್, ಲೇಖಕರು, ಬೆಂಗಳೂರು, ಶಶಿಧರ ಡೋಂಗ್ರೆ, ನಾಟಕಕಾರರು, ಮೈಸೂರು ಹಾಗೂ ಪ್ರಸನ್ನ, ಹಿರಿಯ ರಂಗ ನಿರ್ದೇಶಕರು, ಹೆಗ್ಗೋಡು ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 9448871815

## ನಿಧನ

### ದಿನೇಶ್



ಮೈಸೂರು, ಅ.3– ಮೈಸೂರಿನ ಕೆ.ಜಿ.ಕೊಪ್ಪಲು–ಜಯನಗರ ನಿವಾಸಿ ಹಾಗೂ ಹಾವಿಡಿ ಎಳವಪ್ಪನವರ ಪುತ್ರ ದಿನೇಶ್ (55) ಇಂದು ಸಂಜೆ ನಿಧನರಾದರು. ಮೃತರು ಪತ್ನಿ ಶ್ರೀಮತಿ ಲಕ್ಷ್ಮೀ, ಪುತ್ರ ಚಂದ್ರು, ಪುತ್ರಿ ವಕೀಲರಾದ ಚಾಂದಿನಿ, ಸಹೋದರ ಬಸವರಾಜು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶನಿವಾರ) ಬೆಳಗ್ಗೆ 11 ಗಂಟೆಗೆ ಕೆ.ಜಿ.ಕೊಪ್ಪಲು ರುದ್ರಭೂಮಿ (ಕಾವೇರಿ ಶಾಲೆ ಪಕ್ಕ) ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಚಿಕ್ಕಣ್ಣೇಗೌಡ



ಮೈಸೂರು, ಅ.3– ಮೈಸೂರು ತಾಲೂಕು ಮೆಲ್ಲಹಳ್ಳಿ ಗ್ರಾಮಕ್ಕೆ ಸೇರಿದ ಹಳ್ಳಿಕೆರೆ ಹುಂಡಿಯ ಜಾಣಪ್ಪನ ಮಗ ಚಿಕ್ಕಣ್ಣೇಗೌಡ (85) ಇಂದು ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಇಬ್ಬರು ಪುತ್ರರು, ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶನಿವಾರ) ಬೆಳಗ್ಗೆ 10 ಗಂಟೆಗೆ ಸ್ವಗ್ರಾಮ ಹಳ್ಳಿಕೆರೆಹುಂಡಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮೈಸೂರಲ್ಲಿ ಗಾಂಧೀಜಿಯವರ ಸರ್ವಧರ್ಮ ಪ್ರಾರ್ಥನೆಯೊಂದಿಗೆ ಸ್ಮರಣೆ



ಗಾಂಧಿ ಜಯಂತಿ ಅಂಗವಾಗಿ ವಿವಿಧ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು ಅ.3(ಎಸ್‌ಪಿಎನ್)– ಮೈಸೂರಿನ ಟೌನ್ ಹಾಲ್‌ನಲ್ಲಿ ಜಿಲ್ಲಾಡಳಿತ, ಮೈಸೂರು ಮಹಾ ನಗರ ಪಾಲಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದೊಂದಿಗೆ ಗಾಂಧಿ ಜಯಂತಿ ಅಂಗವಾಗಿ ಪ್ರಾರ್ಥನಾ ಸಭೆಯನ್ನು ಗುರುವಾರ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ವಿವಿಧ ಧರ್ಮದ ಧರ್ಮ ಗುರುಗಳು ತಮ್ಮ ಧರ್ಮದ ಸಂದೇಶಗಳನ್ನು ಬೋಧನೆ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ತನ್ವೀರ್ ಸೇಠ್ ವಹಿಸಿದ್ದರು.

ಸ್ವಾಮಿ ಆಘರಾನಂದ ರಾಮಕೃಷ್ಣರಾವ್ ಅವರು, ಹಿಂದೂ ಧರ್ಮದ ಕುರಿತು ಪ್ರವಚನ ನೀಡಿದರೆ, ಸೂಫಿ ಸೂರಿ ಬಾಬಾ ಅವರು, ಇಸ್ಲಾಂ ಧರ್ಮ ಕುರಿತು ಪ್ರವಚನ ನೀಡಿದರು. ಜೈನ ಧರ್ಮದ ಪರವಾಗಿ ಸುರೇಶ್ ಕುಮಾರ್ ಜೈನ್ ಮಾತನಾಡಿದರೆ, ಸಿಖ್ ಧರ್ಮದ ಕುರಿತು ಸಾವನ್ ಸಿಂಗ್ ಮಾತನಾಡಿದರು. ಈ ವೇಳೆ ಆಯಾಯ ಧರ್ಮಗಳ ಕುರಿತು, ಗಾಂಧೀಜಿ ಅವರ ಅಭಿಪ್ರಾಯ ಕುರಿತು ಅಭಿಪ್ರಾಯ ಮಂಡಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಪ್ರೌಢಶಾಲೆ, ಪದವಿ ಪೂರ್ವ ಶಿಕ್ಷಣ ಹಾಗೂ ಪದವಿ, ಸ್ನಾತಕೋತ್ತರ ಪದವಿ ಮಟ್ಟದಲ್ಲಿ ಏರ್ಪಡಿಸಲಾಗಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಪ್ರೌಢಶಾಲಾ ವಿಭಾಗದಲ್ಲಿ ಬಿ.ಹೆಚ್.ಎಸ್ ಮೇದಿನಿ, ತಿ.ನರಸೀಪುರ ತಾಲೂಕಿನ ಸಿದ್ಧರಾಜು ಎಂಬುವವರು ಪ್ರಥಮ ಸ್ಥಾನಗಳಿಸಿದ್ದು, ರೂ.3 ಸಾವಿರ ನಗದು ಬಹುಮಾನ ನೀಡಲಾಯಿತು. ಕನಕಗಿರಿ ಸರ್ಕಾರಿ ಪ್ರೌಢಶಾಲೆ (ಆರ್‌ಎಮ್‌ಎಸ್‌ಎ)ಯ ಭೂಮಿಕ ದ್ವಿತೀಯ ಸ್ಥಾನಗಳಿಸಿ, 2 ಸಾವಿರ ನಗದು ಬಹುಮಾನ ನೀಡಿದರು. ಮೈಸೂರು ಜಿಲ್ಲೆ ಪುಟ್ಟೇಗೌಡನ ಹುಂಡಿ ಸರ್ಕಾರಿ ಶಾಲೆಯ ಆರ್.ಸಹನ ತೃತೀಯ ಸ್ಥಾನಗಳಿಸಿ, ಸಾವಿರ ರೂ. ನಗದು ಬಹುಮಾನ ಸ್ವೀಕರಿಸಿದರು.

ಪದವಿ ಪೂರ್ವ ಶಿಕ್ಷಣ ವಿಭಾಗದಲ್ಲಿ ಮರಿಮಲ್ಲಪ್ಪ ಕಾಲೇಜಿನ ವಿದ್ಯಾರ್ಥಿನಿ ನಕ್ಷತ್ರ ಪ್ರಥಮ ಸ್ಥಾನ ಗಳಿಸಿ, 3 ಸಾವಿರ, ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿ ಧನಲಕ್ಷ್ಮಿ ದ್ವಿತೀಯ ಸ್ಥಾನ ಗಳಿಸಿ, 2 ಸಾವಿರ, ಅನಿಕೇತನ ಪದವಿ ಪೂರ್ವ ಕಾಲೇಜಿನ ಶ್ರಾವ್ಯ ತೃತೀಯ ಸ್ಥಾನ ಗಳಿಸಿ, ಸಾವಿರ ರೂ., ನಗದು ಬಹುಮಾನ ಪಡೆದರು.

ಪದವಿ/ಸ್ನಾತಕೋತ್ತರ ಪದವಿ ವಿಭಾಗದಲ್ಲಿ ಸಿದ್ಧಾರ್ಥ ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ಸೃಷ್ಟಿ ಪ್ರಥಮ ಸ್ಥಾನ ಗಳಿಸಿ, 3 ಸಾವಿರ, ನಂಜನಗೂಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ಎಸ್.ಮಮತ ದ್ವಿತೀಯ ಸ್ಥಾನಗಳಿಸಿ 2 ಸಾವಿರ ಹಾಗೂ ಮಹಾರಾಣಿ ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿ ಪ್ರಕೃತಿ ತೃತೀಯ ಸ್ಥಾನ ಹಾಗೂ ಸಾವಿರ ರೂ.ಬಹುಮಾನ ಪಡೆದರು. ಈ ವೇಳೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕ ವಿನೋದ್ ಚಂದ್ರ ಇತರರಿದ್ದರು.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**4.10.2025 ಶನಿವಾರ, ಮಳೆ ನಕ್ಷತ್ರ: ಹಸ್ತ 27.09.2025 ರಿಂದ 10.10.2025**
**ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ,**
**ತಿಥಿ: ದ್ವಾದಶಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ**

■ **ಶ್ರೀ ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ದ್ವಾದಶಿ, ಬೆಳಗ್ಗೆ ತೀರ್ಥಸ್ನಾನ, ಉತ್ಸವ, ಸಾಯಂಕಾಲ ಧ್ವಜ ಅವರೋಹಣ ಉತ್ಸವ, ಸ್ಥಳ: ದೇವಸ್ಥಾನದ ಪ್ರಾಂಗಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ : ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6.30 ರಿಂದ.

■ **ಶೃಂಗೇರಿ ಶ್ರೀ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025, ದ್ವಾದಶಿ, ಶ್ರೀ ಸ್ವರ್ಣಕವಚ ಅಲಂಕಾರ, ನವಗ್ರಹ ಸಹಿತ ಮೃತ್ಯುಂಜಯ ಹೋಮ, ಸ್ಥಳ: ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ, ಬೆಳಗ್ಗೆಯಿಂದ.

■ **ವಾಲಿ ಫೌಂಡೇಷನ್ :** ಜಶ್ನೇ ಗೌಸ್ ಉಲ್ ವಾರಾ ಆಚರಣೆ, ಸ್ಥಳ: ಮೀಲಾದ್ ಬಾಗ್ ಸರ್ಕಲ್‌ನಿಂದ, ಬೆಳಗ್ಗೆ 9ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ, ಗರ್ಭಸಂಸ್ಕಾರ ಉಚಿತ ತಪಾಸಣಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್. ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10ರಿಂದ.

■ **ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್:** ದಸರಾ ಕೇಕ್ ಶೋ, ಸ್ಥಳ: ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್, ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.

■ **ಸರ್ಕಾರ್ ಮೆಹಬೂಬ್ ಎ–ಸುಭಾನಿ ಫೌಂಡೇಷನ್ :** ಜುಲೂಸ್ ಗೌಸಿಯಾ ಮೆರವಣಿಗೆ, ಸ್ಥಳ: ಮೀಲಾದ್ ಬಾಗ್ ಸರ್ಕಲ್‌ನಿಂದ, ಮಧ್ಯಾಹ್ನ 2.45ಕ್ಕೆ.

■ **ಮೈಸೂರು ಬೊಂಬೆ ರಂಗ ಮಂದಿರ:** ಮೈಸೂರು ಬೊಂಬೆ ಪ್ರದರ್ಶನ, ಸ್ಥಳ: ಮೈಸೂರು ಪಪ್ಪೆಟ್ ಥಿಯೇಟರ್, ಮೃಗಾಲಯದ ಎದುರು, ಸಂಜೆ 4.30ರಿಂದ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 900, ಕಥೆ ಹೇಳುವವರು: ಶ್ರೀಮತಿ ಸುಮಾ ರಾಜಕುಮಾರ್, ಮೈಸೂರಿನ ಪ್ರಪ್ರಥಮ ಮಹಿಳಾ ಜಾದೂಗಾರ್ತಿ ಹಾಗೂ ಮಾತನಾಡುವ ಗೊಂಬೆ ಕಲಾವಿದೆ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಪರಮಹಂಸಾನಂದ ಅವರಿಂದ ಡಿಸಿಪಲ್ಸ್ ಅಂಡ್ ಡೆವೋಟೀಸ್ ಆಫ್ ಶ್ರೀರಾಮಕೃಷ್ಣ ಆಶ್ರಮ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್.ಶೇಷಗಿರಿರಾವ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ–ಡಾ. ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ–ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ. ಶಾಂತಕುಮಾರ್, 9.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ – ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲೂಕು ಭೀಮ್ ನಗರದ ಕೆ. ಗೌರಮ್ಮ ಮತ್ತು ಸಂಗಡಿಗರಿಂದ ಸರಸ್ವತಿ ಹಾಡು ಮತ್ತು ಮಾರಮ್ಮನ ಹಾಡು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿಹಾಡು, ಭಾಗವಹಿಸುತ್ತಾರೆ–ಚಾಮರಾಜನಗರ ಜಿಲ್ಲೆ, ಸಿದ್ಧಯ್ಯನ ಪುರದ ಭಾಗ್ಯಮ್ಮ ಮತ್ತು ಸಂಗಡಿಗರಿಂದ, ಪ್ರಸ್ತುತಿ–ಡಾ. ಮೈಸೂರು ಉಮೇಶ್, 3.30 ಮಕ್ಕಳ ಮಂಟಪ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ) ಹಿರಿಯ ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪ ಅವರೊಂದಿಗೆ ಡಾ.ಪ್ರಧಾನ ಗುರುದತ್ತ ಹಾಗೂ ಎಂ.ಎಸ್.ಕೆ. ಪ್ರಭು ಅವರು ನಡೆಸಿದ್ದ ಸಂವಾದದ ಎರಡನೇ ಭಾಗ, 6.50 ಕೃಷಿರಂಗ :ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಬೇಸಾಯದ ಪ್ರಾಮುಖ್ಯತೆ ಕುರಿತು ಸಂವಾದ, ಭಾಗವಹಿಸುತ್ತಾರೆ– ಪಾಂಡವಪುರ ತಾಲೂಕು, ಚಿನಕುರಳಿ ಹೋಬಳಿ ರಾಗಿಮುದ್ದನಹಳ್ಳಿ ಗ್ರಾಮದ ಕೃಷಿಕ ದಂಪತಿ ಎಂ. ಪಿ. ಜಯರಾಮೇಗೌಡ ಹಾಗೂ ಎಂ. ಹೆಚ್.ಶ್ರೀಮತಿ, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

## ದೈನಂದಿನ ಆಕರ್ಷಣೆಗಳು

| | |
|---|---|
| **ಮ. 1, 4 ಮತ್ತು ಸಂಜೆ 7** | : ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿ ಕೆರೆ ಸಮೀಪ (3 ಪ್ರದರ್ಶನ) |
| **ಸಂಜೆ 6,7,8 ಮತ್ತು ರಾ.9** | : ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ– ದಿನ 4 ಟ್ರಿಪ್), |
| **ಬೆ. 10 ರಿಂದ 5** | : ದಸರಾ ಛಾಯಾಚಿತ್ರ ಪ್ರದರ್ಶನ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ |
| **ಬೆ. 10 ರಿಂದ** | : ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ. |
| **ಬೆ. 10 ರಿಂದ 10 ರವರೆಗೆ** | : ದಸರಾ ವಸ್ತುಪ್ರದರ್ಶನ. |

# ಮೈಸೂರು ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಮಾಲಿನ್ಯ ನಿಯಂತ್ರಣ ಮಳಿಗೆ ಉದ್ಘಾಟನೆ

## ಮಾಲಿನ್ಯ ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳು ಎರಡು ತಿಂಗಳಲ್ಲಿ ಭರ್ತಿ; ಮಂಡಳಿ ಅಧ್ಯಕ್ಷ ನರೇಂದ್ರ ಸ್ವಾಮಿ ಘೋಷಣೆ

ಮೈಸೂರು,ಅ.3(ಎಸ್‌ಪಿಎನ್)– ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಶೇ.80ರಷ್ಟು ಖಾಲಿ ಇರುವ ಹುದ್ದೆಗಳನ್ನು ಇನ್ನೆರಡು ತಿಂಗಳಲ್ಲಿ ಭರ್ತಿ ಮಾಡಲು ಕ್ರಮವಹಿಸಲಾಗುವುದು ಎಂದು ಮಂಡಳಿಯ ಅಧ್ಯಕ್ಷ ಪಿ.ಎಂ.ನರೇಂದ್ರ ಸ್ವಾಮಿ ಅಭಿಪ್ರಾಯಪಟ್ಟರು.

ದಸರಾ ಮಹೋತ್ಸವ ಅಂಗವಾಗಿ ಏರ್ಪಡಿಸಿರುವ ದಸರಾ ವಸ್ತು ಪ್ರದರ್ಶನದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಳಿಗೆ ಉದ್ಘಾಟಿಸಿ ಮಾತನಾಡಿದ ಅಧ್ಯಕ್ಷರು, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಬಹುತೇಕ ಹುದ್ದೆಗಳು ಖಾಲಿಯಿವೆ. ಹೀಗಾಗಿ ಸರ್ಕಾರ ರೂಪಿಸಿದ ಜನ ಪ್ರಿಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾಧ್ಯವಾಗುತ್ತಿಲ್ಲ. ಈ ಸಂಗತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವರಿಕೆ ಮಾಡಿ ಕೊಟ್ಟಿರುವ ಹಿನ್ನಲೆಯಲ್ಲಿ ಸಿಬ್ಬಂದಿ ಮತ್ತು ಅಧಿಕಾರಿಗಳ ನೇಮಕಕ್ಕೆ ಅನುಮತಿ ನೀಡಿದ್ದಾರೆ. ಹಾಗಾಗಿ ಇನ್ನೆರಡು ತಿಂಗಳಲ್ಲಿ ಶೇ.80 ರಷ್ಟು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು.

ಪ್ಲಾಸ್ಟಿಕ್ ನಿಯಂತ್ರಣ ವಿಚಾರದಲ್ಲಿ ನಮ್ಮ ಮಂಡಳಿ ಸಾಕಷ್ಟು ಶ್ರಮವಹಿಸುತ್ತಿದೆ. ಆದರೆ, ಪ್ಲಾಸ್ಟಿಕ್ ಮುಕ್ತ ರಾಜ್ಯವಾಗಿಸಲು ಶೇ.100ರಷ್ಟು ಸಿಬ್ಬಂದಿಯ ಕೊರತೆಯಿದೆ. ಈ ನಿಟ್ಟಿನಲ್ಲಿ ಸಿಬ್ಬಂದಿಯ ನೇಮಕಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಅನುಮತಿ ಪಡೆದು ಮುಂದಿನ ಪ್ರಕ್ರಿಯೆಗಳು ನಡೆಯುತ್ತಿದೆ ಎಂದರಲ್ಲದೆ, ಆದಾಗ್ಯೂ ಪ್ಲಾಸ್ಟಿಕ್ ನಿಯಂತ್ರಣ ವಿಚಾರದಲ್ಲಿ ಮಂಡಳಿ ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಹೇಳಿದರು.



ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಳಿಗೆಯನ್ನು ನರೇಂದ್ರ ಸ್ವಾಮಿ ಉದ್ಘಾಟಿಸಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಮಾಜಿ ಪ್ರಧಾನಿ ಇಂದಿರಾಗಾಂಧಿಯವರ ಒತ್ತಾಸೆ ಮೇರೆಗೆ ಜಲ, ವಾಯು ಹಾಗೂ ಶಬ್ಧ ಮಾಲಿನ್ಯ ತಡೆಗಟ್ಟಲು ಈ ಮಂಡಳಿಯನ್ನು ಸ್ಥಾಪಿಸಲಾಯಿತು. ಇದು 1974ರ ಜಲ(ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ ಸೆಕ್ಷನ್ 4ರ ಅಡಿಯಲ್ಲಿ ಸ್ಥಾಪಿಸಲಾಯಿತು. 1981ರಲ್ಲಿ ವಾಯ ಮಾಲಿನ್ಯ ತಡೆಗಟ್ಟಲು ಕಾಯ್ದೆ ರೂಪಿಸಿ, 1985ರಲ್ಲಿ ಈ ಮಂಡಳಿಯನ್ನು ಪುನರ್ ರಚಿಸಲಾಯಿತು ಎಂದು ಮಾಹಿತಿ ನೀಡಿದರು.

ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಒತ್ತಾಸೆ ಮೇರೆಗೆ ಡೀಮ್ಡ್ ಫಾರಿಸ್ಟ್, ಟೈಗರ್ ಪ್ರಾಜೆಕ್ಟ್, ಆನೆ ಕಾರಿಡಾರ್ ಸೇರಿದಂತೆ ಹಲವು ಪ್ರಾಣಿ ಸಂಪತ್ತು ಹಾಗೂ ಪರಿಸರ ಉಳಿಸುವ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ. ನಮ್ಮ ವಿರೋಧಿಗಳು ಕಾಂಗ್ರೆಸ್ ಸರ್ಕಾರ ಏನು ಮಾಡಿದೆ ಎಂದು ದಿನನಿತ್ಯ ಮಾಧ್ಯಮಗಳಲ್ಲಿ ಆರೋಪ ಮಾಡುತ್ತಾರೆ. ಆದರೆ, ಈ ದೇಶ ಕಟ್ಟುವಲ್ಲಿ ಕಾಂಗ್ರೆಸ್ ಮಹತ್ವ ಸ್ಥಾನ ಪಡೆದುಕೊಂಡಿದೆ ಎಂದು ಉದಾಹರಣೆ ಸಮೇತ ವಿವರಿಸಿದರು.

ಪ್ರತಿಯೊಬ್ಬ ಕಾಲೇಜು ವಿದ್ಯಾರ್ಥಿಗಳು ಪರಿಸರ ರಕ್ಷಣೆ ವಿಚಾರದಲ್ಲಿ ಪಾಲ್ಗೊಳ್ಳಬೇಕು. ಈ ನಿಟ್ಟಿನಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಈ ಬಾರಿ ವಸ್ತು ಪ್ರದರ್ಶನ ಆವರಣದಲ್ಲಿ ಮಳಿಗೆ ಸ್ಥಾಪಿಸಿ, ಪ್ರದರ್ಶನ ಏರ್ಪಡಿಸಲಾಗಿದ್ದು, ದಸರಾ ವಸ್ತು ಪ್ರದರ್ಶನ ಆವರಣಕ್ಕೆ ಆಗಮಿಸುವ ಯುವಕ, ಯುವತಿಯರು ಈ ಮಳಿಗೆಗೂ ಭೇಟಿ ನೀಡಿ, ಪರಿಸರ ಸಂಬಂಧಿಸಿದ ವಿಚಾರ ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

**35 ನಿಮಿಷ ಕತ್ತಲಲ್ಲಿ ಕುಳಿತ ಅಧ್ಯಕ್ಷರು:** ಸಿಎಂ ಸಿದ್ದರಾಮಯ್ಯನವರು ದೀಪಾಲಂಕಾರ ವೀಕ್ಷಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದ ಹಿನ್ನಲೆಯಲ್ಲಿ ಅರಮನೆ ಸುತ್ತಮುತ್ತ ಟ್ರಾಫಿಕ್ ಉಂಟಾಗಿತ್ತು. ಇದರ ಬಿಸಿ ಮಂಡಳಿ ಅಧ್ಯಕ್ಷ ನರೇಂದ್ರ ಸ್ವಾಮಿ ಅವರಿಗೂ ತಟ್ಟಿತು. ಕಾರ್ಯಕ್ರಮದ ಸ್ಥಳಕ್ಕೆ ಆಗಮಿಸಲು ಹರಸಾಹಸ ಪಡಬೇಕಾಯಿತು. ಆದರೆ, ಕಾರ್ಯಕ್ರಮ ನಡೆಯುತ್ತಿದ್ದ ಸ್ಥಳದಲ್ಲಿ ತಾಂತ್ರಿಕ ಸಮಸ್ಯೆಯಿಂದಾಗಿ ಸುಮಾರು 35 ನಿಮಿಷಗಳ ಕಾಲ ವಿದ್ಯುತ್ ಇಲ್ಲದೆ, ಅಧ್ಯಕ್ಷ ನರೇಂದ್ರ ಸ್ವಾಮಿ ಅವರು ಕತ್ತಲಲ್ಲೇ ಕುಳಿತುಕೊಳ್ಳುವ ಅನಿವಾರ್ಯತೆ ಎದುರಾಯಿತು. ಬಳಿಕ ಅಧಿಕಾರಿಗಳು, ಜನರೇಟರ್ ಮೂಲಕ ವಿದ್ಯುತ್ ಕಲ್ಪಿಸಿ, ಅಧ್ಯಕ್ಷ ನರೇಂದ್ರ ಸ್ವಾಮಿ ಅವರಿಂದ ಕಾರ್ಯಕ್ರಮ ಉದ್ಘಾಟನೆ ಮಾಡಿಸಿದ ಪ್ರಸಂಗವೂ ಜರುಗಿತು.

ಈ ವೇಳೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿ ಲಿಂಗರಾಜು, ಮುಖ್ಯ ಪರಿಸರಾಧಿಕಾರಿ ವಿಜಯ್‌ಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ರುದ್ರೇಶ್, ರೇಖಾ ಉಪಸ್ಥಿತರಿದ್ದರು.

# ಅಡುಗೆ ಮಾಡಿಲ್ಲವೆಂದು ತಾಯಿಯನ್ನೇ ಕೊಂದ ಮಗ

ಹಾಸನ, ಅ.3–ಅಡುಗೆ ಮಾಡಿಲ್ಲ ಎಂಬ ಕ್ಷುಲ್ಲಕ ಕಾರಣಕ್ಕೆ ತಾಯಿ ಮತ್ತು ಮಗನ ನಡುವೆ ಶುರುವಾದ ಜಗಳ ಕೊನೆಗೆ ತಾಯಿಯ ಕೊಲೆಯಲ್ಲಿ ಅಂತ್ಯಗೊಂಡಿರುವ ಭೀಕರ ಘಟನೆ ಹಾಸನ ಜಿಲ್ಲೆ ಆಲೂರು ತಾಲೂಕಿನ ಕದಾಳು ಚನ್ನಾಪುರ ಗ್ರಾಮದಲ್ಲಿ ನಡೆದಿದೆ.



ಸಂತೋಷ

ಕೊಲೆಯಾದ ತಾಯಿಯನ್ನು ಪ್ರೇಮಾ (45) ಎಂದು ಗುರುತಿಸಲಾಗಿದೆ. ಈಕೆಯ ಮಗ ಸಂತೋಷ (19) ಗುರುವಾರ ರಾತ್ರಿ ಕಂಠಪೂರ್ತಿ ಕುಡಿದು ಮನೆಗೆ ಬಂದಿದ್ದ. ಮನೆಗೆ ಬಂದವನೇ ಅಡುಗೆ ಮಾಡದ ವಿಚಾರಕ್ಕೆ ತಾಯಿ ಪ್ರೇಮಾ ಅವರೊಂದಿಗೆ ಜಗಳ ಶುರು ಮಾಡಿದ್ದಾನೆ. ಮಾತಿಗೆ ಮಾತು ಬೆಳೆದು ಜಗಳ ತಾರಕಕ್ಕೇರಿದೆ. ಈ ವೇಳೆ ಉದ್ರೇಕಗೊಂಡ ಸಂತೋಷನು ಮನೆಯಲ್ಲಿದ್ದ ದೊಣ್ಣೆಯಿಂದ ತಾಯಿ ಪ್ರೇಮಾ ಅವರ ತಲೆಗೆ ಬಲವಾಗಿ ಹೊಡೆದಿದ್ದಾನೆ.

ಇದರಿಂದ ತೀವ್ರವಾಗಿ ಗಾಯಗೊಂಡ ಪ್ರೇಮಾ ಅವರನ್ನು ಕುಟುಂಬಸ್ಥರು ಚಿಕಿತ್ಸೆಗಾಗಿ ಹಾಸನ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ದುರದೃಷ್ಟವಶಾತ್ ಚಿಕಿತ್ಸೆ ಫಲಕಾರಿಯಾಗದೆ ಪ್ರೇಮ ಅವರು ಇಂದು ಸಾವನ್ನಪ್ಪಿದ್ದಾರೆ.

ಕೇವಲ ಅಡುಗೆ ವಿಚಾರವಾಗಿ ಶುರುವಾದ ಜಗಳ ಈ ಮಟ್ಟಕ್ಕೆ ಹೋಗಿ ತಾಯಿಯ ಜೀವವನ್ನೇ ತೆಗೆದಿರುವುದು ಇಡೀ ಗ್ರಾಮದಲ್ಲಿ ಆಘಾತ ಮೂಡಿಸಿದೆ. ಸಂತೋಷನ ಕೃತ್ಯಕ್ಕೆ ಆತನ ಮದ್ಯಪಾನ ಕಾರಣ ಎಂದು ಸ್ಥಳೀಯರು ತಿಳಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಯುವಕರಲ್ಲಿ ಮದ್ಯಪಾನ ಮತ್ತು ಕ್ಷುಲ್ಲಕ ಕಾರಣಗಳಿಗೆ ಹಿಂಸಾಚಾರ ಹೆಚ್ಚುತ್ತಿರುವುದು ಇಂತಹ ಭೀಕರ ದುರಂತಗಳಿಗೆ ಕಾರಣವಾಗುತ್ತಿದೆ. ಘಟನೆ ನಡೆದ ತಕ್ಷಣವೇ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಘಟನೆ ಆಲೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಪೊಲೀಸರು ಸಂತೋಷನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

## 11 ಮಕ್ಕಳ ಸತತ ಸಾವಿನ ಬೆನ್ನಲ್ಲೇ ಕೇಂದ್ರದ ಎಚ್ಚರಿಕೆ

# ಎರಡು ವರ್ಷ ಮಕ್ಕಳಿಗೆ ಕಾಫ್ ಸಿರಪ್ ನೀಡಬೇಡಿ

ನವದೆಹಲಿ, ಅ.3– ಭಾರತದಲ್ಲಿ ಮಕ್ಕಳಿಗೆ ನೀಡುವ ಕಾಫ್ ಸಿರಪ್ ಔಷಧಿ ಕುರಿತು ಭಾರಿ ಆತಂಕ ಎದುರಾಗಿದೆ. ಮಧ್ಯಪ್ರದೇಶ ಹಾಗೂ ರಾಜಸ್ಥಾನದಲ್ಲಿ ಒಟ್ಟು 11 ಮಕ್ಕಳು ಮೃತಪಟ್ಟ ಘಟನೆ ದೇಶವನ್ನೇ ಬೆಚ್ಚಿಬೀಳಿಸಿದೆ. ಕಾಫ್ ಸಿರಪ್ ಸೇವಿಸಿ ಮಕ್ಕಳು ಮೃತಪಟ್ಟಿದ್ದಾರೆ ಎಂಬ ಗಂಭೀರ ಆರೋಪ ಕುರಿತು ತನಿಖೆ ನಡೆಯುತ್ತಿದೆ. ಇದರ ಬೆನ್ನಲ್ಲೇ ಅವಾಂತರ ತಪ್ಪಿಸಲು ಕೇಂದ್ರ ಸರ್ಕಾರ ಮಾರ್ಗಸೂಚಿ ಪ್ರಕಟಿಸಿ, 2 ವರ್ಷದೊಳಗಿನ ಮಕ್ಕಳಿಗೆ ಕಾಫ್ ಸಿರಪ್ ನೀಡಬೇಡಿ ಎಂದು ಎಚ್ಚರಿಕೆ ನೀಡಿದೆ. ಇಷ್ಟೇ ಅಲ್ಲ ಐದು ವರ್ಷದೊಳಗಿನ ಮಕ್ಕಳಿಗೆ ಕಾಫ್ ಸಿರಪ್ ನೀಡುವಾಗ ಎಚ್ಚರಿಕೆ ವಹಿಸುವಂತೆ ಸೂಚಿಸಿದೆ. ವೈದ್ಯರ ಪ್ರಿಸ್ಕ್ರಿಪ್ಷನ್, ಸೂಚನೆ ಇಲ್ಲದೆ ಔಷಧಿ ಕೇಂದ್ರಗಳಿಂದ ಸಿರಪ್ ಪಡೆದು ಮಕ್ಕಳಿಗೆ ನೀಡಬೇಡಿ ಎಂದು ಮಾರ್ಗಸೂಚಿಯಲ್ಲಿ ಸ್ಪಷ್ಟವಾಗಿ ಸೂಚಿಸಿದೆ.



ಕಿಡ್ನಿ ವೈಫಲ್ಯದಿಂದ 11 ಮಕ್ಕಳು ಮೃತಪಟ್ಟ ಘಟನೆ ಬೆನ್ನಲ್ಲೇ ಕೇಂದ್ರ ಆರೋಗ್ಯ ಇಲಾಖೆ ಸಭೆ ಸೇರಿ ಮಹತ್ವದ ನಿರ್ಧಾರ ತೆಗೆದುಕೊಂಡಿದೆ. 2 ವರ್ಷದ ಮಕ್ಕಳಿಗೆ ಶೀತ, ಕೆಮ್ಮಿಗೆ ಸಿರಪ್ ನೀಡದಂತೆ ಎಚ್ಚರಿಕೆ ನೀಡಿದೆ. ಶೀತ, ಕೆಮ್ಮು ಇದ್ದರೆ ಮೊದಲೈ ಹೈಡ್ರೇಷನ್, ವಿಶ್ರಾಂತಿ ಮೊದಲ ಆದ್ಯತೆಯಾಗಿರಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ. ಕಾಫ್ ಸಿರಪ್ ಬಗ್ಗೆ ಎಲ್ಲಾ ಜಿಲ್ಲಾ, ನಗರ, ತಾಲೂಕು, ಪಾಲಿಕೆ ಆಸ್ಪತ್ರೆಗಳಲ್ಲಿ ಅಗತ್ಯ ಕ್ರಮ ವಹಿಸಲು ಸೂಚನೆ ನೀಡಲಾಗಿದೆ.

ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಕೇಂದ್ರ ಆರೋಗ್ಯ ಇಲಾಖೆ ಸೂಚಿಸಿದೆ. ಮಕ್ಕಳಿಗೆ ಔಷದಿ ನೀಡುವಾಗ ಅತೀವ ಎಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ. ವೈದ್ಯರ ಸಲಹೆ ಹಾಗೂ ಸೂಚನೆಗಳನ್ನು ತಪ್ಪದೇ ಪಾಲಿಸುವಂತೆ ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

**ಕಿಡ್ನಿ ವಿಫಲ ಅಂಶ ಪತ್ತೆಯಾಗಿಲ್ಲ:** 11 ಮಕ್ಕಳು ಮರಣೋತ್ತರ ಪರೀಕ್ಷೆಯಲ್ಲಿ ಕಿಡ್ನಿ ವೈಫಲ್ಯ ಪತ್ತೆಯಾಗಿದೆ. ಆದರೆ ಈ ಮಕ್ಕಳು ಸೇವಿಸಿದ ಸಿರಪ್‌ನಲ್ಲಿ ಕಿಡ್ನಿ ವೈಫಲ್ಯವಾಗುವ DEG ಹಾಗೂ EG ಅಂಶಗಳು ಪತ್ತೆಯಾಗಿಲ್ಲ. ಸಿರಪ್‌ನಲ್ಲಿ DEG ಹಾಗೂ EG ಅಂಶಗಳಿದ್ದರೆ ಕಿಡ್ನಿ ವೈಫಲ್ಯಕ್ಕೆ ಕಾರಣವಾಗಬಲ್ಲದು. ವೈದ್ಯರ ಸೂಚಿಸದ ಔಷಧಿಗಳನ್ನು ಮಕ್ಕಳಿಗೆ ನೀಡುವುದು ಗಂಭೀರ ಪರಿಣಾಮ ಸೃಷ್ಟಿಸಲಿದೆ ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

**ಮಕ್ಕಳ ಸಾವಿನ ಕುರಿತು ತೀವ್ರಗೊಂಡ ತನಿಖೆ:** ಕೇಂದ್ರ ಆರೋಗ್ಯ ಇಲಾಖೆ, ನ್ಯಾಷನಲ್ ಸೆಂಟರ್ ಫಾರ್ ಡೀಸೀಸ್ ಕಂಟ್ರೋಲ್ (NCDC), NIV, ಸೆಂಟ್ರಲ್ ಡ್ರಗ್ಸ್ ಸ್ಟಾಂಡರ್ಡ್ ಕಂಟ್ರೋಲ್ ಆರ್ಗನೈಸೇಶನ್(CDSCO) ಜಂಟಿಯಾಗಿ ತನಿಖೆ ನಡೆಸುತ್ತಿದೆ. ಮಕ್ಕಳ ಸಾವಿನ ಕುರಿತು ವೈದ್ಯಕೀಯ ವರದಿಗಳನ್ನು ಮುಂದಿಟ್ಟು ವೈದ್ಯರ ತಂಡ ಮಹತ್ವದ ಚರ್ಚೆ ನಡೆಸಿದೆ. ಎಲ್ಲಾ ರಾಜ್ಯಗಳ ಆರೋಗ್ಯ ಕೇಂದ್ರಗಳು ಈ ಕುರಿತು ತೀವ್ರ ಎಚ್ಚರಿಕೆ ವಹಿಸುವಂತೆ ಸೂಚಿಸಿದೆ.

# ನಾಳೆ ಸುಧರ್ಮಾ ಸಂಸ್ಕೃತ ದಿನ ಪತ್ರಿಕೆಯ 56ನೇ ವಾರ್ಷಿಕೋತ್ಸವ

## ಸುಧರ್ಮ ವಾರ್ಷಿಕ ವಿಶೇಷ ಸಂಚಿಕೆ 'ದಿ ಸಾಗ ಆಫ್ ಸುಧರ್ಮ' ಪುಸ್ತಕ ಲೋಕಾರ್ಪಣೆ

ಮೈಸೂರು,ಅ.3(ಜಿಎ)– ಸುಧರ್ಮಾ ಸಂಸ್ಕೃತ ದಿನಪತ್ರಿಕೆಯ 56ನೇ ವಾರ್ಷಿಕೋತ್ಸವದ ಅಂಗವಾಗಿ ಅ.5ರಂದು ಸುಧರ್ಮಾ ವಾರ್ಷಿಕ ವಿಶೇಷ ಸಂಚಿಕೆ ಹಾಗೂ 'ದಿ ಸಾಗ ಆಫ್ ಸುಧರ್ಮ' ಪುಸ್ತಕ ಲೋಕಾರ್ಪಣೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸುಧರ್ಮಾ ಸಂಸ್ಕೃತ ದಿನಪತ್ರಿಕೆಯ ಸಂಪಾದಕರಾದ ಜಯಲಕ್ಷ್ಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷ್ಣಮೂರ್ತಿಪುರಂನಲ್ಲಿರುವ ಬಿಎಸ್‌ಎಸ್ ವಿದ್ಯೋದಯ ಶಾಲೆಯ ಆವರಣದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಲೇಖಕ ಕೂಡ್ಲಿ ಗುರುರಾಜ್ ಬರೆದಿರುವ ಎಸ್.ನಟರಾಜ್ ಅನುವಾದಿಸಿರುವ ದಿ ಸಾಗ ಆಫ್ ಸುಧರ್ಮ ಪುಸ್ತಕ ಹಾಗೂ ಸುಧರ್ಮಾ ವಾರ್ಷಿಕ ವಿಶೇಷ ಸಂಚಿಕೆಯನ್ನು ಪದ್ಮಶ್ರೀ ಪುರಸ್ಕೃತರಾದ ಡಾ.ವಿಜಯ ಸಂಕೇಶ್ವರ್ ಅವರು ಲೋಕಾರ್ಪಣೆಗೊಳಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್.ಶ್ರೀವತ್ಸ ಎಂಎಲ್‌ಸಿ, ಪತ್ರಕರ್ತರೂ ಆದ ಎಂಎಲ್‌ಸಿ ಕೆ.ಶಿವಕುಮಾರ್, ಸ್ಥಾಯಿ.ಇನ್ ಸಂಸ್ಥಾಪಕರಾದ ಸಮಷ್ಟಿ ಗುಬ್ಬಿ ಆಗಮಿಸುವರು. ಸುಧರ್ಮಾ ಸಂಸ್ಕೃತ ದಿನ ಪತ್ರಿಕೆಯ ಗೌರವ ಸಂಪಾದಕರಾದ ಡಾ.ವಿ.ಡಿ.ಹೆಗಡೆ ಉಪಸ್ಥಿತರಿರುವರು. ಸಮ್ಯಕ್ ಪ್ರತಿಷ್ಠಾನದ ಅಧ್ಯಕ್ಷ ವಿದ್ವಾನ್ ಎಂ.ಆರ್.ಸತೀಶ್ ಅವರನ್ನು ಈ ವೇಳೆ ಸನ್ಮಾನಿಸಲಾಗುವುದು ಎಂದರು.

ಮಧ್ಯಾಹ್ನ 1ಗಂಟೆಗೆ ಬಹುಮಾನ ವಿಜೇತ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಮಾಡಲಾಗುವುದು. ಸಂಜೆ 4.15ಕ್ಕೆ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ನಾಗರಾಜ ವಿರಚಿತ 'ಸುವಚನಶತಕಮ್', 'ಶಿಖರಿಣೀಶತಕಮ್', ಡಾ.ಟಿ.ವಿ.ಸತ್ಯನಾರಾಯಣ ರಚಿತ 'ನವರಾತ್ರ ದುರ್ಗಾ ವೈಭವ' ಗ್ರಂಥಗಳನ್ನು ಕರ್ನಾಟಕ ಸಂಸ್ಕೃತ ವಿವಿ ಕುಲಪತಿ ಡಾ.ಅಹಲ್ಯಾ ಶರ್ಮಾ ಅವರು ಲೋಕಾರ್ಪಣೆ ಮಾಡುವರು. ಮುಖ್ಯ ಅತಿಥಿಗಳಾಗಿ ಪ್ರಮತಿ ಶಾಲಾ ಸಮೂಹ ಕಾರ್ಯದರ್ಶಿ ಹೆಚ್.ವಿ.ರಾಜೀವ್, ವಿಜಯವಿಠಲ ವಿದ್ಯಾಸಂಸ್ಥೆ ಅಧ್ಯಕ್ಷ ಆರ್.ವಾಸುದೇವ ಭಟ್ ಭಾಗವಹಿಸುವರು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಗೌರವ ಸಂಪಾದಕರಾದ ಡಾ.ಟಿ.ವಿ.ಸತ್ಯನಾರಾಯಣ ತಲಕಾಡು ಉಪಸ್ಥಿತರಿದ್ದರು.



## ವಿ. ಸುಮಾಗೆ ಪಿಹೆಚ್.ಡಿ

ಮೈಸೂರು, ಅ. 3– ಡಾ. ಆರ್.ಡಿ. ಪವಮಾನ ಅವರ ಮಾರ್ಗದರ್ಶನದಲ್ಲಿ ವಿ. ಸುಮಾ ಅವರು ಇತಿಹಾಸ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

## ನಕ್ಕರೆ ಅದೇ ಸ್ವರ್ಗ

90 ವರ್ಷದ ತಾತಾ ಸತ್ತ ನಂತರ ಸ್ವರ್ಗಕ್ಕೆ ಹೋದರು. ಸ್ವರ್ಗದಲ್ಲಿ ಸುಂದರವಾಗಿರುವ ಅಪ್ಸರೆಯರನ್ನು ನೋಡಿದ ತಾತಾ ಬಿಕ್ಕಿ ಬಿಕ್ಕಿ ಅಳುತ್ತಾ.. 'ಆ ಹಾಳಾದ ಡೈಯಟ್, ಜಿಂ, ವಾಕಿಂಗ್, ಯೋಗ ಅಂತ ಮಾಡದಿದ್ದರೆ ಯಾವಾಗ್ಲೋ ಇಲ್ಲಿಗೆ ಬಂದು ಸೇರುತ್ತಿದ್ದೆ. ಎಂತಹ ಕೆಲಸ ಮಾಡ್ಕೊಂಡು ಬಿಟ್ಟೆ.

ಮೈಸೂರು ಮಿತ್ರ

ಶನಿವಾರ, 4 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತ ವಾಹಿನಿ......

ಬದುಕು ಮನೆಯ ಕಿಟಕಿಯಂತೆ ತೆರೆದರೆ ಬೆಳಕು,
ಇಲ್ಲದಿದ್ದರೆ ಕತ್ತಲು. ಹಾಗೆಯೇ ಶ್ರಮಪಟ್ಟರೆ ಸುಖ,
ಇಲ್ಲದಿದ್ದರೆ ದುಃಖ. ಎಲ್ಲವೂ ನಮ್ಮ ಕೈಯಲ್ಲಿದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾಲಿಗೆ ಹುಳಿ ಹಿಂಡಿದರೆ ಮೊಸರು, ಮಣ್ಣಿಗೆ ನೀರು ಹಾಕಿದರೆ ಕೆಸರು.

## ನಿಮ್ಮ ಪತ್ರಗಳು

### ■ ಆರೂವರೆ ಸಾವಿರ ಕೊಟ್ಟರೂ ನೋಡಲಾಗದ ಜಂಬೂ ಸವಾರಿ

ಮಾನ್ಯರೆ,

ಗುರುವಾರ (ಅ.2) ನಡೆದ ಜಂಬೂ ಸವಾರಿಯ ಆಯೋಜನೆಯಲ್ಲಿ ಹಲವು ತೊಡಕುಗಳು ಉಂಟಾಗಿದ್ದು, ಜಂಬೂ ಸವಾರಿಯನ್ನು ನೋಡಲು ಬಂದ ಸಾಮಾನ್ಯ ಜನರಿಗೆ, ಅನೇಕ ಸಮಸ್ಯೆಗಳು ಎದುರಾಗಿವೆ. 6500 ರೂಪಾಯಿ ಪಾಸನ್ನು ಖರೀದಿಸಿ ಬಂದರೂ ಪ್ರವೇಶ ನೀಡದೆ ವಾಪಾಸ್ ಕಳುಹಿಸಲಾಗಿದೆ. ಸುಮಾರು ಒಂದು ಸಾವಿರ ಜನ ಈ ಕಷ್ಟ ಅನುಭವಿಸಿದ್ದು, ಇದನ್ನು ಯಾವುದೇ ಮೀಡಿಯಾಗಳು ಪ್ರಸಾರ ಮಾಡದೇ ಇರುವುದು ದುರಾದೃಷ್ಟಕರ ಸಂಗತಿ.

ಪಾಸನ್ನು ತೆಗೆದುಕೊಂಡವರಿಗೆ, ಕೇವಲ 9.30ಕ್ಕೆ ಬಾಗಿಲನ್ನು ತೆರೆಯಲಾಗುತ್ತದೆ ಎಂದು ಹೇಳಲಾಗಿತ್ತೇ ಹೊರೆತು, ಇಷ್ಟು ಸಮಯದ ಒಳಗೆ ಗೇಟಿನೊಳಗೆ ಬರಬೇಕು ಎಂಬ ಯಾವುದೇ ಸೂಚನೆಯನ್ನು ನೀಡಲಾಗಿರಲಿಲ್ಲ. ಸುಮಾರು 11:30 ರಿಂದಲೇ ಬಾಗಿಲು ಹಾಕಲು ಶುರು ಮಾಡಿದ ಪೊಲೀಸರು, 2,500ರ ಹಾಗೂ 6,500 ರ ಪಾಸಿದ್ದರೂ ಒಳಗಡೆ ಬಿಡಲಿಲ್ಲ. ಜನರೂ ಸಹ ಕಾದು ಕಾದು ನಿರಾಶರಾದರು. ಗೇಟಿನಿಂದ ಗೇಟಿಗೆ ಅಲೆದಾಡಿದರೂ ಎಲ್ಲೂ ಪ್ರವೇಶ ಸಿಗದೆ ಜಂಬೂ ಸವಾರಿಯನ್ನು ನೋಡದೇ, ಆಕ್ರೋಶ ವ್ಯಕ್ತಪಡಿಸಿ ಜನರು ಹಿಂದುರಿಗಿದರು.

**ಗೋಲ್ಡ್ ಕಾರ್ಡ್‌ಗಳು :** ಕೊಲ್ಕತ್ತಾ, ಚೆನ್ನೈ, ಬೆಂಗಳೂರು ಹೀಗೆ ಅನೇಕ ಕಡೆಗಳಿಂದ ಬಂದ ಪ್ರವಾಸಿಗರು ಅಷ್ಟೊಂದು ದೂರದಿಂದ ಇಷ್ಟು ದುಡ್ಡು ಕೊಟ್ಟು ಬಂದರೂ ಸಹ ಜಂಬೂ ಸವಾರಿ ನೋಡಲು ಬಿಡದೇ ಇರುವುದು ಬಹಳ ಬೇಸರವಾಗಿದೆ. ದಸರಾ ಆಯೋಜಕರ ಈ ಬೇಜವಬ್ದಾರಿತನ ಹಾಗೂ ನಿರ್ಲಕ್ಷದಿಂದ ನಾವು ಪರದಾಡುವಂತಾಯಿತು ಎಂದು ತಮ್ಮ ಅಳಲು ತೋಡಿಕೊಂಡರು.

ಪೊಲೀಸರನ್ನು ಒಳಗಡೆ ಬಿಡಲು ಕೇಳಿದಾಗ ಅಲ್ಲಿ ಸೀಟಿನ ವ್ಯವಸ್ಥೆ ಇರುವುದೇ 33,000. ಆದರೆ ಇಲ್ಲಿ ಸುಮಾರು ಒಂದು ಲಕ್ಷ ಜನರು ನೆರೆದಿದ್ದಾರೆ. ಹೀಗಾದರೆ ಏನು ಮಾಡುವುದು? ಎಂದು ಪ್ರಶ್ನಿಸಿದರು. ಪೊಲೀಸರೂ ಸಹ ಅಸಹಾಯಕತೆಯಿಂದ ನೂಕು ನುಗ್ಗಲು ತಡೆಯಲು ಬಹಳ ಪ್ರಯತ್ನಿಸುತ್ತಿದ್ದರು. ಹಾಗಾದರೆ, ದಸರಾ ಆಯೋಜಕ ಸಮಿತಿಯು ಎಷ್ಟು ಪಾಸ್‌ಗಳನ್ನು ವಿತರಣೆ ಮಾಡಿದೆ? ಇದರಲ್ಲೂ ಸರ್ಕಾರ ಭ್ರಷ್ಟಾಚಾರ ನಡೆಸಿದೆಯಾ ಎಂಬ ಶಂಕೆಗಳು ಎದುರಾಗುತ್ತಿವೆ. ಇದರ ವಿಷಯವಾಗಿ ಹೇಳಿಕೆ ಕೊಟ್ಟಿರುವ ಮೈಸೂರು ಡಿಸಿ ಲಕ್ಷ್ಮೀಕಾಂತ ರೆಡ್ಡಿಯವರು ನಾವು 3,500 ಗೋಲ್ಡ್ ಕಾರ್ಡ್ಸ್ ಮುದ್ರಣ ಮಾಡಿದ್ದೆವು. ಅದರಲ್ಲಿ 60 ಕಾರ್ಡ್‌ಗಳು ಮಾರಾಟವಾಗಿಲ್ಲ ಎಂದಿದ್ದರು. ಆದರೆ ವಾಸ್ತವತೆ ಬೇರೆಯೇ ತೋರಿಸುತ್ತಿತ್ತು. ಗೋಲ್ಡ್ ಪಾಸ್ ಇದ್ದವರೇ ಹೊರಗಡೆ ಉಳಿದಿದ್ದರೆ, ಒಳಗಡೆ ಸೇರಿಕೊಂಡಿದ್ದು ಯಾರು? ಇದು ಆಯೋಜಕರ ಅವ್ಯವಸ್ಥೆಯೇ? ಅಥವಾ ಸರ್ಕಾರದಿಂದಲೇ ನಡೆಸಿದ ಭ್ರಷ್ಟಾಚಾರವೇ? ಎಂಬುದನ್ನು ತನಿಖೆ ನಡೆಸಿ ಪತ್ತೆ ಹಚ್ಚಬೇಕಾಗಿದೆ. ಇಲ್ಲವಾದರೆ ಇದೇ ರೀತಿಯ ಘಟನೆಗಳು ಮತ್ತೆ ಮರುಕಳಿಸುವುದರಲ್ಲಿ ಸಂದೇಹವಿಲ್ಲ.

–ನಿಹಾರಿಕಾ ಹೆಗಡೆ, ಪ್ರತಿಕೋದ್ಯಮ ವಿದ್ಯಾರ್ಥಿ, ಮೈಸೂರು.

### ■ ವೃದ್ಧ ಕಾರು ಚಾಲಕರನ್ನು ಗುರಿಯಾಗಿಸಿಕೊಂಡು ಹಣ ಸುಲಿಗೆ

ಮಾನ್ಯರೇ,

ಇತ್ತೀಚೆಗೆ ಮೈಸೂರು ನಗರದಲ್ಲಿ ವೃದ್ಧ ಕಾರು ಚಾಲಕರನ್ನು ಗುರಿಯಾಗಿಸಿಕೊಂಡು ದರೋಡೆಕೋರರು ಹಣ ಸುಲಿಗೆ ಮಾಡುತ್ತಿರುವ ಆತಂಕಕಾರಿ ಘಟನೆಗಳು ಹೆಚ್ಚಾಗುತ್ತಿರುವುದು ಅತ್ಯಂತ ಕಳವಳಕಾರಿ ಸಂಗತಿ. 'ನಿಮ್ಮ ಕಾರು ನನ್ನ ಸ್ನೇಹಿತನಿಗೆ ಡಿಕ್ಕಿ ಹೊಡೆದಿದೆ' ಎಂದು ಸುಳ್ಳು ಹೇಳಿ ಹಿರಿಯ ನಾಗರಿಕರನ್ನು ಬೆದರಿಸಿ, ಸಾವಿರದಿಂದ ಲಕ್ಷಾಂತರ ರೂಪಾಯಿಗಳನ್ನು ಸುಲಿಗೆ ಮಾಡುತ್ತಿರುವ ಬಗ್ಗೆ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ವರದಿಯಾಗಿದೆ.

ವಯಸ್ಸಾದ ನಂತರ ದೈಹಿಕ ಮತ್ತು ಮಾನಸಿಕ ದುರ್ಬಲತೆಗಳು ಸಹಜ. ದರೋಡೆಕೋರರು ಇಂತಹ ದುರ್ಬಲತೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ತಮ್ಮ ವಾಹನವನ್ನು ತಾವೇ ಚಲಾಯಿಸುವ ಹಿರಿಯ ನಾಗರಿಕರು ಸಾಮಾನ್ಯವಾಗಿ ಆರ್ಥಿಕವಾಗಿ ಸದೃಢರಾಗಿರುತ್ತಾರೆ. ಹೀಗಾಗಿ, ಅವರು. ಒಬ್ಬ ನುರಿತ ಚಾಲಕರನ್ನು ಸಂಬಳ ಕೊಟ್ಟು ನೇಮಿಸಿಕೊಳ್ಳುವುದು ಉತ್ತಮ ಪರಿಹಾರ. ಇದರಿಂದ ಅವರ ವೈಯಕ್ತಿಕ ಸುರಕ್ಷತೆ ಖಚಿತವಾಗುವುದಲ್ಲದೆ, ನಿರುದ್ಯೋಗಿಯೊಬ್ಬರಿಗೆ ಉದ್ಯೋಗ ದೊರೆತು ಜೀವನಕ್ಕೆ ಆಧಾರವಾಗುತ್ತದೆ. ಇದು ಒಂದು ಅರ್ಥದಲ್ಲಿ ಸಮಾಜ ಸೇವೆಯೂ ಹೌದು. ಒಂದು ವೇಳೆ ಪೂರ್ಣಾವಧಿ ಚಾಲಕರನ್ನು ನೇಮಿಸಿಕೊಳ್ಳುವುದು ಕಷ್ಟವೆನಿಸಿದರೆ, ಖಾಸಗಿ ಆಟೋ ಅಥವಾ ಟ್ಯಾಕ್ಸಿ ಸೇವೆಗಳನ್ನು ಬಳಸುವುದು ಅತ್ಯಂತ ಸುರಕ್ಷಿತ ಮತ್ತು ಉತ್ತಮ ಪರ್ಯಾಯ ಮಾರ್ಗ. ಪೊಲೀಸ್ ಇಲಾಖೆಯು ಇಂತಹ ಕೃತ್ಯಗಳ ಮೇಲೆ ತೀವ್ರ ನಿಗಾವಹಿಸಿ, ತಪ್ಪಿತಸ್ಥರನ್ನು ಕೂಡಲೇ ಬಂಧಿಸಿ, ಅವರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಹಿರಿಯ ನಾಗರಿಕರ ಸುರಕ್ಷತೆ ಮತ್ತು ನೆಮ್ಮದಿಯನ್ನು ಕಾಪಾಡುವುದು ಸರ್ಕಾರದ ಮತ್ತು ಕಾನೂನು ಪಾಲನಾ ಸಂಸ್ಥೆಗಳ ಆದ್ಯ ಕರ್ತವ್ಯವಾಗಿದೆ. ಹಿರಿಯ ನಾಗರಿಕರು ಕೂಡ ತಮ್ಮ ಅನುಕೂಲಕ್ಕೆ ತಕ್ಕಂತೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವುದು ಒಳಿತು.


–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

### ■ ಚೆಲ್ಲಿದ ಚಂದನದ ಪರಿಮಳ

ಮಾನ್ಯರೆ,

ಚಿನ್ನದ ಅಂಬಾರಿಯಲ್ಲಿ ಚಾಮುಂಡೇಶ್ವರಿ ದೇವಿಯ ಹೊತ್ತ ಅಭಿಮನ್ಯು ಅರಮನೆಯಿಂದ ಹೊರಟು, ರಾಜ ಗಾಂಭೀರ್ಯದಿಂದ ಮೈಸೂರಿನ ರಾಜ ಬೀದಿಯಲ್ಲಿ ಗಣ್ಯರ ಪುಷ್ಪಾರ್ಚನೆ ನಂತರ ಬನ್ನಿಮಂಟಪದೆಡೆಗೆ ಒಂದೊಂದೇ ಹೆಜ್ಜೆ ಹಾಕುತ್ತಾ, ಸಹಸ್ರ ಸಹಸ್ರ ಜನ ಸಾಗರದ ಓಹ್! ಓಹೊ ಕೇಕೇಳ ನಡುವೆ ಸಾಗುವುದರೊಂದಿಗೆ ದಸರಾ ಮುಗಿಯಿತು. ವರ್ಷದ ದಸರೆಯ ಸಡಗರ. ಕೆಲವೇ 4.42 ರಿಂದ 5.06ರ ಶುಭ ಘಳಿಗೆಯಲ್ಲಿ ವ್ಯರ್ಥವಾಗಲಿಲ್ಲ. ತಿಂಗಳುಗಳಿಂದ ಮಾಡಿದ್ದ ಸಿದ್ಧತೆ, ಶ್ರಮ, ಅಭ್ಯಾಸ, ವೆಚ್ಚ ತಾಲೀಮು.... ಮುಗಿಯಿತು.. ಹನ್ನೊಂದು ದಿನದ ನವರಾತ್ರಿ ಸಂಭ್ರಮ.. ಎಷ್ಟೊಂದು ಸುಂದರ ಮೈಸೂರು ದಸರಾ.. ಚೆಲ್ಲಿದೆ ಮೈಸೂರಿಗೆ ಕೀರ್ತಿಯ ಪನ್ನೀರ... ಮೈಸೂರು ಚಂದನದ ಪರಿಮಳ... ಯದು ಒಡೆಯರ ಸ್ಮರಣೆಯಲಿ...

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

## ಸಂಸ್ಕೃತಿ ಚಿಂತನಾ

# ಎಸ್.ಎಲ್. ಭೈರಪ್ಪನವರಿಗೆ ನುಡಿನಮನ

**ಕ**ನ್ನಡ ನಾಡು ಅನೇಕ ಶ್ರೀಮಂತರಿಗೆ, ಧೀಮಂತರಿಗೆ ಜನ್ಮವನ್ನು ಕೊಟ್ಟಿದೆ. ಅಲ್ಲದೆ ಹಲವರು ಪ್ರತಿಭಾವಂತರೂ ಇಲ್ಲಿ ಹುಟ್ಟಿದ್ದಾರೆ. ಕಾವ್ಯ–ಗಾನ–ನೃತ್ಯ–ಶಿಲ್ಪಗಳಲ್ಲಿ ನಾವು ಯಾರಿಗೂ ಕಡಿಮೆಯಿಲ್ಲ ಎಂದು ಹೇಳಿಕೊಳ್ಳಲು ಅವರು ನಮಗೆ ಕಸುವನ್ನಿತ್ತಿದ್ದಾರೆ. ಭಗವದ್ಗೀತೆಯು ಹೇಳುವ ರೀತಿಯಲ್ಲಿ ಅವರೆಲ್ಲ ದೈವಾಂಶಸಂಭೂತರು.


**ಯದ್ಯದ್ ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ।**
**ತತ್ತದೇವಾಗಚ್ಛ ತ್ವಂ ಮಮ ತೇಜೋಂಶಸಂಭವಮ್ ॥**

ಎಂಬ ಶ್ಲೋಕವನ್ನಿಲ್ಲಿ ನೆನಪಿಸಿಕೊಳ್ಳಬೇಕು. ಪಂಪ–ರನ್ನ–ಪೊನ್ನರು ಆದಿಯುಗದಲ್ಲಿ, ಕುಮಾರವ್ಯಾಸ–ರಾಘವಾಂಕ–ಲಕ್ಷ್ಮೀಶ ಮುಂತಾದವರು ಮಧ್ಯ ಯುಗದಲ್ಲಿ, ಕುವೆಂಪು–ಬೇಂದ್ರೆ–ಕೆ.ಎಸ್. ನರಸಿಂಹಸ್ವಾಮಿ ಮುಂತಾದವರು ಆಧುನಿಕ ಯುಗದಲ್ಲಿ ಕನ್ನಡ ಕಾವ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದ ಮಹಾನುಭಾವರು. ಪಾಶ್ಚಾತ್ಯ ಸಾಹಿತ್ಯದ ಸಂಪರ್ಕದಿಂದ ನಮ್ಮಲ್ಲಿ ಉದಿಸಿದ ಹೊಸ ಸಾಹಿತ್ಯ ಪ್ರಕಾರ–ಕಾದಂಬರಿ. ಸಂಸ್ಕೃತದಲ್ಲಿ ಕಾದಂಬರಿ ಎಂದರೆ ಒಂದು ಗದ್ಯಕೃತಿ ಮಾತ್ರ. ಆದರೆ ಕನ್ನಡದಲ್ಲಿ ಅದು ಇಂಗ್ಲೀಷಿನ ನಾವೆಲ್(Novel) ಎಂಬುದಕ್ಕೆ ಸಂವಾದಿಯಾಗಿ ಬಳಸಲ್ಪಟ್ಟಿದೆ. ಮೊದಲು ಬಂಗಾಳಿ ಭಾಷೆಯ ಕಾದಂಬರಿಗಳು, ಅನಂತರ ಮರಾಠಿ ಭಾಷೆಯವು ಅನುವಾದಗೊಂಡು ಕನ್ನಡಕ್ಕೆ ಒಂದುವಂತೆ ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಅ.ನಕೃ., ತರಾಸು, ಕಾರಂತ, ಬಸವರಾಜ ಕಟ್ಟೀಮನಿ, ಚದುರಂಗ ಮುಂತಾದವರ ಸ್ವತಂತ್ರ ಕನ್ನಡ ಕಾದಂಬರಿಗಳು ಜನಪ್ರಿಯವಾಗಿದ್ದುವು. ನರಸಿಂಹಯ್ಯ, ರಾಮಮೂರ್ತಿ ಮುಂತಾದವರು ಪತ್ತೇದಾರಿ ಕಾದಂಬರಿಗಳನ್ನು ಬರೆಯುತ್ತಿದ್ದರು. ಕಾದಂಬರಿ ಸಾಹಿತ್ಯದ ಬೆಳೆ ಹುಲುಸಾಗಿತ್ತು.

ಇಂತಹ ಸಂದರ್ಭದಲ್ಲಿ ಕಾದಂಬರಿ ಸಾಹಿತ್ಯ ಸಾಗರಕ್ಕೆ ಧುಮುಕಿದವರು ಡಾ. ಎಸ್.ಎಲ್. ಭೈರಪ್ಪ (ಸಂತೆಶಿವರ ಲಿಂಗಣ್ಣಯ್ಯ ಭೈರಪ್ಪ). ಅವರ ಮೊದಲನೆಯ ಕಾದಂಬರಿ ಭೀಮಕಾಯ. ಅನಂತರ ಅವರು ಬರೆದುದು ದೂರ ಸರಿದರು. ಇವೆರಡೂ ಸಾಧಾರಣ ಗುಣದ ಕಾದಂಬರಿಗಳು. ಆಮೇಲೆ ಅವರು ಶೈಲಿಯನ್ನೂ ವಸ್ತು ವಿನ್ಯಾಸವನ್ನೂ ಪಾತ್ರ ಚಿತ್ರಣವನ್ನೂ ರೂಢಿಸಿಕೊಂಡು ರಚಿಸಿದ ವಿಶಿಷ್ಟ ಕಾದಂಬರಿ ವಂಶವೃಕ್ಷ. ಅದರಲ್ಲಿ ಬೇರೆ ಯಾವ ಕನ್ನಡ ಸಾಹಿತಿಗಳಲ್ಲೂ ಕಾಣದ ಛಾಪನ್ನು ಭೈರಪ್ಪನವರು ಮೂಡಿಸಿದರು. ಯಾರನ್ನೋ ಅನುಸರಿಸಿ ಅಥವಾ ಅನುಕರಿಸಿ ಬರೆಯುವ ಸಾಹಿತಿ ಇವರಲ್ಲ. ಇವರಲ್ಲಿ ತನ್ನತನವಿದೆ. ಸ್ವಂತಿಕೆ ಇದೆ ಎಂದು ಕನ್ನಡ ಲೋಕ ಗುರುತಿಸಿತು. ವಂಶ ವೃಕ್ಷದ ಬಗೆಗೆ ವಿಚಾರ ಸಂಕಿರಣಗಳಾದುವು. ವರಕವಿ ಬೇಂದ್ರೆ ಈ ಕಾದಂಬರಿಯನ್ನು ಮೆಚ್ಚಿ ಭೈರಪ್ಪನವರ ಬೆನ್ನು ತಟ್ಟಿದರು. ವಂಶವೃಕ್ಷ ಚಲನಚಿತ್ರವೂ ಆಯಿತು. (ಅದರಲ್ಲಿ ವಿಷ್ಣುವರ್ಧನ್ ಒಂದು ಪಾತ್ರವನ್ನು ವಹಿಸಿದ್ದರು).

ಭೈರಪ್ಪನವರಿಗೆ ಜೀವನಾನುಭವ ಗಾಢವಾಗಿತ್ತು. ಚಿಕ್ಕಂದಿನಿಂದ ನಾನಾ ಸನ್ನಿವೇಶಗಳನ್ನು ಎದುರಿಸಿದ್ದರು. ಪ್ರೊ ಯಾಮುನಾಚಾರ್ಯರ ಮಾರ್ಗದರ್ಶನದಲ್ಲಿ ತತ್ತ್ವಶಾಸ್ತ್ರವನ್ನು (Philosophy) ಅಭ್ಯಾಸ ಮಾಡಿದ್ದ ಅವರಿಗೆ ಪ್ರತಿಯೊಂದು ಘಟನೆಯ ಹಿಂದೆ ಮಾನವರ ಚಿಂತೆಗಳು ಮತ್ತು ಚಿಂತನೆಗಳು ಹೇಗಿರುತ್ತವೆ ಎಂಬುದು ಸ್ಪಷ್ಟವಾಗಿ ತಿಳಿದುಕೊಳ್ಳುವ ಪ್ರತಿಭೆಯೂ ಇತ್ತು. ತಮ್ಮ ಬದುಕಿನ ಹೋರಾಟದ ಅನೇಕ ಮಜಲುಗಳ ವಿಶ್ಲೇಷಣೆಯನ್ನು ಮಾಡುವ ಗೃಹಭಂಗ ಎಂಬ ಕಾದಂಬರಿ ಹುಟ್ಟಿತು. ಅದರಲ್ಲಿ ಬರುವ ಸ್ವಾತಂತ್ರ್ಯ ಪೂರ್ವ ಕಾಲದ ಹಳ್ಳಿಗಳ ಸ್ಥಿತಿ, ಜನರಲ್ಲಿದ್ದ ಒಳ್ಳೆತನ, ಕೆಟ್ಟತನ, ಅವುಗಳ ಸಂಘರ್ಷ– ಇವೆಲ್ಲ ಇಂದು ಓದಿದರೂ ಮನಮುಟ್ಟುವಂತಿವೆ. ಗೃಹ ಭಂಗವನ್ನು ಭೈರಪ್ಪ ಅವರಲ್ಲದೆ ಬೇರೆ ಯಾರೂ ಬರೆಯಲಾಗುತ್ತಿರಲಿಲ್ಲ.

ಮಹಾಭಾರತ ನಮ್ಮ ದೇಶದ ದೊಡ್ಡ ಆಸ್ತಿ ಅದರ ಒಂದೊಂದು ಭಾಗವೂ ಅನೇಕ ಕಾವ್ಯಗಳಿಗೆ, ನಾಟಕಗಳಿಗೆ, ವಿಮರ್ಶೆಗಳಿಗೆ, ಕಲ್ಪನೆಗಳಿಗೆ ಮೂಲವಾಗಿದೆ. ನಮ್ಮ ದೇಶದ ಎಲ್ಲ ಭಾಷೆಗಳ ಸಾಹಿತ್ಯ ಮಹಾಭಾರತದಿಂದ ಪ್ರಭಾವಿತವಾಗಿದೆ ಎನ್ನುವುದು ಉತ್ಪ್ರೇಕ್ಷೆಯಲ್ಲ. 'ಸರ್ವೇಷಾಂ ಕವಿಮುಖ್ಯಾನಾಮುಪಜೀವ್ಯಂ ಭವಿಷ್ಯತಿ' (ಎಲ್ಲ ಮುಂದಿನ ಕವಿಗಳಿಗೆ ಇದು ಆಕರಗ್ರಂಥವಾಗುತ್ತದೆ) ಎಂದು ಮಹಾಭಾರತದಲ್ಲೇ ಹೇಳಲಾಗಿದೆ. ಭೈರಪ್ಪನವರೂ ಹಾಗೆ ಪ್ರಭಾವಿತರಾಗಿ ಅದನ್ನು ತಮ್ಮ ದೃಷ್ಟಿಯಿಂದ ಹೇಳಲು ಪರ್ವವನ್ನು ರಚಿಸಿದರು. 1979ರಲ್ಲಿ ಬಂದ ಈ ಕಾದಂಬರಿ ಭೈರಪ್ಪನವರನ್ನು ಮತ್ತಷ್ಟು ಎತ್ತರಕ್ಕೆ ಏರಿಸಿತು. ಅಲ್ಲಿಂದ ಮುಂದೆ ಮಹಾಭಾರತದ ಬಗೆಗೆ ಯಾವುದೇ ಭಾಷೆಯಲ್ಲಿ ಬರೆಯುವವರು ಪರ್ವವನ್ನು ಓದಲೇಬೇಕು ಎನ್ನುವಷ್ಟರ ಮಟ್ಟಿಗೆ ಪರ್ವ ಪ್ರಾಮುಖ್ಯವನ್ನು ಗಳಿಸಿದೆ.



ಪ್ರಾಚೀನವನ್ನೂ, ನವೀನವನ್ನೂ ಸಮವಾಗಿ ವಿಶ್ಲೇಷಿಸಬಲ್ಲ ಭೈರಪ್ಪ ದಾಟು, ನಾಯಿ ನೆರಳು, ತಂತು ಮುಂತಾದ ಕಾದಂಬರಿಗಳಲ್ಲಿ ಆಧುನಿಕ ಸಮಾಜಕ್ಕೆ ಕನ್ನಡಿ ಹಿಡಿದಿದ್ದಾರೆ. ಇಂತಹ ವಸ್ತುಗಳು ಅವರಿಗೆ ಹೇಗೆ ಹೊಳೆದವು ಎಂಬುದೇ ದೊಡ್ಡ ಪ್ರಶ್ನೆ. ಪ್ರಪಂಚಾವಲೋಕನ, ಗಾಢ ಅಧ್ಯಯನ, ಸತತ ಚಿಂತನ ಮತ್ತು ಸಹಜ ಪ್ರತಿಭೆ ಇವೆಲ್ಲ ಸೇರಿದರೆ ವಸ್ತುವಿನ ಅನ್ವೇಷಣೆ ಸಾಧ್ಯವಾಗಬಹುದೇನೋ!

ಐತಿಹಾಸಿಕವೆನ್ನಬಹುದಾದ, ಪೌರಾಣಿಕ ಎನಿಸಿಕೊಳ್ಳುವ ವಸ್ತುವನ್ನುಳ್ಳ ಅವರ ಸಾರ್ಥ ಎಂಬ ಕಾದಂಬರಿಗಂತೂ ಓದುಗರನ್ನು ಎಂಟನೆಯ ಶತಮಾನದ ಭಾರತಕ್ಕೊಯ್ಯುತ್ತದೆ. ಕಲ್ಪನಾಜನ್ಯನಾದ ನಾಗಭಟ್ಟನ ದೇಶ ಸಂಚಾರ, ಸಾರ್ಥ (Caravon) ಪಯಣದ ಕಷ್ಟ ಸುಖಗಳು – ಇವುಗಳ ಜೊತೆಯಲ್ಲಿ ಆದಿಶಂಕರಾಚಾರ್ಯರ ಕಥೆಯೂ ಸೇರಿಕೊಂಡಿರುವ ಕಥಾನಕ ಈ ಕಾದಂಬರಿ. ಕುಮಾರಿಲ ಭಟ್ಟರು ತುಷಾಗ್ನಿಯಲ್ಲಿ (ಭತ್ತದ ಹೊಟ್ಟಿನ ಬೆಂಕಿಯಲ್ಲಿ) ತಮ್ಮನ್ನು ಸುಟ್ಟುಕೊಂಡು ಪ್ರಾಣಬಿಟ್ಟರು, ಅವರ ಶಿಷ್ಯರಾಗಿದ್ದ ಮಂಡನಮಿಶ್ರರು ಆದಿಶಂಕರಾಚಾರ್ಯರೊಡನೆ ದೀರ್ಘ ವಾದವನ್ನು ಮಾಡಿ ಸೋತು ಸನ್ಯಾಸಿಗಳಾದರು ಎಂಬ ರಮ್ಯ ಕಥೆಗಳೆಲ್ಲ ಇದರಲ್ಲಿ ಬಂದಿವೆ. ಇದಕ್ಕೆಲ್ಲ ಐತಿಹಾಸಿಕ ಆಧಾರಗಳಿಲ್ಲ. ಶಂಕರ ದಿಗ್ವಿಜಯ ವೆಂಬ ಕಾವ್ಯಗಳೇ ಆಧಾರ. ಇವುಗಳನ್ನು ಆಶ್ರಯಿಸಿ ಭೈರಪ್ಪನವರು ಕಾದಂಬರಿಯನ್ನು ಮನೋಜ್ಞವಾಗಿ ರಚಿಸಿದ್ದಾರೆ.

ಭೈರಪ್ಪ ಸಂಗೀತ ರಸಿಕರಾಗಿದ್ದರು. ಕರ್ನಾಟಕ ಸಂಗೀತಕ್ಕಿಂತ ಹಿಂದೂಸ್ಥಾನೀ ಸಂಗೀತ ಅವರಿಗೆ ಹೆಚ್ಚು ಪ್ರಿಯವಾಗಿತ್ತು. ಅನೇಕ ಘರಾನಾಗಳ ಹಿರಿಯ ಸಂಗೀತಗಾರರ ಪರಿಚಯವೂ ಅವರಿಗಿತ್ತು. ರಾಗಗಳ ಸ್ವರೂಪ, ಮಾಧುರ್ಯ, ಒಂದು ರಾಗಕ್ಕೂ ಇನ್ನೊಂದು ರಾಗಕ್ಕೂ ಇರುವ ಸೂಕ್ಷ್ಮ ವ್ಯತ್ಯಾಸ, ಸ್ವರಸಾಧನೆ– ಎಲ್ಲವನ್ನೂ ಅವರು ಅರಿತಿದ್ದರು. ಗೀತ–ವಾದ್ಯ–ನೃತ್ಯಗಳ ಸಂಬಂಧವನ್ನು ತಿಳಿದಿದ್ದರು. ಬರೋಡಾ, ಮುಂಬಯಿ ಇತ್ಯಾದಿ ನಗರಗಳಲ್ಲಿ ನಡೆದ ದೊಡ್ಡ ಕಛೇರಿಗಳ ನಿನಾದವನ್ನು ಆಲಿಸಿದ್ದರು. ಸಂಗೀತ–ನೃತ್ಯ ತಾರೆಗಳ ವೈಯಕ್ತಿಕ ಜೀವನದ ಲೋಪದೋಷಗಳೂ ಅವರಿಗೆ ಗೊತ್ತಾಗಿದ್ದುವು. ಇದರ ಹಿನ್ನೆಲೆಯಿಂದ ಮೂಡಿಬಂದ ಕಾದಂಬರಿ ಮಂದ್ರ ಇದು ಭೈರಪ್ಪನವರಿಗೆ ಸರಸ್ವತೀ ಸಮ್ಮಾನ್ ತಂದುಕೊಟ್ಟ ಮಹಾಕೃತಿ. ಸಂಗೀತದ ಮತ್ತು ನೃತ್ಯದ ಅತಿ ಸೂಕ್ಷ್ಮ ವಿಶಿಷ್ಟತೆಗಳನ್ನರಿಯಲು ಮಂದ್ರದ ರಚನೆಯ ವೇಳೆಯಲ್ಲಿ ನಾನಾ ಹೆಸರಾಂತ ಕಲಾವಿದರೊಡನೆ ವಿಚಾರ ವಿನಿಮಯ ಮಾಡಿ ಕೊಂಡಿದ್ದರು. ಇಲ್ಲದಿದ್ದರೆ ಕಾದಂಬರಿಗೆ ಪರಿಪೂರ್ಣತೆ ಒದಗುತ್ತಿರಲಿಲ್ಲ.

'ಧರಣಿ ಮಂಡಲ ಮಧ್ಯದೊಳಗೆ' ಎಂದು ಆರಂಭಗೊಳ್ಳುವ ಗೋವಿನ ಹಾಡನ್ನು ನಾವೆಲ್ಲರೂ ಕೇಳಿದ್ದೇವೆ. ಪುಣ್ಯಕೋಟಿ ಎಂಬ ಹಸುವಿನ ಬಗ್ಗೆ ಕನಿಕರಿಸಿದ್ದೇವೆ. ಅದರ ಸತ್ಯನಿಷ್ಠೆಯನ್ನು ಮೆಚ್ಚಿದ್ದೇವೆ. ದಾಟು, ಪರ್ವ, ತಂತು, ಮಂದ್ರ ಇತ್ಯಾದಿ ಸಣ್ಣ ಎರಡಕ್ಷರದ ಹೆಸರುಗಳನ್ನೇ ತಮ್ಮ ಕಾದಂಬರಿಗಳಿಗೆ ಇಡುತ್ತಿದ್ದ ಭೈರಪ್ಪನವರು ಗೋವಿನ ಹಾಡಿನ ತಬ್ಬಲಿಯು ನೀನಾದೆ ಮಗನೆ ಎಂಬ ಸಾಲನ್ನೇ ತಮ್ಮ ಕಾದಂಬರಿಗೆ ಇಟ್ಟಿದ್ದೂ ಒಂದು ವಿಶೇಷ. ಈ ಕಾದಂಬರಿ ಓದುಗರ ಕಣ್ಣುಗಳಲ್ಲಿ ಕಂಬನಿಗಳನ್ನು ತೊಟ್ಟಿಕ್ಕಿಸಿದೆ. ಒಂದು ದೃಷ್ಟಿಯಿಂದ ಇದು ಎರಡು ಸಂಸ್ಕೃತಿಗಳು ಒಪ್ಪಿಕೊಂಡಿದ್ದ ಮೌಲ್ಯಗಳ ಸಂಘರ್ಷವನ್ನು ಚಿತ್ರಿಸಿದೆ. ಇದು ಅದೇ ಹೆಸರಿನ ಚಲನಚಿತ್ರವೂ ಆಗಿ ಭೈರಪ್ಪನವರನ್ನು ಅಧಿಕ ಜನರ ಮನಗಳಿಗೆ ತಲುಪಿಸಿತು.

ಭಿತ್ತಿ ಭೈರಪ್ಪನವರ ಆತ್ಮಕಥೆ. ಹಿಂದೆ ಭಾರತದಲ್ಲಿ ಕವಿಗಳು ತಮ್ಮ ಆಶ್ರಯದಾತೃಗಳಾಗಿದ್ದ ರಾಜರ ಚರಿತ್ರೆಗಳನ್ನು ಕಾವ್ಯರೂಪವಾಗಿ ಬರೆಯುತ್ತಿದ್ದರು. ಆತ್ಮಕಥೆಗಳನ್ನು ಬರೆಯುವ ಸಂಪ್ರದಾಯ ವಿರಲಿಲ್ಲ. ಹರ್ಷವರ್ಧನನನ್ನು ಹೊಗಳಲು ಹರ್ಷಚರಿತವನ್ನು ಬರೆದ ಬಾಣ. ಅದರಲ್ಲಿ ಪ್ರಾಸಂಗಿಕವಾಗಿ ತನ್ನ ಕಥೆಯನ್ನು ಹೇಳಿಕೊಂಡಿದ್ದಾನೆ. ಪಾಶ್ಚಾತ್ಯ ಸಾಹಿತ್ಯದ ಸತ್ಪ್ರಭಾವದಿಂದ ಭಾರತ ದೇಶ ಭಾಷೆಗಳಲ್ಲೂ ಆತ್ಮಚರಿತ್ರೆಗಳು ರಚಿತವಾಗಿವೆ. ಕನ್ನಡವೂ ಇದಕ್ಕೆ ಅಪವಾದವಲ್ಲ. ಭೈರಪ್ಪನವರ ಆತ್ಮಕಥೆ ಸತ್ಯನಿಷ್ಠವಾಗಿದೆ. ಅನೇಕ ನಿಷ್ಠುರಸತ್ಯಗಳನ್ನೂ ಅವರು ಹೇಳಿದ್ದಾರೆ. ಎಲ್ಲ ಕಡೆ ನಮಗೆ ತೋರುವ ಅರ ಸದ್ಗುಣ ಎಂದರೆ ಧೈರ್ಯ. ಪುಕಲುತನ ಎಂದರೆ ಅವರಿಗಾಗದು.

ಸಾಮಾನ್ಯರು ತೇಲಿಸಿಬಿಡುವ ವಿಷಯಗಳನ್ನು ನಿರ್ಭಯರಾಗಿ ಹೇಳಿರುವ ಭೈರಪ್ಪ ಕೆಚ್ಚೆದೆಯ ಕಲಿ ಎಂದರೆ ತಪ್ಪಿಲ್ಲ. ಯಾರು ಏನಂದುಕೊಳ್ಳುತ್ತಾರೋ ಯಾರು ಏನು ಮಾಡಿ ಬಿಡುತ್ತಾರೋ ಎಂಬ ಹೆದರಿಕೆಯಿಲ್ಲದೆ, ಮುಲಾಜು, ದಾಕ್ಷಿಣ್ಯವಿಲ್ಲದೆ ಸತ್ಯವನ್ನು ಹೇಳುವ ಭೈರಪ್ಪನವರನ್ನು ಯಾರು ಮೆಚ್ಚರು?

ಈ ಮನೋಭಾವವೇ ಅವರನ್ನು ಆವರಣ ಎಂಬ ಅಪೂರ್ವ ಕೃತಿಯನ್ನು ರಚಿಸಲು ಪ್ರೇರೇಪಿಸಿರಬೇಕು. ಮೊಘಲ್ ಸಾಮ್ರಾಜ್ಯದಲ್ಲಿ ನಡೆದ ಅನ್ಯಾಯಗಳ ಬಗೆಗೆ ಈ ಕಾದಂಬರಿ ರೂಪಗೊಂಡಿದೆ. ಮುದ್ರಣಕ್ಕೆ ಮುಂಚೆ ಎರಡು ಸಾವಿರ ಪ್ರತಿಗಳೂ ಮಾರಾಟಗೊಂಡು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಿಕ್ರಮವನ್ನು ಸಾಧಿಸಿದ ಕಾದಂಬರಿ ಇದು. ಎಷ್ಟು ಬಾರಿ ಇದರ ಮರುಮುದ್ರಣ ! ಅವರಣದ ನಿರಾವರಣವನ್ನು ಮಾಡಬೇಕು ಎಂದ ಖಂಡನಕಾರರೇ ನೂರಾರು ಪ್ರತಿಗಳನ್ನು ಕೊಂಡಿರಬಹುದು. ಏಕೆಂದರೆ ಭೈರಪ್ಪನವರ ಅಭಿಮಾನಿಗಳು ಊರೂರಿನಲ್ಲಿ ಇರುವ ಹಾಗೆ ವಿರೋಧಿಗಳೂ ಇದ್ದಾರೆ. ಅಭಿಮಾನಿಗಳಾಗಲಿ ವಿರೋಧಿಗಳೇ ಆಗಲಿ ಯಾರೂ ಭೈರಪ್ಪನವರನ್ನು ignore ಮಾಡುವಂತಿಲ್ಲ.

ಯಾನದಲ್ಲಿ ಭೈರಪ್ಪನವರು ಅಂತರಿಕ್ಷಯಾನದ ವಸ್ತುವನ್ನು ಆಯ್ದುಕೊಂಡರು. ದೂರದ ನಕ್ಷತ್ರದ ಸುತ್ತ ಸುತ್ತುವ ಗ್ರಹಕ್ಕೆ ಹೋಗುವ ಸಾಹಸದ ಕಥೆ ಅದು. ಸದ್ಯಕ್ಕಂತೂ ಅಂತಹ ಯಾನ, ಅಷ್ಟು ದೀರ್ಘ ಪ್ರಯಾಣ ಅಸಾಧ್ಯವೆಂಬುದು ಎಲ್ಲರಿಗೂ ಗೊತ್ತು. ಮುಂದೆ ಎಂದೋ ನಡೆಯಬಹುದಾದ ಘಟನೆಯ ವಿವಿಧ ಆಯಾಮಗಳನ್ನು ಭೈರಪ್ಪನವರು ತೋರಿಸಿದ್ದಾರೆ.

ರಾಮಾಯಣದ ಉತ್ತರ ಕಾಂಡವನ್ನು ಬೇರೆ ದೃಷ್ಟಿಯಿಂದ ನೋಡಿ ಅಮು ಬರೆದ ಉತ್ತರಕಾಂಡ ಪರ್ವಕ್ಕೆ ಹೋಲಿಸಿದರೆ ಸಪ್ಪೆ ಎನಿಸುತ್ತದೆ. ಏನೇ ಆಗಲಿ, ಪುಸ್ತಕ ಯಾವುದೆಂದು ತಿಳಿಯದಾಗಲೂ ಒಂದು ಪುಟವನ್ನು ಓದಿದರೆ ಸಾಕು, ಅದು ಭೈರಪ್ಪನವರ ಕಾದಂಬರಿ ಎಂದು ಹೇಳಿಬಿಡಬಹುದು. ಇಂತಹ ಶೈಲಿಯನ್ನು ಸೃಷ್ಟಿಸಿದ ಮೇರು ಸಾಹಿತ್ಯಕಾರ ಭೌತಶರೀರದ ದೃಷ್ಟಿಯಿಂದ ನಮ್ಮೆದುರು ಈಗ ಇಲ್ಲದಿದ್ದರೂ ಅಕ್ಷರರೂಪದಿಂದ ಸಮಸ್ತ ಕನ್ನಡಿಗರ ಹೃದಯದಲ್ಲಿ ನೆಲೆಸಿದ್ದಾರೆ, ನೆಲೆಸಿರುತ್ತಾರೆ. ಅವರಿಗೆ ನಮ್ಮ ಶ್ರದ್ಧಾಪೂರ್ವಕ ನಮನ.

# ಮೈಸೂರು ದಸರಾ ಎಷ್ಟೊಂದು ಸುಂದರ...

## ಕನ್ನಡದ ಹಳೆಯ ಗೀತೆಗಳ ಗಾಯನಕ್ಕೆ ಮನಸೋತ ಪ್ರೇಕ್ಷಕರು

ಮೈಸೂರು, ಅ.3(ವಿವಿಹೆಚ್)– ನಗರದ ಲಕ್ಷ್ಮೀಪುರಂನ ನಾದಬ್ರಹ್ಮ ಸಭಾಂಗಣದಲ್ಲಿ ಜನ ಚೈತನ್ಯ ಫೌಂಡೇಶನ್ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದೊಂದಿಗೆ ಶುಕ್ರವಾರ ಮೈಸೂರು ದಸರಾ ಎಷ್ಟೊಂದು ಸುಂದರ... ಶೀರ್ಷಿಕೆಯಡಿ ಆಯೋಜಿಸಿದ್ದ ಸಂಗೀತ ಕಾರ್ಯಕ್ರಮದಲ್ಲಿ ಜನಪ್ರಿಯ ಹಳೆಯ ಕನ್ನಡ ಚಿತ್ರಗೀತೆಗಳು ಮತ್ತು ಭಾವಗೀತೆಗಳ ಸಮ್ಮಿಲನ ಮೇಳೈಸಿತು. ಕನ್ನಡದ ಹಾಡುಗಳ ಕೇಳಿದ ಪೇಕ್ಷಕ ಸಮೂಹ ಗಾನ ಸಾಗರದಲ್ಲಿ ಮುಳುಗಿಹೋದರು.



ಜನಚೈತನ್ಯ ಫೌಂಡೇಷನ್ ಏರ್ಪಡಿಸಿದ್ದ ಸಂಗೀತ ಕಾರ್ಯಕ್ರಮದಲ್ಲಿ ಗಾಯಕರನ್ನು ಸನ್ಮಾನಿಸಲಾಯಿತು.

ವರನಟ ಡಾ.ರಾಜ್‌ಕುಮಾರ್, ವಿಷ್ಣುವರ್ಧನ್ ಮೊದಲಾದವರ ಚಿತ್ರಗಳ ಗೀತೆಗಳನ್ನು ಈ ವೇದಿಕೆಯಲ್ಲಿ ಸಾದರಪಡಿಸಲಾಯಿತು. ಗಾಯಕರಾದ ಆರ್.ಲಕ್ಷ್ಮಣ್, ವೈ.ಎಂ.ನಾಗೇಂದ್ರ, ನರಸಿಂಹಮೂರ್ತಿ, ವಿಜಯ್ ಆನಂದ್ ಮಿಂಚಿದರೆ, ಗಾಯಕಿಯರಾಗಿ ರೇಖಾ ಗೌತಮ್, ಚಾಯ್ಸ್ ವೈಶಾಖ್, ಶಾಂತ ಕುಮಾರಿ ಕಮಾಲ್ ಮಾಡಿದರು. ಇವರಿಗೆ ಶಿವಕುಮಾರ್–ಕೀ ಬೋರ್ಡ್, ಹೆಬ್ಬಾಡಿ ಮಹದೇವ್–ತಬಲ, ಅರುಣ್ ಕುಮಾರ್– ರಿದಂ ಪ್ಯಾಡ್ ನುಡಿಸುವ ಮೂಲಕ ಸಾಥ್ ನೀಡಿದರು.

ಮೈಸೂರು ದಸರಾ ಎಷ್ಟೊಂದು ಸುಂದರ, ಮರೆಯೋದುಂಟೆ ಮೈಸೂರು ದೊರೆಯ, ತಿಂಗಳು ಮುಳುಗಿದವೋ, ಆಡಿದವರ ಮನವ ಬಲ್ಲೆ ನೀಡಿದವರ, ಮೂಡಲ ಮನೆಯ ಮುತ್ತಿನ ಹನಿಯ, ಹಚ್ಚೇವು ಕನ್ನಡದ ದೀಪ, ಗುಡಿಸಲ ಜ್ಯೋತಿ ಊರೂರು ಸುತ್ತಿ, ಮೆಲ್ಲುಸಿರೆ ಸವಿಗಾನ, ನಿನದೆ ನೆನಪು ದಿನವು ಮನದಲ್ಲಿ, ಮನೆಯೇ ಮಂತ್ರಾಲಯ, ಮನಸೇ ದೇವಾಲಯ, ಕಾಪಾಡು ಶ್ರೀ ಸತ್ಯನಾರಾಯಣ, ಮಾನಸ ಸರೋವರ, ಆಕಾಶದ ನೀಲಿಯಲಿ, ಸ್ತ್ರೀ ಅಂದರೆ ಅಷ್ಟೇ ಸಾಕೇ, ರಾಮನ ಅವತಾರ ರಘುಕುಲ ಸೋಮನ ಅವತಾರ, ರಂಗಾ ವಿಠಲ ಎಲ್ಲಿ ಮರೆಯಾದೆ, ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪಾ, ತುತ್ತು ಅನ್ನ ತಿನ್ನೋಕೆ, ಬೊಗಸೆ ನೀರು ಕುಡಿಯೋಕೆ, ಬೊಂಬೆ ಹೇಳುತೈತೆ, ನಿಮ್ ಕಡೆ ಸಾಂಬಾರ್ ಅಂದ್ರೆ, ಸಂಗಮ ಸಂಗಮ, ಎಂದೆಂದೂ ನಿನ್ನನು ಮರೆತು ಬದುಕಿರಲಾರೆ..' ಬಾರೇ ಬಾರೆ ಚಂದದ ಚೆಲುವಿನ ತಾರೆ ಗೀತೆಗಳನ್ನು ಪ್ರಸ್ತುತಪಡಿಸಿ ನೆರೆದಿದ್ದವರ ಮನ ತಣಿಸಿದರು.

ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ ಕಾರ್ಯಕ್ರಮ ಉದ್ಘಾಟಿಸಿದರು, ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ. ಬೈರಿ ಅಧ್ಯಕ್ಷತೆ ವಹಿಸಿದ್ದರು, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕೃಷಿ ಇಲಾಖೆ ನಿವೃತ್ತ ಅಧಿಕಾರಿ ಜಿ.ಎಚ್. ಶ್ರೀರಂಗ, ರಾಗ ಕ್ರಿಯೇಷನ್ಸ್ ಅಧ್ಯಕ್ಷ ಆನಂದಶೆಟ್ಟಿ, ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್ ಉಪಸ್ಥಿತರಿದ್ದರು.

# ತಿರುಪತಿ ದೇಗುಲಕ್ಕೆ ಬಾಂಬ್ ಬೆದರಿಕೆ; ಪಾಕ್ ಐಎಸ್‌ಐ, ಎಲ್‌ಟಿಟಿಇ ಉಗ್ರ ಸಂಘಟನೆ ಷಡ್ಯಂತ್ರ !

ತಿರುಪತಿ, ಅ.3– ಭಾರತದ ಅತ್ಯಂತ ಪ್ರಸಿದ್ಧ ತಿರುಪತಿ ತಿಮ್ಮಪ್ಪನ ದೇವಸ್ಥಾನಕ್ಕೆ ಇ–ಮೇಲ್ ಮೂಲಕ ಬಾಂಬ್ ಬೆದರಿಕೆ ಹಾಕಲಾಗಿದೆ. ಪಾಕಿಸ್ತಾನದ ಗುಪ್ತಚರ ವಿಭಾಗ ಐಎಸ್‌ಐ ಹಾಗೂ ಶ್ರೀಲಂಕಾದ ಎಲ್‌ಟಿಟಿಇ ಉಗ್ರ ಸಂಘಟನೆಗಳ ಹೆಸರಿನಲ್ಲಿ ಇಮೇಲ್ ಬೆದರಿಕೆ ಬಂದಿದ್ದು, ತಕ್ಷಣವೇ ಭದ್ರತಾ ಪಡೆಗಳು ಕಾರ್ಯಪ್ರವೃತ್ತರಾಗಿವೆ.

ತಿರುಪತಿ ತಿರುಮಲ ದೇವಸ್ಥಾನ ಆಡಳಿತ ಮಂಡಳಿಗೆ ಬಾಂಬ್ ಬೆದರಿಕೆ ಇಮೇಲ್ ಸಂದೇಶ ಬಂದ ಬೆನ್ನಲ್ಲೇ ಪೊಲೀಸರಿಗೆ ಮಾಹಿತಿ ನೀಡಲಾಗಿದೆ. ಇತ್ತ ಪೊಲೀಸರು, ತನಿಖಾ ಎಜೆನ್ಸಿಗಳು ಬಾಂಬ್ ಸ್ಕ್ವಾಡ್ ಹಾಗೂ ಶ್ವಾನದಳ ತಂಡದ ಜೊತೆ ದೇವಸ್ಥಾನಕ್ಕೆ ಆಗಮಿಸಿ ತಪಾಸಣೆ ನಡೆಸಿದ್ದಾರೆ. ದೇವಸ್ಥಾನ ಸುತ್ತ ಮುತ್ತ ತಪಾಸಣೆ ನಡೆಸಲಾಗಿದೆ. ಇದೀಗ ದೇವಸ್ಥಾನ ಸುತ್ತಮುತ್ತ ಎಲ್ಲಾ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ.

ಬಾಂಬ್ ಬೆದರಿಕೆ ಇ ಮೇಲ್ ಸಂದೇಶದಲ್ಲಿ ತಾವು ಪಾಕಿಸ್ತಾನ ಐಎಸ್‌ಐ ಹಾಗೂ ಶ್ರೀಲಂಕಾದ ಎಲ್‌ಟಿಟಿಇ ಉಗ್ರ ಸಂಘಟನೆಗಳಿಂದ ಈ ಸಂದೇಶ ನೀಡುತ್ತಿದ್ದೇವೆ ಎಂದು ಉಲ್ಲೇಖಿಸಲಾಗಿದೆ. ಬಾಂಬ್ ಬೆದರಿಕೆ ಕರೆ ಹಿಂದೆ ಉಗ್ರ ಸಂಘಟನೆಗಳ ಷಡ್ಯಂತ್ರ ಕುರಿತು ತನಿಖೆ ತೀವ್ರಗೊಂಡಿದೆ.

**ಇ–ಮೇಲ್‌ನಲ್ಲಿ ಏನಿದೆ?:** ಪಾಕಿಸ್ತಾನದ ಗುಪ್ತಚರ ಇಲಾಖೆ ಐಎಸ್‌ಐ ಘಟಕ ಹಾಗೂ ಶ್ರೀಲಂಕಾದ ಮಾಜಿ ಎಲ್‌ಟಿಟಿಇ ಉಗ್ರ ಸಂಘಟನೆ ಒಗ್ಗಟ್ಟಾಗಿ ಈ ಕಾರ್ಯಾಚರಣೆ ನಡೆಸುತ್ತಿದೆ. ಇದಕ್ಕೆ ಐಪಿಎಸ್ ಅಧಿಕಾರಿ ಡೇವಿಡ್ಸನ್ ದೇವಸಿರ್ವರ್ಥಂ ಗುಪ್ತಚರ ವಿಭಾಗದ ಎಡಿಜಿಪಿ ಆಗಿದ್ದಾಗ, ತಮ್ಮ ಪತ್ನಿಯ ಟ್ರಾವೆಲ್ ಎಜೆನ್ಸಿ ಮೂಲಕ ನಕಲಿ ಪಾಸ್‌ಪೋರ್ಟ್ ನೀಡಿದ್ದಾರೆ. ಭಾರತದ ತೀರ್ಥ ಕ್ಷೇತ್ರದಲ್ಲಿ ಕಾರ್ಯಾಚರಣೆ ನಡೆಸಲು ಕೊಸೊವಾದಲ್ಲಿ ಮೊಸಾದ್ ನೇತೃತ್ವದಲ್ಲಿ ತರಬೇತಿ ನೀಡಲಾಗಿದೆ. ತಿರುಪತಿಯಲ್ಲಿ ಶುಕ್ರವಾರ ಬಾಂಬ್ ಸ್ಫೋಟಗೊಳ್ಳಲಿದೆ. ತಮಿಳುನಾಡಿನ ಸಮಸ್ಯೆಗಳನ್ನು, ತಿರುಪತಿಗೆ ಸ್ಥಳಾಂತರ ಮಾಡುತ್ತಿರುವುದಕ್ಕೆ ಕ್ಷಮೆ ಇರಲಿ ಎಂದು ಇಮೇಲ್‌ನಲ್ಲಿ ಹೇಳಲಾಗಿದೆ.

ತಿರುಪತಿ ಬಾಂಬ್ ಬೆದರಿಕೆ ಪ್ರಕರಣವನ್ನು ತನಿಖಾ ಎಜೆನ್ಸಿ ಗಂಭೀರವಾಗಿ ಪರಿಗಣಿಸಿದೆ. ಸದ್ಯ ದೇಗುಲದ ಸುತ್ತಮುತ್ತಲಿನ ಕಾರ್ಯಾಚರಣೆ ಪೂರ್ಣಗೊಂಡಿದೆ. ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ.

# ನಾಯಕತ್ವ ಬದಲಾವಣೆ 'ಕೆಂಡ'ಕ್ಕೆ ತುಪ್ಪ ಸುರಿದ ಜಮೀರ್

**• ಸಿಎಂ–ಡಿಸಿಎಂ ಬೆಂಬಲಿಗರು ಮತ್ತೆ ನಾಯಕರ ಪರ ಬ್ಯಾಟ್ • ಪರಿಸ್ಥಿತಿ ಗಂಭೀರತೆ ಅರಿತು ರಾಜ್ಯಕ್ಕೆ ಧಾವಿಸಿದ ಸುರ್ಜೇವಾಲ • ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರೊಂದಿಗೆ ಗಹನ ಚರ್ಚೆ**



ಜಮೀರ್

ಬೆಂಗಳೂರು, ಅ.3(ಕೆಎಂಶಿ)– ವಸತಿ ಸಚಿವ ಜಮೀರ್ ಅಹಮದ್ ಖಾನ್ ಸಿಡಿಸಿದ ಬಾಂಬ್ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ಆಂತರಿಕ ಕದನದ ಬೆಂಕಿಗೆ ಮತ್ತಷ್ಟು ತುಪ್ಪ ಸುರಿದಂತಾಗಿದೆ.

ಅಧಿಕಾರ ಹಂಚಿಕೆ ಕುರಿತಂತೆ ಸಿಎಂ ಹಾಗೂ ಡಿಸಿಎಂ ಬಣಗಳ ನಡುವೆ ವಾದ–ವಿವಾದ ಬಹಿರಂಗವಾಗಿಯೇ ನಡೆದು, ಸರ್ಕಾರ ಮತ್ತು ಪಕ್ಷಕ್ಕಾಗುತ್ತಿರುವ ಮುಜುಗರ ತಪ್ಪಿಸಲು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಬೆಳ್ಳಂಬೆಳಗ್ಗೆ ನಗರಕ್ಕೆ ಧಾವಿಸಿದರು. ಪುಲಿಕೇಶಿ ವಿಧಾನಸಭಾ ಕ್ಷೇತ್ರದಲ್ಲಿಯೂ ಮತಗಳ್ಳತನ ಪ್ರಕರಣದ ಪರಿಶೀಲನೆ ನೆಪದಲ್ಲಿ ಸುರ್ಜೇವಾಲ ನಗರಕ್ಕೆ ಆಗಮಿಸುತ್ತಿದ್ದಂತೆ ಶಿವಕುಮಾರ್ ಅವರನ್ನು ತಾವು ತಂಗಿದ್ದ ಹೋಟೆಲ್‌ಗೆ ಕರೆಸಿಕೊಂಡು ಮುಖಾಮುಖಿ ಚರ್ಚೆ ಮಾಡಿದ್ದಾರೆ.

ನಂತರ ಶಿವಕುಮಾರ್ ಜೊತೆಗೂಡಿ ಪುಲಿಕೇಶಿ ವಿಧಾನಸಭಾ ಕ್ಷೇತ್ರದ ಕೆಲವು ಭಾಗಗಳಿಗೆ ತೆರಳಿ ಸಾರ್ವಜನಿಕರು ಹಾಗೂ ಪಕ್ಷದ ಕಾರ್ಯಕರ್ತರ ಜೊತೆ ಮತಗಳ್ಳತನದ ಬಗ್ಗೆ ಚರ್ಚೆ ನಡೆಸಿದರು. ಕ್ಷೇತ್ರದಿಂದ ಹಿಂತಿರುಗಿದ ನಂತರವೂ ಸುರ್ಜೇವಾಲ ಹಾಗೂ ಶಿವಕುಮಾರ್ ಮತ್ತೊಂದು ಸುತ್ತಿನ ಮಾತುಕತೆ ನಡೆಸಿದ್ದಾರೆ.

ಸಂಜೆವರೆಗೂ ಸಿಎಂ ಭೇಟಿ ಮಾಡದ ಸುರ್ಜೇವಾಲ, ಸಂಪುಟದ ಹಿರಿಯ ಸಚಿವರು ಮತ್ತು ಶಾಸಕರನ್ನು ತಮ್ಮ ಬಳಿ ಕರೆಸಿಕೊಂಡು ಚರ್ಚಿಸಿದರು. ದಸರಾ ಉತ್ಸವಕ್ಕೂ ಮುನ್ನ ಜಮೀರ್ ಅಹಮದ್ ಬಳ್ಳಾರಿಯಲ್ಲಿ ಹಠಾತ್ ಹೇಳಿಕೆ ನೀಡಿ, ಇನ್ನು 8–10 ದಿನದಲ್ಲಿ ಸಿಎಂ ಅವರು ಸಂಪುಟ ಪುನರ್ ರಚನೆ ಮಾಡಲಿದ್ದು, ಬಿ.ನಾಗೇಂದ್ರ ಅವರನ್ನು ಮಂತ್ರಿಮಂಡಲಕ್ಕೆ ಮತ್ತೆ ಸೇರ್ಪಡೆ ಮಾಡಿಕೊಳ್ಳುತ್ತಾರೆ ಎಂದಿದ್ದರು.

ಅಲ್ಲದೆ, ಸಿದ್ದರಾಮಯ್ಯ ಅವರೇ ಐದು ವರ್ಷಗಳ ಆಡಳಿತಾವಧಿ ಪೂರ್ಣಗೊಳಿಸುತ್ತಾರೆ ಎಂದು ಬಾಂಬ್ ಸಿಡಿಸಿದ್ದರು. ತದನಂತರ ಶಿವಕುಮಾರ್ ಅವರ ಹತ್ತಿರ ಸಂಬಂಧಿ ಹಾಗೂ ಶಾಸಕ ರಂಗನಾಥ್ ಸೇರಿದಂತೆ ಕೆಲವು ಡಿಸಿಎಂ ಪರ ಬಹಿರಂಗವಾಗಿಯೇ ಹೇಳಿಕೆ ನೀಡಿ, ಶಿವಕುಮಾರ್ ಪಕ್ಷಕ್ಕಾಗಿ ಹಗಲು–ರಾತ್ರಿ ದುಡಿದಿದ್ದು, ಇದೇ ಅವಧಿಯಲ್ಲೇ ಸಿಎಂ ಆಗುತ್ತಾರೆ ಎಂದಿದ್ದರು.

ಶಿವಕುಮಾರ್ ಬೆಂಬಲಿಗರು ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡುತ್ತಿದ್ದಂತೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮೈಸೂರು ಪ್ರವಾಸದಲ್ಲಿದ್ದ ಸಿದ್ದರಾಮಯ್ಯ, ಪೂರ್ಣಾವಧಿಗೆ ನಾನೇ ಸಿಎಂ ಎನ್ನುವ ಮೂಲಕ ತಿರುಗೇಟು ನೀಡಿದ್ದರು. ಅಲ್ಲದೆ, ಮುಂದಿನ ವರ್ಷದ ದಸರಾ ಮಹೋತ್ಸವವನ್ನೂ ನಾನೇ ನಡೆಸುತ್ತೇನೆ. ನಿಮಗೆ ಅನುಮಾನವೇ ಎಂಬ ಹೇಳಿಕೆ ನೀಡುತ್ತಿದ್ದಂತೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸೇರಿದಂತೆ ಕೆಲವರು ಸಿಎಂ ಹೇಳಿಕೆ ಬೆಂಬಲಿಸಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

# ಆಯುಧ ಪೂಜೆ ಬೆನ್ನ ಹಿಂದೆಯೇ ಮೈಸೂರಿನಲ್ಲಿ ಹೂವು, ಹಣ್ಣು ಬೆಲೆ ದಿಢೀರ್ ಇಳಿಕೆ

ಮೈಸೂರು, ಅ.3(ಬಿಎಲ್‌ಯು)– ಆಯುಧ ಪೂಜೆ ಹಿನ್ನೆಲೆಯಲ್ಲಿ ದುಬಾರಿಯಾಗಿದ್ದ ಹೂವು, ಹಣ್ಣು ಸೇರಿದಂತೆ ಹಲವು ವಸ್ತುಗಳ ಬೆಲೆ ದಿಢೀರ್ ಕುಸಿದಿದೆ.

ದಸರಾ ಸಂದರ್ಭದಲ್ಲಿ ಆಯುಧ ಪೂಜೆ ಸಂಭ್ರಮ ಮನೆ ಮಾಡಿತ್ತು. ಕೈಗಾರಿಕೆಗಳು, ಕಚೇರಿಗಳು, ಕಾರು, ಬೈಕ್, ಸ್ಕೂಟರ್ ಶೋ ರೂಂ ಸೇರಿದಂತೆ ಇತರೆಡೆ ಆಯುಧ ಪೂಜೆಯನ್ನು ಅದ್ಧೂರಿಯಾಗಿ ಆಚರಣೆ ಮಾಡಲಾಯಿತು.

ಆಯುಧ ಪೂಜೆಗೆ ಮೂರ್ನಾಲ್ಕು ದಿನ ಇರುವಾಗಲೇ ಹೂವು, ಹಣ್ಣು ಸೇರಿದಂತೆ ಇತರೆ ವಸ್ತುಗಳ ಬೆಲೆ ದಿಢೀರ್ ಏರಿಕೆಯಾಗಿತ್ತು. ಬೆಲೆ ಹೆಚ್ಚಾದರೂ ಅನಿವಾರ್ಯ ಇದ್ದ ಕಾರಣ ಜನರು ದುಬಾರಿ ಬೆಲೆ ಕೊಟ್ಟು ಅವಶ್ಯ ವಸ್ತುಗಳನ್ನು ಖರೀದಿಸಿದ್ದರು.

ಸೆಪ್ಟೆಂಬರ್ 28ರಿಂದ ಅಕ್ಟೋಬರ್ 1ರವರೆಗೆ ಸೇವಂತಿಗೆ ಹೂವು ಒಂದು ಮಾರಿಗೆ 100 ರಿಂದ 120 ರೂಪಾಯಿಗೆ ಮಾರಾಟವಾಗುತ್ತಿತ್ತು. ಸೇಬು ಮತ್ತು ದಾಳಿಂಬೆ ಕೆ.ಜಿ.ಗೆ 180 ರಿಂದ 220 ರೂಪಾಯಿವರೆಗೆ ಮಾರಾಟವಾಗುತ್ತಿತ್ತು. ಆದರೆ, ಆಯುಧ ಪೂಜೆ ಹಾಗೂ ವಿಜಯ ದಶಮಿ ಮುಗಿದ ಮಾರನೇ ದಿನ, ಇಂದು ಹೂವು, ಹಣ್ಣುಗಳ ಬೆಲೆ ದಿಢೀರ್ ಇಳಿಕೆಯಾಗಿದೆ. ಸೇವಂತಿಗೆ ಮಾರಿಗೆ 20 ರಿಂದ 30 ರೂಪಾಯಿ, ಸೇಬು ಮತ್ತು ದಾಳಿಂಬೆ 120ರಿಂದ 140 ರೂಪಾಯಿಗಿಳಿದಿದೆ.

ನಗರದ ಜೆ.ಕೆ.ಮೈದಾನದ ಫುಟ್‌ಪಾತ್‌ನಲ್ಲಿ ಮೊನ್ನೆ ಹೂವಿನ ರಾಶಿ ಸುರಿದು ಮಾರಾಟ ಮಾಡುತ್ತಿದ್ದರು. ಒಂದು ರೀತಿ ಜಾತ್ರೆ ಸಂಭ್ರಮವಿತ್ತು. ಆದರೆ ಇಂದು ಮಾರಾಟಗಾರರಿಲ್ಲದೆ ಇಡೀ ರಸ್ತೆ ಬಿಕೋ ಎನ್ನುತ್ತಿತ್ತು. ಅಲ್ಲೊ ಇಲ್ಲೊ ಇದ್ದ ಹೂವು ಮಾರಾಟಗಾರರು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದರು.

# ಶ್ರಮಜೀವಿ ಮಲ್ಲಿಕಾರ್ಜುನ ಖರ್ಗೆ ಅವರಿಗೆ ವಿಶ್ರಾಂತಿ ಪಡೆಯಲು ಮನವಿ ಮಾಡಿದ್ದೇನೆ

## ಖರ್ಗೆ ಆರೋಗ್ಯ ವಿಚಾರಿಸಿದ ಬಳಿಕ ಕೆ.ಸಿ.ವೇಣುಗೋಪಾಲ್ ಮಾಹಿತಿ



ಬೆಂಗಳೂರು,ಅ.3– ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರ ಆರೋಗ್ಯ ಸುಧಾರಿಸುತ್ತಿದೆ. ಶ್ರಮಜೀವಿಯಾದ ಅವರು ವಿಶ್ರಾಂತಿ ಪಡೆಯಲು ಮನವಿ ಮಾಡಿದ್ದೇವೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ತಿಳಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರ ಆರೋಗ್ಯ ವಿಚಾರಿಸಿದ ಬಳಿಕ ವೇಣುಗೋಪಾಲ್ ಅವರು ಮಾಧ್ಯಮಗಳಿಗೆ ಶುಕ್ರವಾರ ಪ್ರತಿಕ್ರಿಯೆ ನೀಡಿದರು.

ಆರೋಗ್ಯ ಸಮಸ್ಯೆಯಿಂದ ಚಿಕಿತ್ಸೆ ಪಡೆದಿರುವ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರ ಆರೋಗ್ಯ ವಿಚಾರಿಸಲು ಭೇಟಿಯಾಗಿದ್ದೆವು. ಈಗ ಅವರ ಆರೋಗ್ಯ ಸುಧಾರಿಸುತ್ತಿದೆ. ನಮ್ಮ ಅಧ್ಯಕ್ಷರು ಶ್ರಮಜೀವಿ. ದಿನದ 24 ತಾಸು ಕೂಡ ಪಕ್ಷಕ್ಕಾಗಿ ದುಡಿಯುತ್ತಾರೆ. ಎಲ್ಲೇ ಅವರ ಉಪಸ್ಥಿತಿ ಬಯಸಿದರೂ ಅವರು ಪಕ್ಷದ ಕಾರ್ಯಕ್ರಮಗಳಿಗೆ ತೆರಳುತ್ತಿದ್ದರು. ಅದು ಈಶಾನ್ಯ ರಾಜ್ಯಗಳಾಗಲಿ, ಯಾವುದೇ ಮೂಲೆ ಇದ್ದರೂ ಅವರು ತೆರಳುತ್ತಿದ್ದರು ಎಂದರು.

### ಅಗತ್ಯ ಬಿದ್ದಾಗ ಸೂಕ್ತ ತೀರ್ಮಾನ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಾವೇ ಐದು ವರ್ಷ ಸಿಎಂ ಆಗಿರುವುದಾಗಿ ತಿಳಿಸಿದ್ದಾರೆ ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ವೇಣುಗೋಪಾಲ್, ನಾನು ಪ್ರತಿ ಬಾರಿ ಕರ್ನಾಟಕಕ್ಕೆ ಬಂದಾಗಲೂ ಇದೇ ಪ್ರಶ್ನೆ, ಇದೇ ಅಜೆಂಡಾ ಇರುತ್ತದೆ. ನಮ್ಮ ಪಕ್ಷದಲ್ಲಿ ಏನಾಗಬೇಕು ಎಂಬ ತೀರ್ಮಾನ ಮಾಡುವ ಸಾಮರ್ಥ್ಯ ಕಾಂಗ್ರೆಸ್ ಪಕ್ಷಕ್ಕೆ ಇದೆ ಈ ತೀರ್ಮಾನ ಮಾಡುವ ಅಧಿಕಾರವನ್ನು ನಮಗೆ ಬಿಡಿ. ಅಗತ್ಯ ಬಿದ್ದಾಗ ಪಕ್ಷ ತೀರ್ಮಾನ ಮಾಡಲಿದೆ ಎಂದು ತಿಳಿಸಿದರು.

ಅವರು ಮತ್ತೆ ಪಕ್ಷದ ಕೆಲಸದಲ್ಲಿ ತೊಡಗಿಸಿಕೊಳ್ಳಲು ಉತ್ಸುಕರಾಗಿದ್ದು, ಆರೋಗ್ಯ ಗಮನಿಸಿಕೊಂಡು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳುವಂತೆ ನಾವು ಮನವಿ ಮಾಡಿದ್ದೇವೆ. ಸೋನಿಯಾ ಗಾಂಧಿ ಹಾಗೂ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರತಿನಿತ್ಯ ಖರ್ಗೆ ಅವರ ಸಂಪರ್ಕದಲ್ಲಿ ಇದ್ದಾರೆ. ಅವರ ಆರೋಗ್ಯ ವಿಚಾರಿಸುತ್ತಿದ್ದಾರೆ ಎಂದು ತಿಳಿಸಿದರು.

# ಮುಖ್ಯಮಂತ್ರಿ ಬದಲಾವಣೆ ಚರ್ಚೆ ಎಐಸಿಸಿ ಮಟ್ಟದಲ್ಲಿ ಆಗಿಲ್ಲ

## ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸ್ಪಷ್ಟನೆ



ಬೆಂಗಳೂರು, ಅ.3(ಕೆಎಂಶಿ)–ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ ಎಂದು ಎಐಸಿಸಿ ಪ್ರಧಾನಕಾರ್ಯದರ್ಶಿ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಅನಾರೋಗ್ಯದಿಂದ ವಿಶ್ರಾಂತಿ ತೆಗೆದುಕೊಳ್ಳುತ್ತಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದ್ದಲ್ಲದೆ, ಸುಮಾರು 40 ನಿಮಿಷಕ್ಕೂ ಹೆಚ್ಚು ಕಾಲ ರಾಜಕೀಯ ವಿದ್ಯಮಾನ ಕುರಿತು ಚರ್ಚಿಸಿದರು.

ಖರ್ಗೆ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸುರ್ಜೇವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಬದಲಾವಣೆ ಕುರಿತು ಎಐಸಿಸಿ ಮಟ್ಟದಲ್ಲಿ ಯಾವುದೇ ಚರ್ಚೆ ಆಗಿಲ್ಲ.

ಅಧಿಕಾರ ಹಸ್ತಾಂತರ ವಿಷಯ ಚರ್ಚೆ ಕುರಿತು ಯಾರೂ ಪಕ್ಷದ ಚೌಕಟ್ಟು ಮೀರಬಾರದು ಎಂಬ ಸೂಚನೆ ಕೊಟ್ಟಿದ್ದರೂ ಕೆಲವರು ಅದನ್ನು ಮೀರಿ ಮಾತನಾಡಿದ್ದಾರೆ. ಈ ಬಗ್ಗೆ ಗಮನ ಹರಿಸುವಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಕರೆಸಿ ಮಾತನಾಡಿ, ಸೂಚನೆ ಕೊಟ್ಟಿದ್ದೇನೆ ಎಂದರು.

# ಧರ್ಮಸ್ಥಳ ಪ್ರಕರಣ: ಸಮೀರ್ ಎಂ.ಡಿ ಸೇರಿ ಐವರು ಯೂಟ್ಯೂಬರ್‌ಗಳಿಗೆ ಎಸ್‌ಐಟಿ ನೋಟಿಸ್

ಧರ್ಮಸ್ಥಳ, ಅ.3– ಧರ್ಮಸ್ಥಳ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣಕ್ಕೆ ಸಂಬಂಧಿಸಿದ ತನಿಖೆಯನ್ನು ವಿಶೇಷ ತನಿಖಾ ತಂಡ (SIT) ಮತ್ತಷ್ಟು ಚುರುಕುಗೊಳಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ವಿಡಿಯೋಗಳನ್ನು ತಯಾರಿಸಿದ ಹಲವಾರು ಯೂಟ್ಯೂಬರ್‌ಗಳಿಗೆ SIT ಅಧಿಕಾರಿಗಳು ಮತ್ತೊಮ್ಮೆ ನೋಟಿಸ್ ಜಾರಿಗೊಳಿಸಿದ್ದು, ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

ಪ್ರಕರಣದಲ್ಲಿ ವಿವಾದಿತ ಯೂಟ್ಯೂಬರ್ ಸಮೀರ್ ಎಂಡಿ ಸೇರಿದಂತೆ ಐದಕ್ಕೂ ಹೆಚ್ಚು ಯೂಟ್ಯೂಬರ್‌ಗಳಿಗೆ ನೋಟಿಸ್ ನೀಡಲಾಗಿದ್ದು, ಅವರು ಬೆಳ್ತಂಗಡಿ ಎಸ್‌ಐಟಿ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗುವ ಸಾಧ್ಯತೆಯಿದೆ.

ಎಸ್‌ಐಟಿ ಅಧಿಕಾರಿಗಳು ಈ ವಿಚಾರಣೆಗಾಗಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದ್ದು,ಈ ಬಾರಿ ಯಾವೆಲ್ಲಾ ಪ್ರಶ್ನೆಗಳನ್ನು ಕೇಳಬೇಕು ಎಂಬುದರ ಕುರಿತು ಅಧಿಕಾರಿಗಳು ಪೂರ್ವ ಸಿದ್ಧತೆ ನಡೆಸಿದ್ದಾರೆ. ಈ ಹಿಂದಿನ ತನಿಖೆಯ ಸಂದರ್ಭದಲ್ಲಿ ಆರೋಪಿ ಚಿನ್ನಯ್ಯ ನೀಡಿದ ಹೇಳಿಕೆಗಳನ್ನು ಆಧರಿಸಿ ತನಿಖೆಯನ್ನು ಮುಂದುವರಿಸಿದೆ.

**2021ನೇ ಸಾಲಿನ ಚಲನಚಿತ್ರ ಪ್ರಶಸ್ತಿ ಪ್ರಕಟ**

# '777–ಚಾರ್ಲಿ'ಯ ರಕ್ಷಿತ್ ಶೆಟ್ಟಿ, 'ಮ್ಯೂಟ್'ನ ಅರ್ಚನಾ ಜೋಯಿಸ್ ಅತ್ಯುತ್ತಮ ನಟ–ನಟಿ

## 'ದೊಡ್ಡಹಟ್ಟಿ ಬೋರೇಗೌಡ'; 777–ಚಾರ್ಲಿ; 'ಬಿಸಿಲು ಕುದುರೆ' ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಅತ್ಯುತ್ತಮ ಚಿತ್ರಗಳು

ಬೆಂಗಳೂರು, ಅ.3–2021ನೇ ಸಾಲಿನ ಚಲನಚಿತ್ರ ಪ್ರಶಸ್ತಿಗಳು ಪ್ರಕಟವಾಗಿದ್ದು, ರಕ್ಷಿತ್ ಶೆಟ್ಟಿ 777–ಚಾರ್ಲಿ ಚಿತ್ರಕ್ಕೆ ಅತ್ಯುತ್ತಮ ನಟ ಹಾಗೂ ಮ್ಯೂಟ್ ಚಿತ್ರದ ಅರ್ಚನಾ ಜೋಯಿಸ್ ಅವರಿಗೆ ಅತ್ಯುತ್ತಮ ನಟಿ ಪ್ರಶಸ್ತಿ ಲಭಿಸಿದೆ.

ಮೊದಲ ಅತ್ಯುತ್ತಮ ಚಿತ್ರವಾಗಿ 'ದೊಡ್ಡಹಟ್ಟಿ ಬೋರೇಗೌಡ' ಆಯ್ಕೆಯಾಗಿದ್ದು, ಆ ಚಿತ್ರದ ನಿರ್ಮಾಪಕ ಕೆ.ಎಂ. ಲೋಕೇಶ್ ಅವರಿಗೆ ಕೆಸಿಎನ್ ಗೌಡ ಪ್ರಶಸ್ತಿ ಹಾಗೂ ನಿರ್ದೇಶಕ ಕೆ.ಎಂ.ರಘು ಅವರಿಗೆ ಹೆಚ್‌ಎಲ್‌ಎನ್ ಸಿಂಹ ಪ್ರಶಸ್ತಿ ದೊರೆತಿದೆ. ಈ ಚಿತ್ರವು ಎರಡು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದು, ಮೊದಲ ಅತ್ಯುತ್ತಮ ಚಿತ್ರ ಮಾತ್ರವಲ್ಲದೆ, ಅತ್ಯುತ್ತಮ ಚಿತ್ರಕಥೆಗಾಗಿ ಕೆ.ಎಂ.ರಘು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಎರಡನೇ ಅತ್ಯುತ್ತಮ ಚಿತ್ರವಾಗಿ 777–ಚಾರ್ಲಿ ಆಯ್ಕೆಯಾಗಿದ್ದು, ಈ ಚಿತ್ರ 4 ವಿಭಾಗಗಳಲ್ಲಿ ಪ್ರಶಸ್ತಿ ಪಡೆದಿದೆ. ಎರಡನೇ ಅತ್ಯುತ್ತಮ ಚಿತ್ರ ಮಾತ್ರವಲ್ಲದೆ, ಅತ್ಯುತ್ತಮ ನಟನೆಗಾಗಿ ರಕ್ಷಿತ್ ಶೆಟ್ಟಿ ಅವರಿಗೆ ಸುಬ್ಬಯ್ಯ ನಾಯ್ಡು ಪ್ರಶಸ್ತಿ, ಅತ್ಯುತ್ತಮ ಸಂಕಲನಕ್ಕಾಗಿ ಪ್ರತೀಕ್ ಶೆಟ್ಟಿ ಅವರಿಗೆ ಪ್ರಶಸ್ತಿ ದೊರೆತಿದ್ದು, ಈ ಚಿತ್ರದ 'ಮಡಿಲಿನಲ್ಲಿ ಕಡಲಿನಷ್ಟು ಹನಿಗಳಿದ್ದರು...' ಹಾಡಿಗೆ ಅತ್ಯುತ್ತಮ ಗೀತೆ ರಚನೆಗಾಗಿ ನಾಗಾರ್ಜುನ ಶರ್ಮಾ ಅವರಿಗೆ ಪ್ರಶಸ್ತಿ ಲಭಿಸಿದೆ.

ಮೂರನೇ ಅತ್ಯುತ್ತಮ ಚಿತ್ರವಾಗಿ 'ಬಿಸಿಲು ಕುದುರೆ' ಆಯ್ಕೆಯಾದರೆ, ವಿಶೇಷ ಸಾಮಾಜಿಕ ಕಾಳಜಿಯ ಚಿತ್ರವಾಗಿ 'ಭಾರತದ ಪ್ರಜೆಗಳಾದ ನಾವು' ಚಿತ್ರ ಆಯ್ಕೆಯಾಗಿದ್ದು, ಈ ಚಿತ್ರದ ನಿರ್ಮಾಪಕ ಹಾಗೂ ನಿರ್ದೇಶಕರಾಗಿರುವ ಡಾ. ಕೃಷ್ಣಮೂರ್ತಿ ಚಮರಮ್ ಪ್ರಶಸ್ತಿ ಪಡೆದಿದ್ದಾರೆ.



ರಕ್ಷಿತ್ ಶೆಟ್ಟಿ (777–ಚಾರ್ಲಿ) ಅತ್ಯುತ್ತಮ ನಟ ಪ್ರಶಸ್ತಿ



ಅರ್ಚನಾ ಜೋಯಿಸ್ (ಮ್ಯೂಟ್) ಅತ್ಯುತ್ತಮ ನಟಿ ಪ್ರಶಸ್ತಿ




ಮೊದಲ ಅತ್ಯುತ್ತಮ ಚಿತ್ರ 'ದೊಡ್ಡಹಟ್ಟಿ ಬೋರೇಗೌಡ'




ಎರಡನೇ ಅತ್ಯುತ್ತಮ ಚಿತ್ರ 777–ಚಾರ್ಲಿ




ಅತ್ಯುತ್ತಮ ಕರ್ನಾಟಕ ಪ್ರಾದೇಶಿಕ ಭಾಷಾ ಚಿತ್ರ 'ನಾಡ ಪೆದ ಆಶಾ' (ಕೊಡವ)




ಮೂರನೇ ಅತ್ಯುತ್ತಮ ಚಿತ್ರ 'ಬಿಸಿಲು ಕುದುರೆ'

ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರವಾಗಿ ಹೊಂಬಾಳೆ ಫಿಲ್ಮ್ಸ್ ನಿರ್ಮಾಣದ 'ಯುವರತ್ನ' ಆಯ್ಕೆಯಾದರೆ, ಅತ್ಯುತ್ತಮ ಮಕ್ಕಳ ಚಿತ್ರವಾಗಿ ಈಶ್ವರ್ ಕ್ರಿಯೇಷನ್ಸ್‌ನ 'ಕೇಕ್' ಆಯ್ಕೆಯಾಗಿದೆ. ಈ ಚಿತ್ರದಲ್ಲಿ ನಟಿಸಿರುವ ಮಾಸ್ಟರ್ ಅತೀಶ್ ಶೆಟ್ಟಿ ಅವರಿಗೆ ಅತ್ಯುತ್ತಮ ಬಾಲನಟ ಪ್ರಶಸ್ತಿ ಲಭಿಸಿದೆ.

ನಿರ್ದೇಶಕರ ಪ್ರಥಮ ನಿರ್ದೇಶನದ ಅತ್ಯುತ್ತಮ ಚಿತ್ರವಾಗಿ ಡಾಲಿ ಧನಂಜಯ ನಿರ್ಮಿಸಿರುವ 'ಬಡವ ರಾಸ್ಕಲ್' ಆಯ್ಕೆಯಾಗಿದ್ದು, ಈ ಚಿತ್ರದ ನಿರ್ದೇಶಕ ಶಂಕರ್ ಹೆಚ್. (ಶಂಕರ್ ಗುರು) ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಅತ್ಯುತ್ತಮ ಕರ್ನಾಟಕ ಪ್ರಾದೇಶಿಕ ಭಾಷಾ ಚಿತ್ರವಾಗಿ ಕೊಡವ ಚಿತ್ರವಾದ 'ನಾಡ ಪೆದ ಆಶಾ' ಆಯ್ಕೆಯಾಗಿದ್ದು, ಈ ಚಿತ್ರದ ನಿರ್ಮಾಪಕಿ ಜೆ.ಸಿ.ಹರಿಣಿ ಹಾಗೂ ನಿರ್ದೇಶಕ ಪ್ರಕಾಶ್ ಕಾರ್ಯಪ್ಪ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈ ಚಿತ್ರದ ನಿರ್ಮಾಪಕಿ ಹಾಗೂ ನಿರ್ದೇಶಕ ಪತಿ–ಪತ್ನಿಯರು ಎಂಬುದು ವಿಶೇಷ.

ಅತ್ಯುತ್ತಮ ಪೋಷಕ ನಟ ಪ್ರಶಸ್ತಿಯು 'ರತ್ನನ್ ಪ್ರಪಂಚ' ಚಿತ್ರದ ಪ್ರಮೋದ್ ಅವರಿಗೆ ಹಾಗೂ ಇದೇ ಚಿತ್ರದಲ್ಲಿ ನಟಿಸಿರುವ ಉಮಾಶ್ರೀ ಅವರಿಗೆ ಪೋಷಕ ನಟಿ ಪ್ರಶಸ್ತಿ ಲಭಿಸಿದೆ.

'9 ಸುಳ್ಳು ಕತೆಗಳು' ಚಿತ್ರಕ್ಕೆ ಅತ್ಯುತ್ತಮ ಕಥೆ ಪ್ರಶಸ್ತಿ ಲಭಿಸಿದ್ದು, 'ತಾಯಿ ಕಸ್ತೂರಿ ಗಾಂಧಿ' ಚಿತ್ರಕ್ಕೆ ಸಂಭಾಷಣೆ ಬರೆದಿರುವ ಬರಗೂರು ರಾಮಚಂದ್ರಪ್ಪ ಅವರಿಗೆ ಅತ್ಯುತ್ತಮ ಸಂಭಾಷಣೆಕಾರ ಪ್ರಶಸ್ತಿ ಲಭಿಸಿದರೆ, ಕೊಂಕಣಿ ಚಿತ್ರವಾದ 'ಆಮ್ಮೆ ಸಂಸಾರ' ಚಿತ್ರದ ಛಾಯಾಗ್ರಾಹಕ ಭುವನೇಶ್ ಪ್ರಭು ಅವರಿಗೆ ಅತ್ಯುತ್ತಮ ಛಾಯಾಗ್ರಹಣ ಪ್ರಶಸ್ತಿ ಲಭಿಸಿದೆ. 'ಬಿಸಿಲು ಕುದುರೆ' ಚಿತ್ರದ ಸಂಗೀತ ನಿರ್ದೇಶಕ ಇಮ್ತಿಯಾಜ್ ಸುಲ್ತಾನ್ ಅವರಿಗೆ ಅತ್ಯುತ್ತಮ ಸಂಗೀತ ನಿರ್ದೇಶನ ಪ್ರಶಸ್ತಿ ದೊರೆತಿದೆ.

'ಭೈರವಿ' ಚಿತ್ರದಲ್ಲಿ ನಟಿಸಿರುವ ಬೇಬಿ ಭೈರವಿ ಅವರಿಗೆ ಅತ್ಯುತ್ತಮ ಬಾಲನಟಿ ಪ್ರಶಸ್ತಿ ದೊರೆತರೆ, 'ಭಜರಂಗಿ–2' ಚಿತ್ರ ಅತ್ಯುತ್ತಮ ಕಲಾ ನಿರ್ದೇಶನ ಪ್ರಶಸ್ತಿಗೆ ಆಯ್ಕೆಯಾಗಿದ್ದು, ಕಲಾನಿರ್ದೇಶಕ ರವಿ ಸಂತೆಹಕ್ಲು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ.

'ಶ್ರೀ ಜಗನ್ನಾಥ ದಾಸರು' ಚಿತ್ರದ 'ರಾಮದೂತನ ಪಾದ...' ಹಾಡಿಗಾಗಿ ಅನೀಶ್ ಕೇಶವ ರಾವ್ ಅತ್ಯುತ್ತಮ ಹಿನ್ನೆಲೆ ಗಾಯಕ ಪ್ರಶಸ್ತಿಗೆ ಆಯ್ಕೆಯಾದರೆ, 'ದಂಡಿ' ಚಿತ್ರದ 'ಮುಗಿಲೇ ಮಾತನಾಡು ಮನಸಾಗಿ...' ಹಾಡಿಗಾಗಿ ಸಹನಾ ಎಂ.ಭಾರದ್ವಾಜ್ ಅತ್ಯುತ್ತಮ ಹಿನ್ನೆಲೆ ಗಾಯಕಿಯಾಗಿ ಆಯ್ಕೆಯಾಗಿದ್ದಾರೆ.


ತೀರ್ಪುಗಾರರ ವಿಶೇಷ ಚಿತ್ರವಾಗಿ 'ಭೈರವಿ' ಆಯ್ಕೆಯಾದರೆ, ವಸ್ತ್ರ ವಿನ್ಯಾಸಕ್ಕಾಗಿ 'ಭಜರಂಗಿ–2' ಚಿತ್ರದ ವಸ್ತ್ರ ವಿನ್ಯಾಸಕ ಯೋಗಿ ಜಿ.ರಾಜು, ತಾಯಿ ಕಸ್ತೂರಿ ಗಾಂಧಿ ಚಿತ್ರದ ಪ್ರಸಾದನಕ್ಕಾಗಿ ಶಿವಕುಮಾರ್ ಆಯ್ಕೆಯಾಗಿದ್ದಾರೆ. ಅತ್ಯುತ್ತಮ ನಿರ್ಮಾಣ ನಿರ್ವಾಹಕರಾಗಿ 'ಪೊಗರು' ಚಿತ್ರದ ಶಿವಕುಮಾರ್ ಎಸ್. (ಶಿವಾರ್ಜುನ) ಆಯ್ಕೆಯಾಗಿದ್ದಾರೆ.

**ಹುಟ್ಟುಹಬ್ಬದ ಸಂಭ್ರಮ**



ಮೈಸೂರಿನ ನರಸಿಂಹರಾಜ ಕ್ಷೇತ್ರದ ಶಾಸಕರಾದ ತನ್ವೀರ್ ಸೇಠ್ ಅವರ ಹುಟ್ಟುಹಬ್ಬವನ್ನು ತನ್ವೀರ್ ಸೇಠ್ ಫೌಂಡೇಶನ್ ಹಾಗೂ ಅಭಿಮಾನಿಗಳ ಬಳಗದ ವತಿಯಿಂದ ಸಂಭ್ರಮದಿಂದ ಆಚರಿಸಲಾಯಿತು. ಮಾಜಿ ಮೇಯರ್ ಶ್ರೀಕಂಠಯ್ಯ, ಮಾಜಿ ಉಪ ಮೇಯರ್ ಶಾಂತಕುಮಾರಿ, ಮಾಜಿ ಕಾರ್ಪೊರೇಟರ್ ರಜನಿ ಅಣ್ಣಯ್ಯ, ಮುಖಂಡರಾದ ಅಣ್ಣಯ್ಯ ಇತರರು ಉಪಸ್ಥಿತರಿದ್ದಾರೆ.

# ಗ್ಯಾರಂಟಿ ಯೋಜನೆಗಳಿಂದ ಆರ್ಥಿಕ ಸ್ಥಿತಿ ಹದಗೆಟ್ಟಿದೆ



ಬೆಂಗಳೂರು, ಅ.3– ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ 'ಐದು ಗ್ಯಾರಂಟಿ' ಯೋಜನೆಯಿಂದಾಗಿ ರಾಜ್ಯದ ಆರ್ಥಿಕ ಸ್ಥಿತಿ ಹದಗೆಟ್ಟಿದೆ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಶುಕ್ರವಾರ ಆರೋಪಿಸಿದ್ದಾರೆ.

ಕಲಬುರಗಿ ಸೇರಿದಂತೆ ಉತ್ತರ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಉಂಟಾಗಿರುವ ತೀವ್ರ ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸಲು ಸರ್ಕಾರದ ಬಳಿ ಹಣವಿಲ್ಲ ಎಂದು ದೂರಿದರು.

ಮುಂದಿನ ಒಂದು ವಾರದೊಳಗೆ ಕಲಬುರಗಿ ಮತ್ತು ನೆರೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸುತ್ತೇನೆ. ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿ ಮಾಡಿ ರಾಜ್ಯದ ಪ್ರವಾಹ ಪೀಡಿತ ಜನರಿಗೆ ಪರಿಹಾರ ನೀಡುವಂತೆ ಒತ್ತಾಯಿಸುತ್ತೇನೆ ಎಂದರು. 'ಖಾತರಿ ಯೋಜನೆ'ಗಳಿಂದಾಗಿ ರಾಜ್ಯದ ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಇದನ್ನು ಹೇಳುತ್ತಿರುವುದು ನಾನಲ್ಲ, ಕಾಂಗ್ರೆಸ್ ಶಾಸಕರೇ ಹೇಳುತ್ತಿದ್ದಾರೆ. ಆಡಳಿತ ಪಕ್ಷದ ಶಾಸಕರಲ್ಲಿ ಗೊಂದಲವಿದೆ. ಅವರು (ಕಾಂಗ್ರೆಸ್ ಶಾಸಕರು) ಇಂತಹ ಭೀಕರ ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸಲು ಸಹ ಸರ್ಕಾರದ ಬಳಿ ಹಣವಿಲ್ಲ ಎಂದು ಹೇಳುತ್ತಿದ್ದಾರೆ.

# ಇದೇ ಮೊದಲು 14 ಆನೆ ಜಂಬೂ ಸವಾರಿಯಲ್ಲಿ ಯಶಸ್ವಿಯಾಗಿ ಸಾಗಿವೆ

## ● ಡಿಸಿಎಫ್ ಡಾ. ಪ್ರಭುಗೌಡ ಪ್ರಶಂಸೆ ● ಆನೆ ಆರೈಕೆಯಲ್ಲಿ ವಿಶ್ವದಲ್ಲೇ ರಾಜ್ಯದ ಹೆಗ್ಗಳಿಕೆ



ಅಂಬಾರಿ ಆನೆಯೊಂದಿಗೆ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಮಾವುತ ವಸಂತ್, ಕಾವಾಡಿಗ ರಾಜಣ್ಣ.

ಮೈಸೂರು, ಅ.3(ಎಂಟಿವೈ)– ದಸರಾ ಮಹೋತ್ಸವದ ಜಂಬೂಸವಾರಿಯಲ್ಲಿ ಅಂಬಾರಿ ಆನೆ ಸೇರಿದಂತೆ ಎಲ್ಲಾ 14 ಆನೆಗಳು ಯಶಸ್ವಿಯಾಗಿ ತಮ್ಮ ಜವಾಬ್ದಾರಿ ನಿರ್ವಹಿಸಿವೆ ಎಂದು ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಹರ್ಷ ವ್ಯಕ್ತಪಡಿಸಿದ್ದಾರೆ.

ಮೈಸೂರು ಅರಮನೆಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇದುವರೆಗೂ ಜಂಬೂಸವಾರಿಯಲ್ಲಿ 11 ಅಥವಾ 12 ಆನೆಗಳು ಪಾಲ್ಗೊಳ್ಳುತ್ತಿದ್ದವು. ಈ ಬಾರಿ ಮೂರು ಹೊಸ ಆನೆಗಳನ್ನು ಮೆರವಣಿಗೆಯಲ್ಲಿ ಕರೆದೊಯ್ಯಲಾಗಿದೆ. ಸಿಎಫ್ ಅನುಮತಿ ನೀಡಿದ್ದರಿಂದ ಇದೇ ಮೊದಲ ಬಾರಿಗೆ 14 ಆನೆಗಳನ್ನು ಮೆರವಣಿಗೆಯಲ್ಲಿ ಕರೆದೊಯ್ಯಲಾಗಿದೆ ಎಂದರು.

ಪ್ರತಿವರ್ಷ ಕುಮ್ಕಿ ಆನೆಗಳು ಬದಲಾಗುತ್ತವೆ. ಪ್ರತಿವರ್ಷ ಹೊಸ ಹೆಣ್ಣಾನೆ ಕರೆತರಬೇಕಾಗುತ್ತದೆ. ಗರ್ಭಿಣಿಯಾಗಿರುವ, ಚಿಕ್ಕ ಮರಿ ಇರುವ ಹೆಣ್ಣಾನೆಯನ್ನು ಕರೆತರಲು ಸಾಧ್ಯವಿಲ್ಲ. ಈ ಬಾರಿ ಹೊಸದಾಗಿ ಬಂದ ರೂಪ ಮತ್ತು ಹೇಮಾವತಿ ಉತ್ತಮ ರೀತಿಯಲ್ಲಿ ಸ್ಪಂದಿಸಿವೆ.

ಆನೆ ಪಳಗಿಸುವ ಮತ್ತು ಆರೈಕೆ ಮಾಡುವ ಕಾಯಕದಲ್ಲಿ ಕರ್ನಾಟಕ ಅರಣ್ಯ ಇಲಾಖೆ ವಿಶ್ವದಲ್ಲಿಯೇ ಮುಂಚೂಣಿಯಲ್ಲಿದೆ. ಆನೆಗಳಿಗೆ ಕಾಲ ಕಾಲಕ್ಕೆ ಸರಿಯಾದ ಆಹಾರ, ಆರೋಗ್ಯ ಸೇವೆ ಒದಗಿಸುವ ಮೂಲಕ ಆನೆಗಳನ್ನು ಪ್ರೀತಿಯಿಂದ ನೋಡಿಕೊಳ್ಳುವುದರಿಂದ ನಮ್ಮಲ್ಲಿರುವ ಸಾಕಾನೆಗಳು ಉತ್ತಮವಾಗಿ ಪ್ರತಿಕ್ರಿಯಿಸುತ್ತವೆ. ಅಲ್ಲದೆ, ಮಾವುತರು, ಕಾವಾಡಿಗಳು ಆನೆ ಆರೈಕೆಯಲ್ಲಿ ಶ್ರಮಿಸುತ್ತಿದ್ದಾರೆ. ಈ ಬಾರಿ ದಸರಾ ಮಹೋತ್ಸವದಲ್ಲಿ ಎಲ್ಲಾ ಆನೆಗಳ ಮಾವುತರು, ಕಾವಾಡಿಗಳು ಉತ್ತಮ ಸೇವೆ ಸಲ್ಲಿಸಿದ್ದಾರೆ ಎಂದು ಹೇಳಿದರು.

### ಮುಂದಿನ ಬಾರಿಯೂ ಅಭಿಮನ್ಯು ಅಂಬಾರಿ ಹೊರುತ್ತಾನೆ

ದಸರಾ ಗಜಪಡೆಯ ಅಭಿಮನ್ಯುವಿಗೆ ಈಗ 59 ವರ್ಷ. ಆತ ಸಮರ್ಥವಾಗಿಯೂ, ಶಕ್ತಿಯುತವಾಗಿಯೂ ಇದ್ದಾನೆ. ನ್ಯಾಯಾಲಯದ ಆದೇಶದಂತೆ 60 ವರ್ಷದ ನಂತರ ನಿವೃತ್ತಿಗೊಳಿಸಬೇಕಾಗಿದೆ. ಇನ್ನೊಂದು ವರ್ಷ(2026)ವೂ ಅಭಿಮನ್ಯು ಅಂಬಾರಿ ಹೊರುವ ಜವಾಬ್ದಾರಿ ನಿಭಾಯಿಸಲಿದ್ದಾನೆ. ಅದರ ಆರೋಗ್ಯ ಸ್ಥಿತಿ ಮತ್ತು ಅಂದಿನ ಪರಿಸ್ಥಿತಿಗೆ ಅನುಗುಣವಾಗಿ ಇಲಾಖೆ ನಿರ್ಧಾರ ಮಾಡುತ್ತದೆ. ಪ್ರತಿ ವರ್ಷದಂತೆ ಈ ಬಾರಿಯೂ 3–4 ಆನೆಗೆ ಅಂಬಾರಿ ಹೊರುವ ತರಬೇತಿ ನೀಡಲಾಗಿದೆ. ಪ್ರಶಾಂತ, ಮಹೇಂದ್ರ, ಸುಗ್ರೀವ, ಭೀಮನಿಗೆ ಮರದ ಅಂಬಾರಿ ಹೊರಿಸಿ ತರಬೇತಿ ನೀಡಲಾಗಿದೆ.

- ಡಾ. ಐ.ಬಿ.ಪ್ರಭುಗೌಡ, ಡಿಸಿಎಫ್ ಮೈಸೂರು ವನ್ಯಜೀವಿ ವಿಭಾಗ

### ನಾಳೆ ದಸರಾ ಗಜಪಡೆಗೆ ಬೀಳ್ಕೊಡುಗೆ

ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಿವಿಧ ಕ್ಯಾಂಪ್‌ಗಳಿಂದ ಆಗಮಿಸಿ ಮೈಸೂರು ಅರಮನೆ ಆವರಣದಲ್ಲಿ ಬೀಡು ಬಿಟ್ಟಿದ್ದ ದಸರಾ ಗಜಪಡೆಗೆ ಅ.5(ಭಾನುವಾರ)ರ ಬೆಳಗ್ಗೆ 11.30ಕ್ಕೆ ಸಾಂಪ್ರದಾಯಿಕ ಪೂಜೆ ನೆರವೇರಿಸಿ ಬೀಳ್ಕೊಡಲಾಗುವುದು. ನಾಳೆಯೇ ಆನೆಗಳಿಗೆ ಬೀಳ್ಕೊಡಲು ನಿರ್ಧರಿಸಲಾಗಿತ್ತು. ಆದರೆ, ಮುಹೂರ್ತ ಸೂಕ್ತವಾಗಿಲ್ಲದ ಕಾರಣ, ಅ.5ರಂದು ದಸರಾ ಗಜಪಡೆಯನ್ನು ಅರಮನೆಯಿಂದ ಸ್ವಸ್ಥಾನಕ್ಕೆ ಕಳುಹಿಸಿಕೊಡಲು ನಿರ್ಧರಿಸಲಾಗಿದೆ.

# ದೇಶ – ವಿದೇಶ

## ದುರ್ಗಾ ಮೂರ್ತಿ ವಿಸರ್ಜನೆ ವೇಳೆ 17 ಯುವಕರು ನೀರು ಪಾಲು



**ಲಖನೌ:** ಆಗ್ರಾದಲ್ಲಿ ವಿಜಯ ದಶಮಿಯಂದು ದುರ್ಗಾ ಮೂರ್ತಿ ವಿಸರ್ಜನೆ ವೇಳೆ ನಡೆದ ಎರಡು ಪ್ರತ್ಯೇಕ ಘಟನೆಗಳಲ್ಲಿ 17ಕ್ಕೂ ಹೆಚ್ಚು ಯುವಕರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಮೊದಲ ಘಟನೆ ಆಗ್ರಾ ಜಿಲ್ಲೆಯ ಖೇರಾಗಢದಲ್ಲಿ ನಡೆದಿದ್ದು, ಅಲ್ಲಿ ಕುಸಿಯಾಪುರ್ ಗ್ರಾಮದ 14 ಯುವಕರು ಉತಂಗನ್ ನದಿಯಲ್ಲಿ ಕೊಚ್ಚಿ ಹೋಗಿದ್ದಾರೆ. ರಕ್ಷಣಾ ತಂಡ ಮೂರು ಶವಗಳನ್ನು ಹೊರತೆಗೆದಿದ್ದು, ಒಬ್ಬ ವ್ಯಕ್ತಿಯನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ. ಇನ್ನೂ 10 ಜನರಿಗಾಗಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ.

ಎರಡು ವಿಗ್ರಹಗಳನ್ನು ವಿಸರ್ಜಿಸಲು ಗ್ರಾಮಸ್ಥರು ನದಿಗೆ ಇಳಿದ ವೇಳೆ ಈ ದುರಂತ ಸಂಭವಿಸಿದೆ. ಪ್ರವಾಹದ ತೀವ್ರತೆಗೆ ಸಿಲುಕಿ ಯುವಕರು ಕೊಚ್ಚಿಕೊಂಡು ಹೋಗಿದ್ದಾರೆ. ಎರಡನೇ ಘಟನೆ ಆಗ್ರಾ ಜಿಲ್ಲೆಯ ತಾಜ್‌ಗಂಜ್ ಪ್ರದೇಶದ ಕರ್ಭನಾ ಗ್ರಾಮದಲ್ಲಿ ನಡೆದಿದ್ದು, ಇಬ್ಬರು ಯುವಕರು ನಾಪತ್ತೆಯಾಗಿದ್ದು, ಇತರ ಐದು ಯುವಕರು ಈಜಿ ದಡ ಸೇರುವಲ್ಲಿ ಯಶಸ್ವಿಯಾಗಿದ್ದಾರೆ.


## ಭಯೋತ್ಪಾದನೆಯನ್ನು ನಿಲ್ಲಿಸದಿದ್ದರೆ ಭೂಪಟದಿಂದಲೇ ಮಾಯವಾಗುತ್ತೀರಿ; ಪಾಕಿಸ್ತಾನಕ್ಕೆ ಸೇನಾ ಮುಖ್ಯಸ್ಥ ಎಚ್ಚರಿಕೆ



**ನವದೆಹಲಿ:** ಪಾಕಿಸ್ತಾನ ಮುಂದೆಯೂ ಭಯೋತ್ಪಾದಕರಿಗೆ ಸುರಕ್ಷಿತ ಸ್ವರ್ಗವನ್ನು ಒದಗಿಸುವುದನ್ನು ಮುಂದುವರಿಸಿದರೆ ಭಾರತ ಭಯೋತ್ಪಾದನೆಯ ವಿರುದ್ಧ ಮತ್ತಷ್ಟು ಕಠಿಣ ಕ್ರಮ ಕೈಗೊಳ್ಳುತ್ತದೆ ಎಂದು ಭಾರತದ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಎಚ್ಚರಿಸಿದ್ದಾರೆ. ಜನರಲ್ ದ್ವಿವೇದಿ ಇಂದು ಘಡ್ಸಾನಾ ಗ್ರಾಮದಲ್ಲಿ ಭಾರತೀಯ ಸೇನಾ ಕಂಟೋನ್ಮೆಂಟ್‌ನಲ್ಲಿ ಮಾತನಾಡುತ್ತಾ ಈ ಹೇಳಿಕೆ ನೀಡಿದ್ದಾರೆ.

ಪಾಕಿಸ್ತಾನ ಜಾಗತಿಕ ಭೂಪಟದಲ್ಲಿ ಉಳಿಯಲು ಬಯಸಿದರೆ ಭಾರತದೊಳಗೆ ಭಯೋತ್ಪಾದನೆಯನ್ನು ಪ್ರಾಯೋಜಿಸುವುದನ್ನು ನಿಲ್ಲಿಸಬೇಕು ಎಂದು ಅವರು ಕಠಿಣ ಎಚ್ಚರಿಕೆ ನೀಡಿದ್ದಾರೆ ಈ ಬಾರಿ ನಾವು ಆಪರೇಷನ್ ಸಿಂಧೂರ್ 1.0ರಲ್ಲಿ ತೋರಿದ ಅದೇ ಸಂಯಮವನ್ನು ಕಾಯ್ದುಕೊಳ್ಳುವುದಿಲ್ಲ. ಈ ಬಾರಿ ಪಾಕಿಸ್ತಾನವು ಭೌಗೋಳಿಕವಾಗಿ ಇರಬೇಕೇ ಅಥವಾ ಬೇಡವೇ ಎಂದು ಯೋಚಿಸಬೇಕಾದ ಕೆಲಸವನ್ನು ನಾವು ಮಾಡುತ್ತೇವೆ. ಪಾಕಿಸ್ತಾನ ಭೌಗೋಳಿಕವಾಗಿ ಇರಬೇಕೆಂದು ಬಯಸಿದರೆ ಅದು ಭಯೋತ್ಪಾದನೆಯನ್ನು ನಿಲ್ಲಿಸಬೇಕು ಎಂದು ಅವರು ಹೇಳಿದ್ದಾರೆ.


## ದೇವರಗಟ್ಟು ದಸರಾದಲ್ಲಿ ದೊಣ್ಣೆಗಳಿಂದ ಬಡಿದಾಟ, ಮೂವರು ಸಾವು; 100ಕ್ಕೂ ಹೆಚ್ಚು ಮಂದಿಗೆ ಗಾಯ



**ಕರ್ನೂಲ್:** ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯಲ್ಲಿ ದೇವರಗಟ್ಟು ಎಂಬ ಜಾತ್ರೆ ನಡೆಯುತ್ತದೆ. ಈ ಜಾತ್ರೆಗೆ ಬಂದ ಭಕ್ತಾದಿಗಳು ಪರಸ್ಪರ ದೊಣ್ಣೆಯಿಂದ ಹೊಡೆದುಕೊಳ್ಳುವುದು ಸಂಪ್ರದಾಯ. ಆದರೆ ಈ ಸಂಪ್ರದಾಯ ಈ ಬಾರಿ ವಿಪರೀತಕ್ಕೆ ಹೋಗಿದೆ. ದೊಣ್ಣೆಯಿಂದ ಹೊಡೆದುಕೊಂಡ ಭಕ್ತರ ಪೈಕಿ ಮೂವರು, ಸಾವನ್ನಪ್ಪಿದ್ದು, 100ಕ್ಕೂ ಹೆಚ್ಚು ಮಂದಿ ಗಾಯಗೊಂಡು, ಆಸ್ಪತ್ರೆ ಸೇರಿದ್ದಾರೆ.

ಗುರುವಾರ ರಾತ್ರಿ ನಡೆದ ಈ ಉತ್ಸವದಲ್ಲಿ 2 ಲಕ್ಷಕ್ಕೂ ಹೆಚ್ಚು ಭಕ್ತರು ಭಾಗವಹಿಸಿದ್ದರು. ಸ್ವಾಮಿ ಮತ್ತು ಅಮ್ಮನವರ ಮೆರವಣಿಗೆಯ ಸಮಯದಲ್ಲಿ ಒಂದು ಕಡೆ 3 ಹಳ್ಳಿಗಳ ಜನರು ಮತ್ತು ಇನ್ನೊಂದು ಕಡೆ 11 ಹಳ್ಳಿಗಳ ಜನರು ಉತ್ಸವ ಮೂರ್ತಿಗಳಿಗಾಗಿ ಕೋಲುಗಳೊಂದಿಗೆ ಹೋರಾಡಿದರು. ಈ ಸಂದರ್ಭದಲ್ಲಿಯೇ ಭಕ್ತರು ಗಂಭೀರವಾಗಿ ಗಾಯಗೊಳ್ಳುತ್ತಾರೆ. ಆದಾಗ್ಯೂ, ಪ್ರತಿ ವರ್ಷವೂ ಇದೇ ರೀತಿ ನಡೆಯುತ್ತಿದ್ದರೂ.. ಯಾವುದೇ ಹಿಂಸಾತ್ಮಕ ಘಟನೆಗಳನ್ನು ತಡೆಯಲು ಪೊಲೀಸರು ಭಾರೀ ಭದ್ರತಾ ವ್ಯವಸ್ಥೆಗಳನ್ನು ಮಾಡಿದರೂ ಈ ಬಾರಿಯೂ ಬನ್ನಿ ಉತ್ಸವ ಹಿಂಸಾಚಾರದಲ್ಲಿ ಕೊನೆಗೊಂಡಿತು.

## ಪಾಕ್ ಸೇನೆ ವಿರುದ್ಧ ತಿರುಗಿ ಬಿದ್ದ ಪಿಒಕೆ ಜನ; ಸೇನಾಧಿಕಾರಿಗಳ ಅಪಹರಣ, ಸೇನಾ ಟ್ರಕ್ ನದಿಗೆ



**ಲಾಹೋರ್:** ಪಾಕ್ ಸರ್ಕಾರದ ವಿರುದ್ಧ ಭುಗಿಲೆದ್ದಿರುವ ಪಿಒಕೆ ಜನ ಕಳೆದ ಮೂರು ದಿನಗಳಿಂದ ಭಾರೀ ಹಿಂಸಾತ್ಮಕ ಪ್ರತಿಭಟನೆ ನಡೆಸುತ್ತಿದ್ದಾರೆ. ಆದರೆ ಪಾಕಿಸ್ತಾನ ಸರ್ಕಾರ ಈ ಪ್ರತಿಭಟನೆಗಳನ್ನು ಸೇನೆಯನ್ನು ಬಳಸಿಕೊಂಡು ಹತ್ತಿಕ್ಕುತ್ತಿದ್ದು, ಭದ್ರತಾ ಪಡೆಗಳು ನಡೆಸಿದ ಗುಂಡಿನ ದಾಳಿಯಲ್ಲಿ ಕನಿಷ್ಠ 8 ಜನ ನಾಗರಿಕರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಪ್ರತಿಭಟನೆಗಳು ಈಗಲೂ ಮುಂದುವರೆದಿವೆ.

ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ಬೃಹತ್ ಪ್ರತಿಭಟನೆಗಳನ್ನು ನಡೆಸುತ್ತಿದ್ದ ಜನಸಂದಣಿಯನ್ನು ನಿಯಂತ್ರಿಸಲು ಕರೆತರಲಾಗಿದ್ದ ಪಾಕಿಸ್ತಾನದ ಇಸ್ಲಾಮಾಬಾದ್ ಪೊಲೀಸ್ ಸಿಬ್ಬಂದಿಯನ್ನು ಪಿಒಕೆ ನಾಗರಿಕ ಪ್ರತಿಭಟನಾಕಾರರು ಸೆರೆಹಿಡಿದು ರಹಸ್ಯ ಸ್ಥಳಕ್ಕೆ ಸ್ಥಳಾಂತರಿಸಿದ್ದಾರೆ. ಪಿಒಕೆಯಲ್ಲಿರುವ ದಡಿಯಾಲ್‌ನ ಪಾಲಕ್ ಸೇತುವೆಯಲ್ಲಿ ಕಾಶ್ಮೀರಿ ಪ್ರತಿಭಟನಾಕಾರರು ಪಾಕಿಸ್ತಾನಿ ಪಂಜಾಬಿ ಸೇನೆಯ 3 ಬೃಹತ್ ಕಂಟೇನರ್‌ಗಳನ್ನು ತಡೆ ಹಿಡಿದು, ಈ ಪೈಕಿ ಒಂದು ಟ್ರಂಕ್ ಅನ್ನು ಸೇತುವೆಯಿಂದ ನದಿಗೆ ತಳ್ಳಿದ್ದಾರೆ.

## ಗಾಜಾದಲ್ಲಿ ನಿಲ್ಲದ ಇಸ್ರೇಲ್ ವೈಮಾನಿಕ ದಾಳಿ; 52 ಜನರ ಹತ್ಯೆ



**ನುಸೇರತ್:** ಗಾಜಾದಾದ್ಯಂತ ಇಸ್ರೇಲ್ ಗುರುವಾರ ನಡೆಸಿದ ವೈಮಾನಿಕ ದಾಳಿಯಲ್ಲಿ ಕನಿಷ್ಠ 52 ಜನರ ಹತ್ಯೆಯಾಗಿದೆ ಎಂದು ಅಲ್ಲಿನ ನಾಗರಿಕ ರಕ್ಷಣಾ ಸಂಸ್ಥೆ ಮತ್ತು ಆಸ್ಪತ್ರೆಗಳು ತಿಳಿಸಿವೆ. ಇದರಲ್ಲಿ ಫ್ರೆಂಚ್ ಚಾರಿಟಿ ಡಾಕ್ಟರ್ಸ್ ವಿಥೌಟ್ ಬಾರ್ಡರ್ಸ್‌ನ ಉದ್ಯೋಗಿಯೊಬ್ಬರು ಸೇರಿದ್ದಾರೆ ಎನ್ನಲಾಗಿದೆ.

ಬೆಳಗ್ಗೆಯಿಂದ ಗಾಜಾ ಪಟ್ಟಿಯ ಮೇಲೆ ನಿರಂತರ ಇಸ್ರೇಲಿ ಬಾಂಬ್ ಸ್ಫೋಟಗಳಿಂದ ಈ ಸಾವು ಆಗಿದ್ದು, ಗಾಜಾ ನಗರದಲ್ಲಿ ಒಂದು ಮಗು ಸೇರಿದಂತೆ 10 ಜನರು ಸಾವನ್ನಪ್ಪಿದ್ದಾರೆ ಎಂದು ಹಮಾಸ್‌ನಲ್ಲಿ ಆಡಳಿತದಡಿ ಕಾರ್ಯನಿರ್ವಹಿಸುತ್ತಿರುವ ರಕ್ಷಣಾ ಪಡೆಯೊಂದು ತಿಳಿಸಿದೆ.

ಗಾಜಾ ನಗರದಲ್ಲಿ 10, ಮಧ್ಯ ಗಾಜಾದಲ್ಲಿ 14 ಮತ್ತು ದಕ್ಷಿಣದ ಪ್ರಾಂತ್ಯದಲ್ಲಿ 28 ಮೃತ ದೇಹಗಳನ್ನು ಸ್ವೀಕರಿಸಲಾಗಿದೆ ಎಂದು ಹಲವಾರು ಆಸ್ಪತ್ರೆಗಳು ಸುದ್ದಿಸಂಸ್ಥೆಗೆ ದೃಢಪಡಿಸಿವೆ. ಕೆಲವರು ವೈಮಾನಿಕ ದಾಳಿಯಲ್ಲಿ, ಇತರರು ಡ್ರೋನ್ ಬೆಂಕಿ ಮತ್ತು ಗುಂಡಿನ ದಾಳಿಯಲ್ಲಿ ಸಾವನ್ನಪ್ಪಿದ್ದಾರೆ ಎಂದು ಅದು ವರದಿ ಮಾಡಿದೆ. ಈ ವಿಚಾರವನ್ನು ಪರಿಶೀಲಿಸುತ್ತಿರುವುದಾಗಿ ಇಸ್ರೇಲ್ ಸೇನೆ ತಿಳಿಸಿದೆ.

# ಚಂದ್ರವನ ಆಶ್ರಮ ಹಿಂದೂ ಸಂಸ್ಕೃತಿಯ ಪ್ರತೀಕ: ಮಾಜಿ ಮುಖ್ಯಮಂತ್ರಿ ಶೆಟ್ಟರ್



ಶ್ರೀರಂಗಪಟ್ಟಣ ಹೊರವಲಯದ ಚಂದ್ರವನ ಆಶ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿನ ಸಾಧಕರನ್ನು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಡೆಪ್ಯುಟಿ ಸ್ಪೀಕರ್ ರುದ್ರಪ್ಪ ಮಾನಪ್ಪ ಲಮಾಣಿ, ಶಾಸಕ ಎ.ಬಿ.ರಮೇಶ ಬಂಡಿಸಿದ್ದೇಗೌಡ ಅವರು ಶ್ರೀಗಳ ಸಮ್ಮುಖದಲ್ಲಿ ಸನ್ಮಾನಿಸಿದರು.

ಶ್ರೀರಂಗಪಟ್ಟಣ, ಅ.3–ಚಂದ್ರವನ ಆಶ್ರಮ ಹಿಂದೂ ಸಂಸ್ಕೃತಿಯ ಪ್ರತೀಕವಾಗಿದ್ದು, ಸಂಪ್ರದಾಯಗಳ ಉಳಿವಿನ ಜೊತೆಗೆ ಸರ್ವಧರ್ಮವನ್ನು ಗೌರವಿಸಿ ಸಾಕಷ್ಟು ಒಳ್ಳೆಯ ಕೆಲಸಗಳಿಂದ ಹೆಸರಾಗಿದೆ. ಎಂದು ಸಂಸದ ಜಗದೀಶ್ ಶೆಟ್ಟರ್ ಶ್ಲಾಘಿಸಿದರು.

ಪಟ್ಟಣ ಹೊರವಲಯದ ಪಶ್ಚಿಮ ವಾಹಿನಿಯ ಚಂದ್ರವನ ಆಶ್ರಮದಲ್ಲಿ ಶುಕ್ರವಾರ ನವರಾತ್ರಿ ಉತ್ಸವದ ಸಮಾರೋಪ ಸಮಾರಂಭ ಹಾಗೂ ಸಾಧಕರ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಯಾಗಿ ಈಗ ಸಂಸದರಾದ ಬಳಿಕವೂ ಮಠದೊಂದಿಗೆ ಇಂದಿಗೂ ಅದೇ ಒಡನಾಟ ಹೊಂದಿರುವುದು ಹೆಮ್ಮೆಯಾಗಿದೆ ಎಂದರು. ಸಾಕಷ್ಟು ವರ್ಷಗಳಿಂದ ನಿರಂತರವಾಗಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಜನರ ಆರೋಗ್ಯ ಕಾಳಜಿ ಸೇವೆಗಳ ಜೊತೆ ಜೊತೆಗೆ ಸಾವಿರಾರು ಮಹಿಳೆಯರಿಗೆ ಬಾಗಿನದ ಮೂಲಕ ಮಡಿಲು ತುಂಬಿ ಸಾಂತ್ವನ, ಸನ್ಮಾರ್ಗದ ದಿಕ್ಸೂಚಿ ನೀಡಿ ತವರು ಮನೆಯ ಶ್ರೀರಕ್ಷೆ ನೀಡುತ್ತಿರುವುದು ಶ್ಲಾಘನೀಯ ಎಂದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಹೆಣ್ಣು ಎಂದರೆ ದೇವತೆ. ಇಂತಹ ದೇವತೆ ಸಂತೋಷವಾಗಿದ್ದರೆ ಆಯಾ ಮನೆಗಳು ಬೆಳಗಿ ಸಮೃದ್ಧಿ ಕಂಡಂತೆ. ಇಂತಹ ದೇವಿಯರಿಗೆ ಶ್ರೀಮಠ ತವರು ಮಠವಾಗಿ ಅವರಲ್ಲಿ ಅವರ ಮಕ್ಕಳಲ್ಲಿ ಸದ್ಗುಣಗಳನ್ನು ಮೂಡಿಸಿದ್ದಾರೆ. ಈ ಕಾರಣದಿಂದಲೇ ಶ್ರೀಮಠದ, ಕಾರ್ಯಕ್ರಮಗಳಲ್ಲಿ ಮಹಿಳಾ ಭಕ್ತರ ಸಂಖ್ಯೆಯೇ ಅಧಿಕವಾಗಿದೆ ಎಂದರು.

ಸಾನಿಧ್ಯ ವಹಿಸಿದ್ದ ಡಾ.ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಮಾತನಾಡಿ, ಗೋವುಗಳು ನಮ್ಮ 2ನೇ ತಾಯಿ ಇದ್ದಂತೆ, ಇವುಗಳ ರಕ್ಷಣೆಗೆ ಎಲ್ಲರೂ ನೆರವಾಗಬೇಕು. ನವರಾತ್ರಿ ಸಮಯದಲ್ಲಿ ಮಹಿಳೆಯರಿಗೆ ಮಡಿಲಕ್ಕಿ ತುಂಬುವುದು ನಮ್ಮ ಧರ್ಮವಾಗಿದ್ದು ಇದನ್ನು ನೆರವೇರಿಸಿ ಶ್ರೀರಕ್ಷೆ ನೀಡಲಾಗಿದೆ ಎಂದರು. ಇದೇ ಸಂದರ್ಭದಲ್ಲಿ ರಾಜಕೀಯ ಕ್ಷೇತ್ರದಿಂದ ಬಿ.ಎಚ್. ಬನ್ನಿಕೋಡ್, ಉದ್ಯಮ ಕ್ಷೇತ್ರದಿಂದ ಬೆಂಗಳೂರಿನ ವೈ.ಎಸ್. ಮಹಾದೇವ್, ವೈದ್ಯಕೀಯ ಕ್ಷೇತ್ರದಿಂದ ಪಟ್ಟಣದ ಡಾ.ರಾಮಕೃಷ್ಣಯ್ಯ, ತಾಂತ್ರಿಕ ಕ್ಷೇತ್ರದಿಂದ ಮೈಸೂರಿನ ಮಹದೇವಯ್ಯ ಹಾಗೂ ಕೃಷಿ ಕ್ಷೇತ್ರದಿಂದ ತಾಲೂಕಿನ ಎಂ.ಸಿ.ಚಂದ್ರೇಗೌಡರನ್ನು ಪ್ರಶಸ್ತಿ ಫಲಕದೊಂದಿಗೆ ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಡೆಪ್ಯುಟಿ ಸ್ಪೀಕರ್ ರುದ್ರಪ್ಪ ಮಾನಪ್ಪ ಲಮಾಣಿ, ಸೆಸ್ಕ್ ಅಧ್ಯಕ್ಷ ಎ.ಬಿ. ರಮೇಶ ಬಂಡಿಸಿದ್ದೇಗೌಡ, ಕೇಂದ್ರ ಟೀ ಮಂಡಳಿ ಉಪಾಧ್ಯಕ್ಷ ತಮಿಳುನಾಡಿನ ರಾಜೇಶ್ ಚಂದ್ರ, ಮಾಜಿ ಶಾಸಕ ಅರುಣ್‌ಕುಮಾರ್ ಪೂಜಾರ್, ಜಿ.ಪಂ. ಸಿಇಒ ಕೆ.ಆರ್. ನಂದಿನಿ, ತಹಸೀಲ್ದಾರ್ ಚೇತನಾ ಯಾದವ್, ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಜಾ.ದಳ ತೆಕ್ಕೆಗೆ ಪಾಂಡವಪುರ ಟಿಎಪಿಸಿಎಂಎಸ್

## ಶಾಸಕರಿಗೆ ಮುಖಭಂಗ



ಟಿಎಪಿಸಿಎಂಎಸ್ ಚುನಾವಣೆಯಲ್ಲಿ ನೂತನವಾಗಿ ಆಯ್ಕೆಯಾದ ಜೆಡಿಎಸ್ ಬೆಂಬಲಿತ ನಿರ್ದೇಶಕರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.

ಚಿನಕುರಳಿ, ಅ.3–ಟಿಎಪಿಸಿಎಂಎಸ್‌ನ ಅಧಿಕಾರದ ಚುಕ್ಕಾಣಿ ಜಾ.ದಳ ವಶಕ್ಕೆ ಹೋಗಿದ್ದು, ಶಾಸಕ ದರ್ಶನ್ ಪುಟ್ಟಣ್ಣಯ್ಯಗೆ ತೀವ್ರ ಮುಖಭಂಗವಾಗಿದೆ.

ಸಂಘದ 12 ಮಂದಿ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ–9 ಹಾಗೂ ಕಾಂಗ್ರೆಸ್–ರೈತ ಸಂಘ ಬೆಂಬಲಿತ 3 ಅಭ್ಯರ್ಥಿಗಳು ಚುನಾಯಿತರಾಗಿದ್ದಾರೆ. ಅಧಿಕ ಸ್ಥಾನಗಳನ್ನು ಗೆಲ್ಲಿಸಿಕೊಡುವ ಮೂಲಕ ಕ್ಷೇತ್ರದ ಮತದಾರರು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅವರ ಕೈ ಬಲಪಡಿಸುವ ಕೆಲಸ ಮಾಡಿದ್ದಾರೆ.

ಸಾಮಾನ್ಯ ಕ್ಷೇತ್ರದಿಂದ ಜಾ.ದಳದ ಪಿ.ಎಲ್.ಆದರ್ಶ, ಹಿಂದುಳಿದ ವರ್ಗ ಬಿ ಕ್ಷೇತ್ರದಿಂದ ಚಿಕ್ಕಾಡೆ ಗಿರೀಶ್, ಹಿಂದುಳಿದ ವರ್ಗ ಎ ಕ್ಷೇತ್ರದಿಂದ ಎ.ಕೃಷ್ಣ ಸಾಮಾನ್ಯ ಮಹಿಳೆ ಮೀಸಲು ಕ್ಷೇತ್ರದಿಂದ ಪ್ರೇಮಪುಟ್ಟೇಗೌಡ, ಮತ್ತು ಪರಿಶಿಷ್ಟ ಪಂಗಡ ಕ್ಷೇತ್ರದಿಂದ ನರಸಿಂಹನಾಯ್ಕ ಆಯ್ಕೆಯಾಗಿದ್ದರೆ, ರೈತ ಸಂಘ ಮತ್ತು ಕಾಂಗ್ರೆಸ್ ಮೈತ್ರಿ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದ ಹೆಚ್.ಎನ್.ಚಿಟ್ಟಿಬಾಬು, ಸುನಂದಮ್ಮ, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಹಾಳಯ್ಯ ಗೆಲುವು ಸಾಧಿಸಿದ್ದಾರೆ. ಎ ತರಗತಿಯ ನಾಲ್ಕು ಕ್ಷೇತ್ರದಲ್ಲೂ ಸಹ ಜೆಡಿ ಎಸ್‌ನ ಸಿ.ಎಂ.ಕಿರಣ್ ಕುಮಾರ್, ಸಿ.ಎಸ್. ಗೋಪಾಲಗೌಡ, ವಡ್ಡರಹಳ್ಳಿ ವಿ.ಎಸ್.ನಿಂಗೇಗೌಡ, ಎಂ.ಸ್ವಾಮಿ–ಗೆಲುವು ಸಾಧಿಸಿದ್ದಾರೆ.

ಟಿಎಪಿಸಿಎಂಎಸ್ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳನ್ನು ಅಭಿನಂದಿಸಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಕ್ಷೇತ್ರದ ಷೇರುದಾರ ಮತದಾರರು ನಮ್ಮ ಅಭ್ಯರ್ಥಿಗಳಿಗೆ ಅಧಿಕ ಮತಗಳನ್ನು ಗೆಲ್ಲಿಸಿ ಅಧಿಕಾರ ಚುಕ್ಕಾಣಿ ಹಿಡಿಯಲು ಸಹಕಾರ ನೀಡಿದ ಜನತೆಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆಯ್ಕೆಯಾದ ಎಲ್ಲಾ ನಿರ್ದೇಶಕರು ಮುಂದಿನ ದಿನಗಳಲ್ಲಿ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ವಿಧಾನಸಭಾ ಚುನಾವಣೆ ಬಳಿಕ ಕ್ಷೇತ್ರದಲ್ಲಿ ನಡೆದ ಲೋಕಸಭೆ, ಮನ್‌ಮುಲ್, ಪಿಎಲ್‌ಡಿ ಬ್ಯಾಂಕ್, ಡೇರಿ, ಸೊಸೈಟಿ ಹಾಗೂ ಟಿಎಪಿಸಿ ಎಂಎಸ್ ಚುನಾವಣೆಗಳಲ್ಲಿ ಜೆಡಿಎಸ್ ಬೆಂಬಲಿತ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗುವ ಮೂಲಕ ಮತ ದಾರರು ಪುಟ್ಟರಾಜು ಅವರ ಕೈಬಲ ಪಡಿಸಿದ್ದಾರೆ. ಆ ಮೂಲಕ ಸ್ಥಳೀಯವಾಗಿ ನಾಯಕತ್ವ ಕಟ್ಟಿಕೊಳ್ಳಲು ಸಹಕಾರ ನೀಡಿದ್ದಾರೆ ಎಂದು ಜಿಪಂ ಮಾಜಿ ಸದಸ್ಯ ಎಚ್. ಮಂಜುನಾಥ್ ತಿಳಿಸಿದರು. ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ಮನ್‌ಮುಲ್ ನಿರ್ದೇಶಕ ಸಿ.ಶಿವ ಕುಮಾರ್, ಜಿಪಂ ಮಾಜಿ ಸದಸ್ಯ ಎಚ್.ಮಂಜುನಾಥ್ ಸೇರಿದಂತೆ ಟಿಎ ಪಿಸಿಎಂಎಸ್‌ನ ಜೆಡಿಎಸ್ ಬೆಂಬಲಿತ ಎಲ್ಲಾ ನಿರ್ದೇಶಕರು, ಪಕ್ಷದ ಮುಖಂಡರು ಕಾರ್ಯಕರ್ತರು ಹಾಜರಿದ್ದರು.

# ದೊಡ್ಡರಸಿನಕೆರೆ ಗ್ರಾ.ಪಂಗೆ ನೂತನ ಅಧ್ಯಕ್ಷರ ಅವಿರೋಧ ಆಯ್ಕೆ



ದೊಡ್ಡರಸಿನಕೆರೆ ಗ್ರಾ.ಪಂಗೆ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಡಿ.ಎಸ್.ಶರತ್ ಅವರನ್ನು ಪಂಚಾಯಿತಿ ಸದಸ್ಯರು, ಮುಖಂಡರು ಅಭಿನಂದಿಸಿದರು.

ಭಾರತೀನಗರ, ಅ.3–ಸಮೀಪದ ದೊಡ್ಡರಸಿನಕೆರೆ ಗ್ರಾ.ಪಂಗೆ ನಡೆದ ಅಧ್ಯಕ್ಷ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ಡಿ.ಎಸ್.ಶರತ್ ಅವಿರೋಧವಾಗಿ ಆಯೆಯಾಗಿದ್ದಾರೆ.

ಹಿಂದೆ ಅಧ್ಯಕ್ಷರಾಗಿದ್ದ ಕುರಿ ಕೆಂಪನದೊಡ್ಡಿ ಶಿವಲಿಂಗಯ್ಯ ಅವರ ರಾಜಿನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಡಿ.ಎಸ್.ಶರತ್ ಅವರನ್ನು ಹೊರತುಪಡಿಸಿ ಬೇರ್‍ಯಾರು ನಾಮ ಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆಂದು ಚುನಾವಣಾಧಿಕಾರಿ ಪ್ರಶಾಂತ್ ಘೋಷಣೆ ಮಾಡಿದರು. ನೂತನ ಅಧ್ಯಕ್ಷರನ್ನು ಪಂಚಾಯಿತಿ ಸದಸ್ಯರು, ಮುಖಂಡರು ಅಭಿನಂದಿಸಿ ಗೌರವಿಸಿದರು.

ನೂತನ ಅಧ್ಯಕ್ಷ ಡಿ.ಎಸ್.ಶರತ್ ಮಾತನಾಡಿ, ನನ್ನನ್ನು ಆಯ್ಕೆಗೊಳಿಸಿದ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಹಾಗೂ ಜೆಡಿಎಸ್ ಮುಖಂಡ ಸಂತೋಷ್ ತಮ್ಮಣ್ಣ ಅವರ ಬೆಂಬಲ ಜೊತೆಗೆ ದಿ. ಮಂಚೇಗೌಡರ ಆಶೀರ್ವಾದದೊಂದಿಗೆ ನಾನು ಅಧ್ಯಕ್ಷನಾಗಿ ಆಯ್ಕೆಗೊಂಡಿದ್ದೇನೆ. ಪಕ್ಷಾತೀತವಾಗಿ ನನ್ನ ಅವಧಿಯಲ್ಲಿ ಕೆಲಸ ನಿರ್ವಹಿಸಿ ಅಭಿವೃದ್ಧಿ ಕೆಲಸ ಗಳಿಗೆ ಮುಂದಾಗಿರುತ್ತೇನೆಂದು ಆಶ್ವಾಸನೆ ನೀಡಿದರು.

ಇದೇ ವೇಳೆ ಸದಸ್ಯರಾದ ಯತೀಶ್, ಸುರೇಶ, ಚಂದ್ರಶೇಖರ್, ಡಿ. ಎ. ಕೆರೆ.ರಘು, ದೇವರಹಳ್ಳಿ ರಘು, ಧನುಷ್ ಮಂಚೇ ಗೌಡ, ಶ್ರೀನಿವಾಸ್, ಹೊನ್ನೇಗೌಡ, ಜ್ಯೋತಿ, ದಿವ್ಯ, ಸುನಿತಾ, ಸಮೀನಾ ಬಾನು, ಕಲಾವತಿ, ಶಿವಲಿಂಗಯ್ಯ, ಪುಟ್ಟ ಸ್ವಾಮಿ, ಕೃಪಾ, ಭಾಗ್ಯ, ಶೇಖರ್, ಸೌಮ್ಯ ಸವಿತಾ, ಹರ್ಷಿತಾ, ಲತಾ, ಮುಖಂಡರಾದ ರಾಮಕೃಷ್ಣ, ಡಿ. ಸಿ. ಶಿವರಾಮ, ಶಿವಣ್ಣ, ಶಂಕರ್, ಆನಂದ, ಕೇಬಲ್ ಆನಂದ, ಶ್ರೀಧರ್, ಜಯರಾಮು, ಚನ್ನೇಗೌಡ, ಮಹೇಶ್, ಸಂದೀಪ್, ಪುರುಷೋತ್ತಮ್, ಪ್ರದೀಪ್, ಎಂ. ಚಿಕ್ಕಹುಚ್ಚೇಗೌಡ, ಅರವಿಂದ್, ಕರಡಕೆರೆ ಹನುಮಂತೇಗೌಡ ಉಪಸ್ಥಿತರಿದ್ದರು.

# ಸತ್ಯ, ಅಹಿಂಸೆ ಪಾಲಿಸಿದರೆ ಅಪರಾಧಗಳ ಸಂಖ್ಯೆ ಇಳಿಮುಖ




ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀ ಜಯಂತಿಯನ್ನು ಆಚರಿಸಲಾಯಿತು.

ಕಿಕ್ಕೇರಿ, ಅ.3–ಪ್ರತಿಯೊಬ್ಬರೂ ಸತ್ಯ, ಅಹಿಂಸೆ ಮಾರ್ಗದಲ್ಲಿ ನಡೆದರೆ ಠಾಣೆಯಲ್ಲಿ ಅಪರಾಧ ಪ್ರಕರಣಗಳು ದಾಖಲಾಗುವುದಿಲ್ಲ ಎಂದು ಪ್ರಾಂಶುಪಾಲ ಎಂ.ಆರ್. ಸಹದೇವು ಹೇಳಿದರು.

ಇಲ್ಲಿನ ಕೆಪಿಎಸ್ ಸರ್ಕಾರಿ ಪಿಯು ಕಾಲೇಜಿನಲ್ಲಿ ಏರ್ಪಡಿಸಿದ್ದ ಗಾಂಧೀಜಿ, ಲಾಲ್ ಬಹದೂರ್ ಶಾಸ್ತ್ರೀ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ದೇಶದ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಯನ್ನು ವಿದ್ಯಾರ್ಥಿಗಳು ಆದರ್ಶವಾಗಿ ರೂಪಿಸಿಕೊಳ್ಳಬೇಕಿದೆ. ಪ್ರೀತಿ, ಪ್ರೇಮ, ಕರ್ತವ್ಯ ನಿಷ್ಠೆ ಯಿಂದ ಎಲ್ಲವನ್ನೂ ಜಯಿಸಬಹುದು ಎಂದು ತೋರಿಸಿಕೊಟ್ಟ ಈ ಮಹಾತ್ಮರ ಗುಣಗಾನ ಮಾಡಬೇಕಿದೆ ಎಂದರು.

ಲಾಲ್‌ಬಹಾದೂರ್ ಶಾಸ್ತ್ರೀಜಿ, ಗಾಂಧೀಜಿ ಅವರ ಜನ್ಮ ದಿನ ನಾಡಿಗೆ ಪವಿತ್ರ ದಿನವಾಗಿದೆ. ಬಡತನದಲ್ಲಿ ನಲುಗುತ್ತಿದ್ದ ದೇಶವನ್ನು ಕೃಷಿ ಸಾಮ್ರಾಜ್ಯವಾಗಿಸಲು, ಶಾಸ್ತ್ರೀಜಿಯವರ ನಿಲುವು ವಿಶ್ವಕ್ಕೆ ಮಾದರಿಯಾಗಿದೆ. ಐಷಾರಾಮಿ ಬದುಕು ಬಯಸದೆ ಸರಳತೆಯೇ ಉಸಿರಾಗಿಸಿಕೊಂಡ ಇವರ ತತ್ವ ಸಿದ್ಧಾಂತ ಯುವ ಜನತೆಗೆ ಮಾದರಿಯಾಗಬೇಕು ಎಂದು ಹೇಳಿದರು. ಎನ್‌ಎಸ್‌ಎಸ್ ಯೋಜನಾಧಿಕಾರಿ ಜಿ.ಎಸ್. ಕುಮಾರ ಸ್ವಾಮಿ, ಉಪನ್ಯಾಸಕರಾದ ಎ.ಎಂ. ಮಂಜು ನಾಥ್, ಎಸ್.ಡಿ. ಹರೀಶ್, ಅರ್ಪಿತ, ಚಂದ್ರಿಕಾ, ಲಾವಣ್ಯ, ಫಾಜಿಲಾ ಖಾನಂ ಭಾಗವಹಿಸಿದ್ದರು.

# ಪರವಾನಿಗೆ ಇಲ್ಲದೆ ಶೇಖರಿಸಿದ್ದ ರಸಗೊಬ್ಬರ ಜಪ್ತಿ

ಮಂಡ್ಯ, ಅ.3– ಪರವಾನಿಗೆ ಇಲ್ಲದೆ ಅಕ್ರಮವಾಗಿ ಶೇಖರಿಸಿಟ್ಟಿದ್ದ ಗೋದಾಮಿನ ಮೇಲೆ ಜಾಗೃತ ದಳದ ಸಿಬ್ಬಂದಿಗಳು ದಾಳಿಮಾಡಿ 49.6 ಟನ್ ರಸಗೊಬ್ಬರವನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಮಂಡ್ಯದಲ್ಲಿರುವ Twin gowden suger town ರಸಗೊಬ್ಬರ ಗೋದಾಮಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ M/S GUJARATH STATE FERTILIZERS AND CHEMICLES LIMITED (GSFC) (Manufucture & Marketed), No. P.O Fertilize Nagar 3917, Vododara District, Gujarath ಸಂಸ್ಥೆಗೆ ಸೇರಿದ ಪರವಾನಿಗೆ ಹಾಗೂ G2/G3 ಸರ್ಟಿಫಿಕೇಟ್ ಇಲ್ಲದ ಜೈವಿಕ ಪ್ರಚೋದಕಗಳ ರಸಗೊಬ್ಬರ (ಬಯೋಸ್ಟಿಮೂಲೆಂಟ್ 49.6 ಟನ್)ನ್ನು ಜಪ್ತಿ ಮಾಡಿದ್ದಾರೆ.

ಬೆಂಗಳೂರು ಜಾಗೃತ ಕೋಶದ ಅಪರ ನಿರ್ದೇಶಕ ದೇವರಾಜು, ಮೈಸೂರು ಉಪ ವಿಭಾಗದ ಉಪ ನಿರ್ದೇಶಕಿ ಹೆಚ್.ಎನ್ ಮಮತ ಮತ್ತು ಸಹಾಯಕ ಕೃಷಿ ನಿರ್ದೇಶಕ ಯಾದವ ಬಾಬು, ತಾಲೂಕು ಸಹಾಯಕ ಕೃಷಿ ನಿರ್ದೇಶಕಿ ಸುನೀತ, ಜಿಲ್ಲಾ ರಸಗೊಬ್ಬರ ಪರಿವೀಕ್ಷಕ ಹೆಚ್ ಚನ್ನ ಕೇಶವ ಮೂರ್ತಿ (ಜಾರಿದಳ) ದಾಳಿ ಸಮಯದಲ್ಲಿ ಹಾಜರಿದ್ದರು ಎಂದು ಕೃಷಿ ಜಂಟಿ ನಿರ್ದೇಶಕರ ಕಛೇರಿಯ ಸಹಾಯಕ ಕೃಷಿ ನಿರ್ದೇಶಕರು (ಜಾರಿದಳ) ಹಾಗೂ ರಸಗೊಬ್ಬರ ಪರಿವೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

# ಜಾತಿ ಸಮೀಕ್ಷೆ ಅವಧಿ ವಿಸ್ತರಣೆ

ಸಾಧ್ಯವಾಗದೇ ಹೋದರೆ ಮತ್ತಷ್ಟು ಕಾಲಾವಕಾಶ ನೀಡುವ ಬಗ್ಗೆ ನಿರ್ಧಾರ ಮಾಡಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು.

**ಜಾತಿ ಗಣತಿ ಅಲ್ಲ ಸಮೀಕ್ಷೆ:** ಜಾತಿಗಳಲ್ಲಿ ಒಡಕು ಮೂಡಿಸಲು ಸಮೀಕ್ಷೆ ನಡೆಸಲಾಗುತ್ತಿದೆ ಎಂಬ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಹೇಳಿಕೆಗೆ ಕಿಡಿಕಾರಿದ ಸಿದ್ದರಾಮಯ್ಯ, ನಾವು ಜಾತಿ ಗಣತಿ ನಡೆಸುತ್ತಿಲ್ಲ. ಜನರ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸಮೀಕ್ಷೆ ನಡೆಸುತ್ತಿದ್ದೇವೆ. ಸರ್ಕಾರಕ್ಕೆ ಜನರ ಸ್ಥಿತಿ ಗತಿಯ ಮಾಹಿತಿ ಅಗತ್ಯ ಇರುವ ಕಾರಣ ಸರ್ವೆ ಮಾಡುಸುತ್ತಿದ್ದೇವೆ ಎಂದರು.

ಬ್ರಾಹ್ಮಣ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್, ದಲಿತ ಕ್ರಿಶ್ಚಿಯನ್ ಸೃಷ್ಟಿ ನಾವು ಮಾಡಿಲ್ಲ. ಕಾಂತರಾಜು ಆಯೋಗ ಸಮೀಕ್ಷೆ ನಡೆಸುವ ವೇಳೆ ಜನರೇ ಈ ರೀತಿ ತಮ್ಮ ಜಾತಿಗಳನ್ನು ಉಲ್ಲೇಖಿಸಿಕೊಂಡಿದ್ದಾರೆ. ಮತಾಂತರವಾದ ಜನರೇ ತಮ್ಮ ಜಾತಿಯನ್ನು ಈ ರೀತಿ ಗುರುತಿಸಿಕೊಂಡಿರುವಾಗ ಇದಕ್ಕೆ ನಾವು ಜವಾಬ್ದಾರರೇ ಎಂದು ಪ್ರಶ್ನಿಸಿದರು.

ಕೇಂದ್ರ ಸರ್ಕಾರ ಜಾತಿ ಗಣತಿ ನಡೆಸಲು ನಿರ್ಧರಿಸಿದೆ. ಹಾಗಾದರೆ ಕೇಂದ್ರ ಸರ್ಕಾರ ಜಾತಿಯಲ್ಲಿ ಒಡಕು ಮೂಡಿಸಲು ಸಮೀಕ್ಷೆ ನಡೆಸುತ್ತಿದೆಯೇ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ನಾವು ಜಾತಿ ಸಮೀಕ್ಷೆ ನಡೆಸಿದರೆ ಜಾತಿಗಳಲ್ಲಿ ಒಡಕು ಮೂಡಿಸುತ್ತಿದ್ದಾರೆ, ಇದು ತಪ್ಪು ಎಂದು ಆರೋಪಿಸುತ್ತಾರೆ. ಆದರೆ ಕೇಂದ್ರದ ಬಿಜೆಪಿ ಸರ್ಕಾರ ಜಾತಿ ಸಮೀಕ್ಷೆ ನಡೆಸಿದರೆ ಇದು ಸರಿ ಎಂದು ವಾದ ಮಾಡುತ್ತಾರೆ. ನಾವು ಜಾತಿ ಗಣತಿ ಮಾಡಿಸಿದರೆ ತಪ್ಪು, ಅವರು ಜಾತಿ ಗಣತಿ ಮಾಡಿಸಿದರೆ ನ್ಯಾಯ ಎಂಬಂತೆ ಬಿಂಬಿಸಿಕೊಳ್ಳುತ್ತಿದ್ದಾರೆ. ರಾಜಕೀಯ ಕಾರಣಕ್ಕೆ ಬಿಜೆಪಿಯವರು ಇಂತಹ ಆರೋಪ ಮಾಡುತ್ತಾರೆ ಎಂದು ಆಪಾದಿಸಿದರು. ಬ್ರಾಹ್ಮಣ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್ ಎಂದು ವರ್ಗೀಕರಣ ಮಾಡುವುದನ್ನು ಹಿಂದುಳಿದ ಶಾಶ್ವತ ಆಯೋಗ ರದ್ದು ಮಾಡಿದೆ. ಈಗ ನಡೆಯುತ್ತಿರುವ ಸಮೀಕ್ಷೆಯಲ್ಲಿ ಆಯೋಗ ಇದನ್ನು ಪರಿಗಣಿಸಿಲ್ಲ ಎಂದು ತಿಳಿಸಿದರು.

## ಡಿಸೆಂಬರ್‌ನಲ್ಲಿ ನನ್ನ ಹೊಸ ಮನೆ ಗೃಹಪ್ರವೇಶ

### ಮಾಧ್ಯಮದವರನ್ನಂತೂ ಆಹ್ವಾನಿಸಲ್ಲ!

ಮೈಸೂರಿನ ವಿಶ್ವ ಮಾನವ ಜೋಡಿ ರಸ್ತೆಯಲ್ಲಿ ನೂತನವಾಗಿ ನಿರ್ಮಾಣ ಮಾಡುತ್ತಿರುವ ತಮ್ಮ ಮನೆಯ ಗೃಹ ಪ್ರವೇಶ ಡಿಸೆಂಬರ್‌ನಲ್ಲಿ ನಡೆಯಲಿದ್ದು, ಗೃಹ ಪ್ರವೇಶಕ್ಕೆ ಯಾರನ್ನು ಆಹ್ವಾನಿಸುವುದಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

ಮಾಧ್ಯಮದವರನ್ನಂತೂ ಆಹ್ವಾನಿಸುವುದಿಲ್ಲ, ಮಾಧ್ಯಮದವರು ತಾವಾಗಿಯೇ ಬಂದರೂ ಬೇಡ ಎಂದು ನಗುತ್ತಾ ಹೇಳಿದರು. ಕುಟುಂಬಸ್ಥರನ್ನು ಆಹ್ವಾನಿಸಿ ಗೃಹಪ್ರವೇಶ ಮಾಡುತ್ತೇನೆ. ಗೃಹ ಪ್ರವೇಶದ ನಂತರ ಆ ಮನೆಗೆ ಸ್ಥಳಾಂತರ ಮಾಡುತ್ತೇನೆ ಎಂದರು.

ಈಗ ನಾನು ವಾಸ್ತವ್ಯ ಹೂಡಿರುವ ಮನೆ ಮರಿಸ್ವಾಮಿಯದು. ಹೊಸ ಮನೆಯಲ್ಲಿ ವಾಸ್ತವ್ಯ ಹೂಡಿದರೂ ಯಾರನ್ನಾದರೂ ಭೇಟಿ ಮಾಡಬೇಕಾದರೆ ಇದೇ ಮನೆಗೆ ಬರುತ್ತೇನೆ ಎಂದು ಸ್ಪಷ್ಟಪಡಿಸಿದರು. ಇಂದು ಬೆಳಗ್ಗೆ 11 ಗಂಟೆ ವೇಳೆಗೆ ಹೊಸ ಮನೆಗೆ ಭೇಟಿ ನೀಡಿದ ಸಿದ್ದರಾಮಯ್ಯ ಸುಮಾರು 2 ಗಂಟೆಗಳ ಕಾಲ ಅಲ್ಲೇ ಇದ್ದು, ಮನೆ ನಿರ್ಮಾಣದ ಕಾಮಗಾರಿ ಬಗ್ಗೆ ಮಾಹಿತಿ ಪಡೆದರು.

# ಖ್ಯಾತ ಪತ್ರಕರ್ತ, ಲೇಖಕ ಟಿಜೆಎಸ್ ಜಾರ್ಜ್ ಇನ್ನಿಲ್ಲ







'ಸ್ಟಾರ್ ಆಫ್ ಮೈಸೂರ್' 25ನೇ ಹಾಗೂ 40ನೇ ವಾರ್ಷಿಕೋತ್ಸವ ಸಮಾರಂಭಗಳಲ್ಲಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಸಂಪಾದಕೀಯ ಸಲಹೆಗಾರರಾದ ಟಿಜೆಎಸ್ ಜಾರ್ಜ್ ಅವರು ಪಾಲ್ಗೊಂಡಿದ್ದರು. ಅಂದಿನ ಸಮಾರಂಭದಲ್ಲಿ ಸುತ್ತೂರು ಶ್ರೀಗಳು, ಭಾರತೀಯ ವಿದ್ಯಾಭವನದ ಮತ್ತೂರು ಕೃಷ್ಣಮೂರ್ತಿಯವರು, ಮಾಜಿ ಕೇಂದ್ರ ಸಚಿವರಾಗಿದ್ದ ವಿ. ಶ್ರೀನಿವಾಸಪ್ರಸಾದ್, ಹಾಲಿ ಎಂಎಲ್‌ಸಿ ಹೆಚ್.ವಿಶ್ವನಾಥ್, 'ಸ್ಟಾರ್ ಆಫ್ ಮೈಸೂರ್' ಸಂಪಾದಕರಾಗಿದ್ದ ಕೆ.ಬಿ. ಗಣಪತಿ, ಕಾರ್ಯಕಾರಿ ನಿರ್ದೇಶಕರುಗಳಾದ ರ್‍ಯಾಲಿ ಗಣಪತಿ, ಸಿ.ಪಿ. ಚಿನ್ನಪ್ಪ, (ಬಲಚಿತ್ರ), ಕೇಂದ್ರ ಸಚಿವರಾಗಿದ್ದ ಅನಂತಕುಮಾರ್, ಅಂಕಣಕಾರರಾದ ದೇವದತ್ತ್ ಪಟ್ಟನಾಯಕ್, ಅಕಾಡೆಮಿ ನ್ಯೂಸ್ ಪೇಪರ್ ಪ್ರೈ.ಲಿ.,ನ ಹಾಲಿ ವ್ಯವಸ್ಥಾಪಕ ನಿರ್ದೇಶಕರೂ ಹಾಗೂ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ. ವಿಕ್ರಂ ಮುತ್ತಣ್ಣ, ಹಾಲಿ ಕಾರ್ಯಕಾರಿ ನಿರ್ದೇಶಕರಾದ ಕೆ.ಜಿ. ಮಿಕ್ಕಿ ಬೋಪಣ್ಣ ಹಾಜರಿದ್ದರು.

ಮತ್ತು ಚಾಚಿಯಮ್ಮ ಜಾಕೋಬ್ ದಂಪತಿಯ ನಾಲ್ಕನೇ ಮಗನಾಗಿ ಜನಿಸಿದರು. ಅವರು ತಮ್ಮ ಪತ್ರಿಕೋದ್ಯಮ ವೃತ್ತಿಜೀವನವನ್ನು ಪ್ರಾರಂಭಿಸುವ ಮೊದಲು ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಪದವಿ ಪಡೆದರು.

**ಸಿಎಂ ಸಂತಾಪ:** ಹಿರಿಯ ಪತ್ರಕರ್ತ, ಸಂಪಾದಕ ಮತ್ತು ಲೇಖಕ ಟಿಜೆಎಸ್ ಜಾರ್ಜ್ ಅವರ ನಿಧನದಿಂದ ದುಃಖಿತನಾಗಿದ್ದೇನೆ. ತಮ್ಮ ತೀಕ್ಷ್ಣವಾದ ಲೇಖನಿ ಮತ್ತು ರಾಜಿಯಾಗದ ಧ್ವನಿಯಿಂದ ಅವರು ಆರು ದಶಕಗಳಿಗೂ ಹೆಚ್ಚು ಕಾಲ ಭಾರತೀಯ ಪತ್ರಿಕೋದ್ಯಮವನ್ನು ಶ್ರೀಮಂತಗೊಳಿಸಿದರು ಎಂದು ಸಿಎಂ ಸಿದ್ದರಾಮಯ್ಯ ಎಕ್ಸ್ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

**ಹೆಚ್‌ಡಿಕೆ ಕಂಬನಿ:** ಹಿರಿಯ ಪತ್ರಕರ್ತರಾದ ಟಿಜೆಎಸ್ ಜಾರ್ಜ್ ಅವರ ನಿಧನದ ಸುದ್ದಿ ಕೇಳಿ ಬಹಳ ದುಃಖವಾಯಿತು. ರಾಷ್ಟ್ರೀಯ, ಅಂತಾರಾಷ್ಟ್ರೀಯ ಪತ್ರಿಕೆಗಳ ಸಂಪಾದಕರ–ಸಂಪಾದಕೀಯ ಸಲಹೆಗಾರರಾಗಿ ಮಹತ್ವದ ಹೊಣೆಗಳ ನಿರ್ವಹಿಸಿ, ಅನುಭವದ ಸಮೃದ್ಧ ಗಣಿಯೇ ಆಗಿದ್ದರು ಎಂದು ಸಂತಾಪ ಸೂಚಿಸಿದ್ದಾರೆ.

ಸುಮಾರು 25 ವರ್ಷಗಳ ಕಾಲ ನಿರಂತರ ಅಂಕಣಕಾರರಾಗಿ ಸಾಮಾಜಿಕ ಅಸಮಾನತೆ, ಭ್ರಷ್ಟಾಚಾರದ ವಿರುದ್ಧ ನಿರಂತರ ತಮ್ಮ ಲೇಖನಿ ಮೂಲಕ ಧ್ವನಿ ಎತ್ತುವ ಕೆಲಸ ಮಾಡಿದ್ದರು. ಅವರ ಅಗಲಿಕೆಯಿಂದ ಭಾರತೀಯ ಪತ್ರಿಕಾರಂಗ ಒಬ್ಬ ಹಿರಿಯ ಮಾರ್ಗದರ್ಶಕನನ್ನು ಕಳೆದುಕೊಂಡಂತಾಗಿದೆ. ಅವರು ಸಾಹಿತ್ಯ ಮತ್ತು ಪತ್ರಿಕಾ ರಂಗದಲ್ಲಿ ಸಲ್ಲಿಸಿದ ಸೇವೆಗೆ ಪದ್ಮಭೂಷಣ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬ ಹಾಗೂ ಅವರ ಅಭಿಮಾನಿ ಗಳಿಗೆ ಕರುಣಿಸಲಿ, ಮೃತರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣು ಗೋಪಾಲ್ ಅವರು ಇಂದು ಸಂಜೆ ಮಿಲ್ಲರ್ಸ್ ರಸ್ತೆಯ ಖಾಸಗಿ ಆಸ್ಪತ್ರೆಯಲ್ಲಿ ಟಿಜೆಎಸ್ ಜಾರ್ಜ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

**ಎಂಎಲ್‌ಸಿ ಶಿವಕುಮಾರ್ ಸಂತಾಪ:** ಟಿ.ಜೆ.ಎಸ್. ಜಾರ್ಜ್ ಅವರ ನಿಧನಕ್ಕೆ ವಿಧಾನಪರಿಷತ್ ಸದಸ್ಯ, ಹಿರಿಯ ಪತ್ರಕರ್ತ ಕೆ.ಶಿವಕುಮಾರ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಜಾರ್ಜ್ ಅವರು ಸದಾ ಅಭಿವ್ಯಕ್ತಿ ಸ್ವಾತಂತ್ರ್ಯದ ಪರ ಧ್ವನಿ ಎತ್ತಿದವರು. ಸರ್ಕಾರ ನಡೆಸುತ್ತಿರುವವರು ಯಾರೇ ಇರಲಿ, ಯಾವುದೇ ಪಕ್ಷವಿರಲಿ ಲೋಪ ಎಸಗಿದಾಗ, ಜನತಂತ್ರದ ಆಶಯಗಳಿಗೆ ವಿರುದ್ಧವಾದ ತೀರ್ಮಾನಗಳನ್ನು ಕೈಗೊಂಡಾಗ ಜಾರ್ಜ್ ತಮ್ಮ ಬರವಣಿಗೆ ಮೂಲಕ ಆಳುವ ವರ್ಗವನ್ನು ಎಚ್ಚರಿಸುವ ಮೂಲಕ ಜನಪರ ಧ್ವನಿಯಾಗುತ್ತಿದ್ದರು. ಸಾಮಾಜಿಕ ತಾರತಮ್ಯದ ಸಮಾಜದಲ್ಲಿ ತಳಸಮುದಾಯದವರ ಪರ ಅವರು ಮಿಡಿಯುತ್ತಿದ್ದರು ಎಂದು ತಿಳಿಸಿದ್ದಾರೆ.

# ಹುಲಿಯ ಭೀಕರ ಹತ್ಯೆ

ಮುಖ್ಯ ಕಾರ್ಯದರ್ಶಿಯವರಿಗೆ ಲಿಖಿತ ಆದೇಶ ನೀಡಿರುವ ಅವರು, ಪಿಸಿಸಿಎಫ್ ಸ್ಮಿತಾ ಬಿಜ್ಜೂರು ನೇತೃತ್ವದ ತಂಡ ಸ್ಥಳಕ್ಕೆ ಖುದ್ದು ಭೇಟಿ ನೀಡಿ ಪರಿಶೀಲಿಸಲು ಸೂಚಿಸಿದ್ದಾರೆ. ವನ್ಯಜೀವಿ ಧಾಮ ವ್ಯಾಪ್ತಿಯಲ್ಲಿ ಕಳೆದ 3 ವರ್ಷದಲ್ಲಿ ದಾಖಲಾಗಿರುವ ಕಳ್ಳಬೇಟೆ ಪ್ರಕರಣಗಳ ಬಗ್ಗೆಯೂ ಗಮನಹರಿಸಿ, ಹಿಂದಿನ ತನಿಖಾ ವರದಿಗಳನ್ನೂ ಪರಾಮರ್ಶಿಸಿ ಮುಂದೆ ಈ ಭಾಗದಲ್ಲಿ ಇಂತಹ ಘಟನೆ ಮರುಕಳಿಸದಂತೆ ಕ್ರಮವಹಿಸಬೇಕು ಎಂದು ಸಚಿವರು ತಾಕೀತು ಮಾಡಿದ್ದಾರೆ. ಘಟನೆಯ ಸಂಬಂಧ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ ಅಧಿಕಾರಿಗಳು ಹಾಗೂ ಕಳ್ಳಬೇಟೆಗಾರರ ವಿರುದ್ಧ ಸೂಕ್ತ ಕ್ರಮದ ಶಿಫಾರಸಿನೊಂದಿಗೆ 8 ದಿನಗಳಲ್ಲಿ ವರದಿ ಸಲ್ಲಿಸಲು ಸೂಚಿಸಿದ್ದಾರೆ.

# ಕಾವೇರಿ ಆರತಿ

ಕಾವೇರಿಗೆ ಪೂಜೆ ಸಲ್ಲಿಸುವ ಭಾಗ್ಯ ನಮಗೆ ಹಾಗೂ ನಿಮಗೆ ಸಿಕ್ಕಿದೆ. ಕಾವೇರಿ ಮಾತೆಗೆ ಪ್ರಾರ್ಥನೆ ಸಲ್ಲಿಸಲು ಕೆಲವರು ಅಡಚಣೆ ಮಾಡುತ್ತಿದ್ದಾರೆ. ಅಡಚಣೆ ಮಾಡುವವರಿಗೆ ನಾವು ಏನೂ ಮಾಡಲು ಆಗುವುದಿಲ್ಲ ಎಂದರು. ಕಾವೇರಿ ಆರತಿ ಅತ್ಯುತ್ತಮವಾಗಿ ನೆರವೇರಿದೆ. ಮುಂದೆ ಯಾವ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಬೇಕು, ಏನೇನು ತಪ್ಪುಗಳಾಗಿವೆ ಎಂಬುದನ್ನು ಗಮನಿಸಬೇಕು. ಇನ್ನೂ ಯಾವ ರೀತಿಯ ಧಾರ್ಮಿಕ ಕೆಲಸಗಳು ನೆರವೇರಬೇಕು ಎಂಬುದನ್ನು ಗಮನಿಸಬೇಕು. ಭಕ್ತಿ ಪ್ರಧಾನವಾಗಿ ಜನರ ಮನಸ್ಸಿಗೆ ಮುಟ್ಟುವಂತೆ ಅಚ್ಚುಕಟ್ಟಾಗಿ ಕಾರ್ಯಕ್ರಮ ರೂಪಿಸಬೇಕು ಎಂದರು.

ವಾರಣಾಸಿಯ ಗಂಗಾ ಆರತಿಗೆ ಕಡಿಮೆ ಇಲ್ಲದಂತೆ ಇಲ್ಲೂ ಆರತಿ ನೆರವೇರಿದೆ. ಅಲ್ಲಿ ಯಾರು ಬೇಕಾದರೂ ವಿಗ್ರಹ ಮುಟ್ಟಬಹುದು. ಆದರೆ ದಕ್ಷಿಣ ಭಾರತದಲ್ಲಿ ಪದ್ಧತಿ ಬೇರೆ ರೀತಿಯಿದೆ. ಮಡಿಯನ್ನು ಇಲ್ಲಿ ಕಾಪಾಡಿಕೊಂಡು ಬರಲಾಗಿದೆ ಎಂದರು.

ಕಾವೇರಿ ಮಾತೆ ಎಲ್ಲರಿಗೂ ಒಳ್ಳೆಯದನ್ನು ಮಾಡಲಿ. ಸ್ಥಳೀಯ ಪುರೋಹಿತರು ತಮ್ಮ ಪಾಂಡಿತ್ಯ ಬಳಸಿಕೊಂಡು ಇನ್ನೂ ಯಾವ ರೀತಿಯ ಪೂಜಾ ಕೈಂಕರ್ಯಗಳನ್ನು ನೆರವೇರಿಸಬಹುದು ಎಂದು ಪರಿಶೀಲನೆ ನಡೆಸಿ ಎಂದರು. ಊರಲ್ಲಿರುವ ಎಲ್ಲಾ ಎತ್ತುಗಳು ಬಸವ ಆಗಲು ಸಾಧ್ಯವಿಲ್ಲ. ಆದ ಕಾರಣಕ್ಕೆ ಉತ್ತಮ ಅಧಿಕಾರಿಯಾದ ರಾಮ ಪ್ರಸಾತ್ ಮೋಹನ್ ಅವರಿಗೆ ಇದರ ಜವಾಬ್ದಾರಿ ನೀಡಲಾಯಿತು. ಇವರ ಜೊತೆಗೆ ಸ್ಥಳೀಯ ಅಧಿಕಾರಿಗಳು ಕೈ ಜೋಡಿಸಿ ಈ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿದೆ. ಕಾವೇರಿ ಮಾತೆಯ ಆಶೀರ್ವಾದ ಸದಾ ಎಲ್ಲರ ಮೇಲಿರಲಿ. ಪ್ರತಿವರ್ಷ ಉತ್ತಮ ಮಳೆ, ಬೆಳೆ ಬರಲಿ ಎಂದು ಪ್ರಾರ್ಥಿಸಿದರು.

# ರೂವಾರಿಗಳಾದ ಗಜಪಡೆ

ಎಲ್ಲಾ ಆನೆಗಳು ಅರಮನೆಗೆ ವಾಪಸ್ಸಾಗಿದ್ದವು. ಜಂಬೂಸವಾರಿ ಮೆರವಣಿಗೆಯಲ್ಲಿ ಯಶಸ್ವಿಯಾಗಿ ತಮ್ಮ ಜವಾಬ್ದಾರಿ ನಿಬಾಯಿಸಿದ ನಂತರ ರಾತ್ರಿಯಿಂದಲೇ ಅರಮನೆ ಆವರಣದಲ್ಲಿ ವಿಶ್ರಾಂತಿಗೆ ಜಾರಿದ್ದ ಗಜಪಡೆ, ಶುಕ್ರವಾರ ದಿನವಿಡೀ ಅರಮನೆ ಆವರಣದಲ್ಲಿ ಕಾಲ ಕಳೆದವು. ಅಂಬಾರಿ ಹೊತ್ತ ಹಿನ್ನೆಲೆಯಲ್ಲಿ ಅಭಿಮನ್ಯುವಿಗೆ ರಾತ್ರಿ ಬಿಸಿ ನೀರಿನಿಂದ ಮೈತೊಳೆಯಲಾಯಿತು. ಉಳಿದ ಆನೆಗಳಿಗೂ ಮಧ್ಯಾಹ್ನ ಮೈತೊಳೆದು ಎಂದಿನಂತೆ ಮೇವು ಹಾಕಿ ಆರೈಕೆ ಮಾಡಲಾಯಿತು.



**ಜನ ಜಂಗುಳಿ:** ಜಂಬೂಸವಾರಿ ಮರುದಿನವಾದ ಶುಕ್ರವಾರ ಅರಮನೆ ವೀಕ್ಷಣೆಗೆ ಬಂದ ಪ್ರವಾಸಿಗರಲ್ಲಿ ಬಹುತೇಕರು ದಸರಾ ಗಜಪಡೆಯನ್ನು ಕಣ್ತುಂಬಿಕೊಳ್ಳಲು ಮುಗಿ ಬಿದ್ದರು. ಆದರೆ ಅರಣ್ಯ ಇಲಾಖೆ ಸಿಬ್ಬಂದಿ ಬಿಗಿ ಕಾವಲಿದ್ದುದರಿಂದ ಹತ್ತಿರ ಸುಳಿಯಲು ಅವಕಾಶವಾಗಲಿಲ್ಲ.

**ಅರಮನೆ ಸೇರಿದ ಗಜಪಡೆಯ ಆಭರಣ:** ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಂಡ ಆನೆಗಳಿಗೆ ಶೃಂಗಾರ ಮಾಡಿದ್ದ ಆಭರಣಗಳನ್ನು ಅರಮನೆ ಸುಪರ್ದಿಗೆ ಒಪ್ಪಿಸಲಾಯಿತು. ಎಲ್ಲಾ ಆನೆಗಳ ಹಣಪಟ್ಟಿಗೆ, ಹೆಸರು ಪಟ್ಟಿ, ಗೌನ್, ಛತ್ರಿ–ಚಾಮರ, ಮಾವುತರು, ಕಾವಾಡಿಗಳು ಧರಿಸಿದ್ದ ವಿಶೇಷ ಪೋಷಾಕು ಸೇರಿದಂತೆ ವಿವಿಧ ಅಲಂಕಾರಿಕ ವಸ್ತುಗಳನ್ನು ಸುರಕ್ಷಿತವಾಗಿ ಅರಮನೆ ವಶಕ್ಕೆ ನೀಡಲಾಯಿತು.

# ಪ್ರದಕ್ಷಿಣೆ ಮೂಲಕ ದೀಪಾಲಂಕಾರ ವೀಕ್ಷಿಸಿ ಸಿಎಂ ದಿಲ್‌ಖುಷ್

ಕೆ.ಎಂ.ಮುನಿಗೋಪಾಲ್‌ರಾಜು ಅವರು ವಿದ್ಯುತ್ ದೀಪಾಲಂಕಾರದ ಬಗ್ಗೆ ಸಿಎಂಗೆ ವಿವರಿಸಿದರು. ಈ ವೇಳೆ ಸೆಸ್ಕ್ ವತಿಯಿಂದ ಮಾಡಲಾಗಿರುವ ಅತ್ಯಾಕರ್ಷಕ ವಿದ್ಯುತ್ ದೀಪಾಲಂಕಾರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ತಮ್ಮೊಡನಿದ್ದ ಮುಖಂಡರೊಂದಿಗೆ ಫೋಟೋ ತೆಗೆಸಿಕೊಂಡು, ನಂತರ ಕಾರಿನಲ್ಲಿ ತಮ್ಮ ನಿವಾಸಕ್ಕೆ ತೆರಳಿದರು.

ಮುಖ್ಯಮಂತ್ರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಜಿಪಂ ಸಿಇಒ ಯುಕೇಶ್ ಕುಮಾರ್, ಸೆಸ್ಕ್ ಅಧೀಕ್ಷಕ ಇಂಜಿನಿಯರ್ ಸುನೀಲ್, ಎಇಇ ಅನಿತಾ ಮತ್ತಿತರರು ಸಾಥ್ ನೀಡಿದರು.

**ಸಿಎಂಗೆ ಜೈಕಾರ:** ಅಂಬಾರಿ ಬಸ್‌ನಲ್ಲಿ ವಿದ್ಯುತ್ ದೀಪಾಲಂಕಾರದ ಸೊಬಗನ್ನು ಸವಿಯುವ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಾರ್ವಜನಿಕರತ್ತ ಕೈ ಬೀಸಿದರು. ಚಾಮರಾಜ ಜೋಡಿ ರಸ್ತೆಯಲ್ಲಿ ರಸ್ತೆ ಬದಿ ನಿಂತಿದ್ದ ಮಹಿಳೆಯರು ಸಿದ್ದರಾಮಯ್ಯ ಅವರಿಗೆ ಜೈಕಾರ ಹಾಕಿದರು. ಓರ್ವ ಮಹಿಳೆ ವಿಶಿಲ್ ಹಾಕಿ, ಅಭಿಮಾನ ಮೆರೆದರು. ಚಾಮರಾಜ ವೃತ್ತ, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ ಸೇರಿದಂತೆ ಹಲವೆಡೆ ಸಿದ್ದರಾಮಯ್ಯ ಅವರಿಗೆ ಜೈಕಾರ ಕೇಳಿಬಂದಿತು.

**ಟ್ರಾಫಿಕ್ ಜಾಮ್ ಕಿರಿಕಿರಿ:** ಮುಖ್ಯಮಂತ್ರಿಗಳು ದಸರಾ ದೀಪಾಲಂಕಾರ ವೀಕ್ಷಣೆ ಮಾರ್ಗದುದ್ದಕ್ಕೂ ಸಂಚಾರ ನಿಯಂತ್ರಿಸಲಾಗಿತ್ತು. 5–10 ನಿಮಿಷ ಮುಂಚಿತವಾಗಿ ಎಲ್ಲಾ ಸಂಪರ್ಕ ರಸ್ತೆಗಳ ಬಂದ್ ಮಾಡಿದ್ದರಿಂದ ವಾಹನಗಳು ಸಾಲುಗಟ್ಟಿ ನಿಂತಿದ್ದವು. ರಾಮಸ್ವಾಮಿ ವೃತ್ತ, ನಾರಾಯಣಶಾಸ್ತ್ರಿ ರಸ್ತೆ, ತ್ಯಾಗರಾಜ ರಸ್ತೆ, ಬಸವೇಶ್ವರ ವೃತ್ತ, ಗನ್‌ಹೌಸ್ ವೃತ್ತ, ಬಿ.ಎನ್.ರಸ್ತೆ ಹಾರ್ಡಿಂಜ್ ವೃತ್ತ, ಕೆ.ಆರ್.ವೃತ್ತ, ಆಯುರ್ವೇದ ಆಸ್ಪತ್ರೆ ರಸ್ತೆವರೆಗೆ ವಿಪರೀತ ಟ್ರಾಫಿಕ್ ಜಾಮ್ ಉಂಟಾಗಿ, ವಾಹನ ಸವಾರರು ರೋಸಿ ಹೋದರು.

**ಮೋದಿ ಉದ್ಘೋಷ:** ರಾಮಸ್ವಾಮಿ ವೃತ್ತದಿಂದ ಬಸ್ ಹತ್ತುತ್ತಿದ್ದ ಸಿಎಂ ಸಿದ್ದರಾಮಯ್ಯನವರನ್ನು ವೃತ್ತದಲ್ಲಿನ ವಿದ್ಯುತ್ ದೀಪಾಲಂಕಾರಕ್ಕೆ ಕರೆದೊಯ್ದರು. ಇದರಿಂದ ಬಸ್ ಹೊರಡುವುದು ಸ್ವಲ್ಪ ತಡವಾಗಿದ್ದರ ಪರಿಣಾಮ ಚಾಮರಾಜ ಜೋಡಿ ರಸ್ತೆಯ ಶಾಂತಲಾ ಥೀಯೇಟರ್ ಸಿಗ್ನಲ್ ಬಳಿ ವಾಹನ ದಟ್ಟಣೆ ವಿಪರೀತವಾಗಿತ್ತು. ಇದರಿಂದ ರೋಸಿ ಹೋಗಿದ್ದ ವಾಹನ ಸವಾರರು, ಅಂಬಾರಿ ಬಸ್ ಬರುತ್ತಿದ್ದಂತೆ ನಿರಂತರವಾಗಿ ಹಾರನ್ ಮಾಡಿ ಅಸಮಾಧಾನ ಹೊರ ಹಾಕಿದರು. ಈ ವೇಳೆ ಕೆಲವರು ಮೋದಿ ಮೋದಿ ಎಂದು ಕೂಗಿದರು. ಆಲ್ಬರ್ಟ್ ವಿಕ್ಟರ್ ರಸ್ತೆಯಲ್ಲಿ ಕೆಲ ಪಾದಚಾರಿಗಳು ಮೋದಿ ಹೆಸರನ್ನು ಜೋರಾಗಿ ಕೂಗಿದ್ದು ಕೇಳಿಬಂದಿತು.

**ಪೊಲೀಸರು ಹೈರಾಣ:** ವೈವಿಧ್ಯಮಯ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದ ನಗರದಲ್ಲಿ ಮುಖ್ಯಮಂತ್ರಿಗಳು ಒಂದು ಸುತ್ತು ಹಾಕುವಷ್ಟರಲ್ಲಿ ಪೊಲೀಸರು ಹೈರಾಣಾದರು. ಸಂಚಾರ ನಿಯಂತ್ರಿಸಲು ಹರಸಾಹಸಪಟ್ಟರು. ಡಿಸಿಪಿಗಳಾದ ಬಿಂದುಮಣಿ ಹಾಗೂ ಸುಂದರ್ ರಾಜ್ ಅವರು ಚಾಮರಾಜ ವೃತ್ತದವರೆಗೂ ಕಾಲ್ನಡಿಗೆಯಲ್ಲೇ ಬಂದು ವಾಹನ ಸಂಚಾರ ನಿರ್ವಹಣೆ ಮಾಡಿದರು.

# ದೇಶ-ವಿದೇಶದಲ್ಲಿ ದಾಖಲೆ ಬರೆದ ಕಾಂತಾರ ಅಧ್ಯಾಯ-1



ಕರಾವಳಿಯ ದೈವ ನರ್ತನದ ಕ್ಲೈಮ್ಯಾಕ್ಸ್‌ನಿಂದಲೇ ಗಮನ ಸೆಳೆದ ಚಿತ್ರ 'ಕಾಂತಾರ'. ಕಾಡಂಚಿನ ಬುಡಕಟ್ಟು ಜನರು ಮತ್ತು ಉಳ್ಳವರು, ಅಧಿಕಾರಿಗಳ ನಡುವಿನ ದೈವ ಸಂಘರ್ಷ ಚಿತ್ರ ಜಗತ್ತಿನಲ್ಲೊಂದು ಹೊಸ ಅಧ್ಯಾಯ ತೆರೆದಿಟ್ಟಿತ್ತು. ಹೀಗಾಗಿಯೇ 'ಕಾಂತಾರ ಚಾಪ್ಟರ್ 1' ಮೇಲೆ ಸಾಕಷ್ಟು ನಿರೀಕ್ಷೆಯಿತ್ತು. ವಿಜಯದಶಮಿಯಂದು ಕನ್ನಡ, ತೆಲುಗು ಸೇರಿದಂತೆ ಐದು ಭಾಷೆಗಳಲ್ಲಿ ದೇಶ-ವಿದೇಶದಲ್ಲಿ ಬಿಡುಗಡೆಯಾದ ಕಾಂತಾರ-1 ಕನ್ನಡ ಚಿತ್ರರಂಗದಲ್ಲಿ ಒಂದು ಮೈಲಿಗಲ್ಲನ್ನೇ ಸೃಷ್ಟಿಸಿದೆ.

ಮೊದಲ ದಿನವೇ 'ಬುಕ್ ಮೈ ಶೋ' ಆ್ಯಪ್‌ನಲ್ಲಿ 1.28 ಮಿಲಿಯನ್ ಟಿಕೆಟ್ ಬುಕ್ ಆಗಿವೆ ಎಂದು ಚಿತ್ರ ನಿರ್ಮಾಣ ಸಂಸ್ಥೆ ಹೊಂಬಾಳೆ ಫಿಲ್ಮ್ ಸಾಮಾಜಿಕ ಮಾಧ್ಯಮದಲ್ಲಿ ಅಧಿಕೃತವಾಗಿ ತಿಳಿಸಿದೆ. ಭಾರತದಲ್ಲಿ ಮಾತ್ರವಲ್ಲದೇ ವಿದೇಶದಲ್ಲೂ ಸದ್ದು ಮಾಡುತ್ತಿರುವ ಕಾಂತಾರ-1ಕ್ಕೆ ಈವರೆಗೂ ಯಾವ ಕನ್ನಡ ಚಿತ್ರಕ್ಕೂ ಸಿಗದಂತಹ ಅದ್ದೂರಿ ಪ್ರತಿಕ್ರಿಯೆ ಸಿಕ್ಕಿದೆ. ಇಂಗ್ಲೆಂಡ್‌ನ ಬಸ್‌ಗಳು ಹಾಗೂ ಟ್ಯಾಕ್ಸಿಗಳ ಮೇಲೆ ಕಾಂತಾರ-1 ಪೋಸ್ಟರ್‌ಗಳು ರಾರಾಜಿಸುತ್ತಿವೆ. ಟಿಕೆಟ್ ಬುಕ್ಕಿಂಗ್ ಕೂಡ ದಾಖಲೆ ನಿರ್ಮಿಸಿದೆ.

ಕ್ರಿ.ಶ.4-5 ಶತಮಾನದ ಕದಂಬರ ಆಳ್ವಿಕೆಯ ಸಮಯವನ್ನು ಹಿನ್ನೆಲೆಯಾಗಿಟ್ಟುಕೊಂಡು ಸೃಷ್ಟಿಯಾದ ಮಾಯಾವಿಲೋಕ ಕಾಂತಾರ-1. ಸಾಕಷ್ಟು ಫ್ರೇಮ್‌ಗಳು ದೇಶದ ಪ್ರಖ್ಯಾತ ನಿರ್ದೇಶಕ ರಾಜಮೌಳಿಯ 'ಬಾಹುಬಲಿ', ಸಂಜಯ್ ಲೀಲಾ ಬನ್ಸಾಲಿಯ 'ಪದ್ಮಾವತ್' ಚಿತ್ರಗಳನ್ನು ನೆನಪಿಸುತ್ತವೆ. ಹಿಂದಿನ 'ಕಾಂತಾರ' ಭಕ್ತಿಪ್ರಧಾನ ಚಿತ್ರವಾಗಿತ್ತು, ನಮ್ಮ ಮಣ್ಣಿನ ಸೊಗಡಿನ ಕಥೆಯೂ ಆಗಿತ್ತು ಎಂಬುದನ್ನು ಮರೆಸುವಂತಿವೆ. ಚಿತ್ರದ ಕೊನೆಯಲ್ಲಿ 'ಅಧ್ಯಾಯ-2' ಬರುವ ಸುಳಿವು ನೀಡಲಾಗಿದೆ.

ಕನಕವತಿಯಾಗಿ ರುಕ್ಮಿಣಿ ವಸಂತ್ ಯಶಸ್ವಿಯಾಗಿ ಪ್ರೇಕ್ಷಕರ ಗಮನ ಸೆಳೆದಿದ್ದಾರೆ. ಬಾಂಗ್ರಾ ರಾಜ ಮನೆತನದ ಅರಸರಾಗಿ ಜಯರಾಮ್ ಮತ್ತು ಅವರ ಮಗ ಕುಲಶೇಖರನಾಗಿ ಗುಲ್ಶನ್ ದೇವಯ್ಯ ಕಾಣಿಸಿಕೊಂಡಿದ್ದಾರೆ. ಸೈನಿಕನಾಗಿ ಪ್ರಕಾಶ್ ತುಮಿನಾಡು ಹಾಗೂ ದೀಪಕ್ ರೈ ಕೆಲವೆಡೆ ನಗಿಸುತ್ತಾರೆ. ಅಜನೀಶ್ ಲೋಕನಾಥ್ ಹಿನ್ನೆಲೆ ಸಂಗೀತ ದೃಶ್ಯಗಳ ವೈಭವವನ್ನು ಇನ್ನಷ್ಟು ಹೆಚ್ಚಿಸಿದೆ. ಆದರೆ ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ಅರವಿಂದ್ ಕಶ್ಯಪ್ ಛಾಯಾಚಿತ್ರಗ್ರಹಣ ಇಡೀ ಚಿತ್ರದ ಮತ್ತೊಂದು ಹೈಲೆಟ್. ಕ್ಲೈಮ್ಯಾಕ್ಸ್‌ನಲ್ಲಿ ಬರುವ ಬ್ರಹ್ಮರಾಕ್ಷಸನ ಪಾತ್ರವಂತೂ ಬಾಲಿವುಡ್, ಹಾಲಿವುಡ್ ಮುಂದಿಯ ದೈವದ ಕಥೆಯನ್ನು ನೋಡಿಕೊಂಡು ಬಂದೆವು ಎಂಬ ಅನುಭವ ನೀಡಿ ಕಳುಹಿಸುತ್ತದೆ.

# ವರ್ಣತರಂಗ

## ಕಲರ್‌ಫುಲ್ ಕಥೆ



ವ್ಯಕ್ತಿಯೊಬ್ಬನ ಕಲರ್‌ಫುಲ್ ಜೀವನದ ಏರುಪೇರಿನ ಹೇಳುವ ಚಿತ್ರ ವರ್ಣತರಂಗ. ತೀರ್ಥೇಶ್ ಕೊರಮೇರು ಅವರ ನಿರ್ದೇಶನದ ಈ ಚಿತ್ರದ ಮೂರು ಹಾಡುಗಳು ಇತ್ತೀಚೆಗೆ ಬಿಡಗಡೆಯಾದವು. ಬೆಳ್ತಂಗಡಿಯ ಬಿ.ಶಿವಕುಮಾರ್ ಅವರ ನಿರ್ಮಾಣದ ಮೂರನೇ ಚಿತ್ರ ಇದಾಗಿದೆ, ತೀರ್ಥೇಶ್ ಕೊರಮೇರು ಅವರೇ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ನಟ ತಿಲಕ್ ಎಸಿಪಿ ಪಾತ್ರದಲ್ಲಿ ನಟಿಸಿದ್ದು, ಜೀವಿತಾ ನಾಯಕಿಯಾಗಿದ್ದಾರೆ, ಮತ್ತೊಬ್ಬ ನಾಯಕಿ ಸಾಕ್ಷಿ ಮೇಘನಾ ಪತ್ರಕರ್ತೆಯ ಪಾತ್ರದಲ್ಲಿದ್ದು, ಹ್ಯಾಕರ್ ಅಗಿ ವರ್ಧನ್. ಉಳಿದಂತೆ ಹೇಮಂತ್, ರಮೇಶ್ ಪಂಡಿತ್, ಬಲ ರಾಜವಾಡಿ, ಟೆನ್ನಿಸ್ ಕೃಷ್ಣ, ಜಯರಾಮ್, ಬಿರಾದಾರ್ ನಟಿಸಿದ್ದಾರೆ.

ನಿರ್ದೇಶಕ ತೀರ್ಥೇಶ್ ಮಾತನಾಡಿ, ಮೂಲತಃ ನಾನೊಬ್ಬ ವಿಎಫ್‌ಎಕ್ಸ್ ತಂತ್ರಜ್ಞನಾಗಿದ್ದು, ನನ್ನ ನಿರ್ದೇಶನದ ಮೊದಲ ಚಿತ್ರವಿದು. ವರ್ಣತರಂಗ ಅಂದರೆ ಬಣ್ಣಗಳ ಅಲೆ ಎಂದರ್ಥ. ವ್ಯಕ್ತಿಯೊಬ್ಬ ಕಲರ್‌ಫುಲ್ ಆಗಿ ನಿಜ ಜೀವನದಲ್ಲಿ ಹೇಗಿರುತ್ತಾನೆ? ಆತ ನಕರಾತ್ಮಕವಾಗಿ ಚಿಂತನೆ ಮಾಡುತ್ತಾ, ಯಾವ ರೀತಿ ತನ್ನ ಸೇಡು ತೀರಿಸಿಕೊಳ್ಳುತ್ತಾನೆ? ಎಂಬುದನ್ನು ನಮ್ಮ ಚಿತ್ರದ ಮೂಲಕ ಹೇಳಿದ್ದೇನೆ. ಬೆಂಗಳೂರು, ಮಂಗಳೂರು ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಚಿತ್ರದಲ್ಲಿ ವಿಎಫ್‌ಎಕ್ಸ್ ಶೇ. ಇಪ್ಪತ್ತೈದರಷ್ಟು ಬರುತ್ತದೆ ಎಂದು ವಿವರಿಸಿದರು.



ಚಿತ್ರದ 'ಸುಕ್ಕ ಸುಕ್ಕ' ಎಂಬ ಎಣ್ಣೆ ಹಾಡಿಗೆ ಗಾಯಕ ಚಂದನ್‌ಶೆಟ್ಟಿ ದನಿಯಾಗಿದ್ದಾರೆ. ಈ ಚಿತ್ರಕ್ಕೆ ಆಕಾಶ್ ರೆಡ್ಡಿ, ಯಶವಂತ್ ಭೂಪತಿ ಅವರ ಸಂಗೀತ, ಮನುಗೌಡ ಅವರ ಛಾಯಾಗ್ರಹಣ, ವೆಂಕಿ.ಯುಡಿವಿ ಅವರ ಸಂಕಲನ, ವಿ.ಎನ್.ಸ್ವಾಮಿ, ಆಕಾಶ್‌ರೆಡ್ಡಿ, ಮಿಥುನ್ ಸುವರ್ಣ ಅವರ ಸಾಹಿತ್ಯವಿದೆ. ಕಾರ್ಯಕಾರಿ ನಿರ್ಮಾಪಕರಾಗಿ ಕೆ.ಬಾಲಸುಬ್ರಮಣ್ಯನ್ ಕೈಜೋಡಿಸಿದ್ದಾರೆ. ಥ್ರಿಲ್ಲರ್ ಮಂಜು, ಕುಂಗ್‌ಫೂ ಚಂದ್ರು, ನರಸಿಂಹ ಅವರ ಸಾಹಸ, ನಾಗಿ-ಆನಂದ್ ಅವರ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ವರ್ಣತರಂಗ ಸದ್ಯದಲ್ಲೆ ಸೆನ್ಸಾರ್ ಅಂಗಳಕ್ಕೆ ಹೋಗಲಿದ್ದು, ಇನ್ನೆರಡು ತಿಂಗಳಲ್ಲಿ ತೆರೆಗೆ ತರಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

# ಕಂದೀಲು ಬಡ ರೈತನ ಮಗನ ಹೆಣದ ಕಥೆ..



ಹಳ್ಳಿಯ ಬಡವನೊಬ್ಬನ ಮಗ ಹಣ ಸಂಪಾದನೆಗಾಗಿ ವಿದೇಶಕ್ಕೆ ಹೋಗುತ್ತಾನೆ. ಅಲ್ಲಿ ನಡೆದ ಘಟನೆಯಿಂದಾಗಿ ಆತ ಮರಣ ಹೊಂದಿದಾಗ ಏನೂ ಅರಿಯದ ಆ ಬಡ ವ್ಯಕ್ತಿಯ ಮಗನ ಮೃತದೇಹವನ್ನು ತನ್ನೂರಿಗೆ ತರಿಸಿಕೊಳ್ಳಲು ಎಷ್ಟೆಲ್ಲಾ ಹರಸಾಹಸ ಮಾಡಬೇಕಾಗುತ್ತದೆ, ಕಡೆಗೂ ಆ ಬಡ ಕುಟುಂಬ ಮಗನ ಮುಖ ನೋಡಲು ಸಾಧ್ಯವಾಯಿತೇ, ಇಲ್ಲವೇ ಎಂಬ ಮನ ಮಿಡಿಯುವ ಕಥಾಹಂದರ ಇರುವ ಕಂದೀಲು ಚಿತ್ರಕ್ಕೆ 71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ವಿಭಾಗದಲ್ಲಿ ಅತ್ಯುತ್ತಮ ಪ್ರಾದೇಶಿಕ ಚಿತ್ರ ಪ್ರಶಸ್ತಿ ಲಭಿಸಿತ್ತು. ಆ ಸಂತಸ ಮಾಧ್ಯಮದವರೊಂದಿಗೆ ಹಂಚಿಕೊಳ್ಳಲು ನಿರ್ಮಾಪಕ ಪ್ರಕಾಶ್ ಕಾರ್ಯಪ್ಪ ಅವರು ಸಂತೋಷ ಕೂಟ ಆಯೋಜಿಸಿದ್ದರು, ಈ ಚಿತ್ರಕ್ಕೆ ನಿರ್ಮಾಪಕರ ಪತ್ನಿ ಯಶೋಧ ಕಟ್ಟುಕತ್ತಿರ ಆಕ್ಷನ್‌ಕಟ್ ಹೇಳಿದ್ದು, ಪಿ.ವಿ.ಆರ್.ಸ್ವಾಮಿ ಅವರ ಛಾಯಾಗ್ರಹಣ, ಶ್ರೀ ಸುರೇಶ್ ಅವರ ಸಂಗೀತ ಇದೆ. ಪ್ರೇಮಾ ಕಾರಂತ್, ಕವಿತಾ ಲಂಕೇಶ್ ನಂತರ ರಾಷ್ಟ್ರಪ್ರಶಸ್ತಿ ಪಡೆದ ಮೂರನೇ ಮಹಿಳಾ ನಿರ್ದೇಶಕಿ ಎಂಬ ಹೆಗ್ಗಳಿಕೆ ಯಶೋಧ ಕಟ್ಟುಕತ್ತಿರ ಅವರಿಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕಿ ಯಶೋಧ, ರಾಷ್ಟ್ರಪತಿಗಳಿಂದ ಪ್ರಶಸ್ತಿ ಸ್ವೀಕರಿಸುವುದು ನಿಜಕ್ಕೂ ಒಂದು ಅವಿಸ್ಮರಣೀಯ ಅನುಭವ, ಬೆಂಗಳೂರಿನ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ನಾನು ಈಗಾಗಲೇ ಎರಡು ಕೊಡವ ಹಾಗೂ ಕನ್ನಡ ಸಿನಿಮಾ ಮಾಡಿದ್ದೇನೆ. ಸುಮನ್ ನಗರ್‌ಕರ್ ನಟನೆಯ 'ರಂಗಪ್ರವೇಶ' ಮೂಲಕ ನಿರ್ದೇಶಕಿಯಾದೆ. ನನ್ನ ಪತಿ ನನಗಾಗೇ ಚಿತ್ರ ನಿರ್ಮಾಣಕ್ಕಿಳಿದರು. ಇದೇ ಮೊದಲ ಬಾರಿಗೆ ಪತಿ, ಪತ್ನಿ ಇಬ್ಬರೂ ಒಂದೇ ವೇದಿಕೆಯಲ್ಲಿ ಒಂದೇ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಪಡೆದಿರುವ ಹೆಗ್ಗಳಿಕೆ ನಮ್ಮದು ಎಂದರು.

ನಿರ್ಮಾಪಕ ಪ್ರಕಾಶ್ ಕಾರ್ಯಪ್ಪ ಮಾತನಾಡುತ್ತಾ ಸೇನೆಯಿಂದ ನಿವೃತ್ತಿಯಾದ ನಂತರ ಬಣ್ಣದ ಲೋಕದ ಕಡೆಗೆ ಆಸಕ್ತಿ ಬಂತು. ಚಿತ್ರೋತ್ಸವ ಗಳಿಗೆಂದೇ ಸಿನಿಮಾ ಮಾಡುವುದು ನನ್ನ ಅಭಿರುಚಿ, ನಾಗೇಶ್.ಎನ್ ಅವರ 'ಅನಾಮಿಕ ಮತ್ತು ಇತರೆ ಕಥೆಗಳು' ಸಂಕಲನದಿಂದ ಆಯ್ದ ಹೆಣ ಎಂಬ ಕಥೆಯನ್ನಿಟ್ಟುಕೊಂಡು ಕಂದೀಲು ಚಿತ್ರ ಮಾಡಿದ್ದೇವೆ ಚಿತ್ರವನ್ನು ಸದ್ಯದಲ್ಲಿ ಬಿಡುಗಡೆ ಮಾಡುವ ಯೋಚನೆಯಿದೆ ಎಂದರು.

ಇಡೀ ಚಿತ್ರಕ್ಕೆ ಬೆನ್ನೆಲುಬಾಗಿ ನಿಂತಿರುವ, ಛಾಯಾಗ್ರಾಹಕ ಪಿ.ವಿ.ಆರ್.ಸ್ವಾಮಿ ಮಾತನಾಡಿ, ನನ್ನ ಛಾಯಾಗ್ರಹಣದ ಚಿತ್ರಕ್ಕೆ ಎರಡನೇ ಸಲ ರಾಷ್ಟ್ರಪ್ರಶಸ್ತಿ ಸಿಕ್ಕಿರುವುದು ಖುಷಿಯ ವಿಷಯ. ನಮ್ಮ ಊರಾದ ಗೂಗಾರ ದೊಡ್ಡಿಯಲ್ಲಿ ಚಿತ್ರದ ಬಹುತೇಕ ಚಿತ್ರೀಕರಣ ನಡೆದಿದೆ ಎಂದರು. ಈ ಚಿತ್ರದಲ್ಲಿ ಕಾಂತಾರ ಖ್ಯಾತಿಯ ಪ್ರಭಾಕರ್ ಬಿ.ಕುಂದರ ಹಾಗೂ ವನಿತಾ ರಾಜೇಶ್ ರೈತ ದಂಪತಿಯಾಗಿ, ಅವರ ಮಗನಾಗಿ ಗುರುತೇಜಸ್, ಮಗಳಾಗಿ ಖುಷಿ ಕಾವೇರಮ್ಮ ನಟಿಸಿದ್ದಾರೆ.

# ಕೋಗುಂಡಿ ಹಾಲೇಶ್ ನಿರ್ದೇಶನದ ಪರಾಕ್ ಚಿತ್ರದಲ್ಲಿ ಶ್ರೀಮುರಳಿ



ಬಘೀರ ಚಿತ್ರದದ ಸಕ್ಸಸ್ ಬಳಿಕ ರೋರಿಂಗ್ ಸ್ಟಾರ್ ಶ್ರೀಮುರಳಿ ಅಭಿನಯದ ಯಾವುದೇ ಚಿತ್ರ ಸೆಟ್ಟೇರಿದ್ದಿಲ್ಲ, ಬಹಳ ದಿನಗಳ ನಂತರ ಶ್ರೀಮುರುಳಿ ಅಭಿನಯಿಸುತ್ತಿರುವ ಪರಾಕ್ ಚಿತ್ರಕ್ಕೆ ಇತ್ತೀಚೆಗೆ ಅಧಿಕೃತ ಚಾಲನೆ ಸಿಕ್ಕಿದೆ, ಶ್ರೀ ಬಂಡಿ ಮಹಾಕಾಳಿ ದೇವಸ್ಥಾನದಲ್ಲಿ ಪರಾಕ್ ಚಿತ್ರದ ಮುಹೂರ್ತ ಸಮಾರಂಭ ನೆರವೇರಿದೆ. ಕೋಗುಂಡಿ ಹಾಲೇಶ್ ಅವರ ಕಥೆ, ಚಿತ್ರಕಥೆ ಹಾಗೂ ನಿರ್ದೇಶನದ ಈ ಚಿತ್ರದ ಪ್ರಥಮ ದೃಶ್ಯಕ್ಕೆ ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ಅವರು ಕ್ಲ್ಯಾಪ್ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಈಗಾಗಲೇ ಒಂದಷ್ಟು ಕಿರು ಚಿತ್ರಗಳನ್ನು ನಿರ್ದೇಶಿಸಿ ಅನುಭವ ಪಡೆದಿರುವ ಹಾಲೇಶ್ ಕೋಗುಂಡಿ ಅವರು ಪರಾಕ್ ಚಿತ್ರದ ಮೂಲಕ ನಿರ್ದೇಶಕರಾಗಿ ಕನ್ನಡ ಚಿತ್ರರಂಗದಲ್ಲಿ ಮೊದಲ ಹೆಜ್ಜೆ ಇಡುತ್ತಿದ್ದಾರೆ.


ಮುಹೂರ್ತದ ನಂತರ ಸುದ್ದಿಗಾರರೊಂದಿಗೆ ನಾಯಕನಟ ಶ್ರೀಮುರಳಿ ಮಾತನಾಡುತ್ತಾ ಪರಾಕ್ ವಿಂಟೇಜ್ ಸ್ಟೈಲ್‌ನಲ್ಲಿ ಮೂಡಿ ಬರುತ್ತಿರುವ ಚಿತ್ರ. ಬಘೀರ ಆದ ನಂತರ ನನ್ನ ಮುಂದಿನ ಚಿತ್ರಕ್ಕೆ ಯಾವ ರೀತಿಯ ಕಥೆ ಆಯ್ಕೆ ಮಾಡಬೇಕು ಎಂಬ ಟೆನ್ಷನ್ ಇತ್ತು. ಸುಮಾರು 200ಕ್ಕೂ ಹೆಚ್ಚು ಕಥೆಗಳನ್ನು ನಾನು ಕೇಳಿದ್ದೆ. ಅದರಲ್ಲಿ ಪರಾಕ್ ಕಥೆ ನನಗೆ ತುಂಬಾ ಇಷ್ಟವಾಯಿತು, ಪರಾಕ್ ಚಿತ್ರತಂಡದ ಜೊತೆ ಈಗಾಗಲೇ ಎರಡು ವರ್ಷ ಟ್ರಾವೆಲ್ ಮಾಡಿದ್ದೇನೆ. ಈಗ ಚಿತ್ರಕ್ಕೆ ಅಧಿಕೃತ ಚಾಲನೆ ಸಿಕ್ಕಿದೆ, ಇದೇ ತಿಂಗಳಿಂದ ಚಿತ್ರದ ಶೂಟಿಂಗ್ ಕೂಡ ಶುರುವಾಗಲಿದೆ ಎಂದು ಹೇಳಿದರು.

ಅರ್ಜುನ್ ಜನ್ಯ, ವಿ.ಹರಿಕೃಷ್ಣ ಅವರ ನಂತರ ಕನ್ನಡ ಚಿತ್ರರಂಗದ ಸಂಗೀತ ಲೋಕದಲ್ಲಿ ಹೊಸ ಅಲೆ ಎಬ್ಬಿಸುತ್ತಿರುವವರೆಂದರೆ ಅದು ಚರಣ್‌ರಾಜ್. ಚರಣ್‌ರಾಜ್ ಅವರ ಸಂಗೀತ ನಿರ್ದೇಶನಕ್ಕೆ ಪ್ರತ್ಯೇಕ ಪ್ರೇಕ್ಷಕ ವರ್ಗವೇ ಹುಟ್ಟಿಕೊಂಡಿದೆ. ಟಗರು, ಸಲಗ, ಭೀಮ, ಸಪ್ತ ಸಾಗರದಾಚೆ ಎಲ್ಲೋ, ಬ್ಯಾಡ್ ಮ್ಯಾನರ್ಸ್, ಹೆಡ್‌ಬುಷ್, ಜೇಮ್ಸ್ ಇಂಥ ಚಿತ್ರಗಳಿಗೆ ಸಂಗೀತ ಸಂಯೋಜಿಸಿರುವ ಕನ್ನಡದ ಪ್ರತಿಭಾವಂತ ಸಂಗೀತ ಸಂಯೋಜಕ ಚರಣ್‌ರಾಜ್ ಪರಾಕ್ ಚಿತ್ರಕ್ಕೆ ಮ್ಯೂಸಿಕ್ ಮಾಡುತ್ತಿದ್ದಾರೆ.

ಯುವ ಪ್ರತಿಭೆ ಹಾಲೇಶ್ ಕೋಗುಂಡಿ ಅವರು ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಇವರಿಗೆ ಇದು ಮೊದಲ ಚಿತ್ರವಾಗಿದೆ. ಈ ಮೊದಲು ಕೆಲವು ಕಿರು ಚಿತ್ರಗಳನ್ನು ನಿರ್ದೇಶನ ಮಾಡಿರೋ ಅನುಭವ ಇವರಿಗಿದೆ ಇದೀಗ ಪರಾಕ್ ಚಿತ್ರದ ಮೂಲಕ ಡೈರೆಕ್ಟರ್ ಆಗುತ್ತಿದ್ದಾರೆ. ದೊಡ್ಡ ಬಜೆಟ್‌ನಲ್ಲಿ ತಯಾರಾಗುತ್ತಿರುವ ಪರಾಕ್ ಚಿತ್ರಕ್ಕೆ ಬ್ರ್ಯಾಂಡ್ ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ಬಂಡವಾಳ ಹೂಡಲಾಗುತ್ತಿದೆ.

ಇನ್ನು ಈ ಚಿತ್ರಕ್ಕೆ ಸಂದೀಪ್ ವಲ್ಲೂರಿ ಅವರ ಕ್ಯಾಮೆರಾ ವರ್ಕ್, ಉಲ್ಲಾಸ್ ಹೈದೂರು ಅವರ ಕಲಾ ನಿರ್ದೇಶನವಿದ್ದು, ಇಂಚರಾ ಸುರೇಶ್ ಈ ಚಿತ್ರಕ್ಕೆ ಕಾಸ್ಟ್ಯೂಮ್ ಡಿಸೈನ್ ಮಾಡುತ್ತಿದ್ದಾರೆ. ಶೀಘ್ರದಲ್ಲೇ ಉಳಿದ ಅಪ್‌ಡೇಟ್‌ನ್ನು ಚಿತ್ರತಂಡ ರಿವೀಲ್ ಮಾಡಲಿದೆ.

# ಸಿನಿಪದಬಂಧ-596



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
ದೂರವಾಣಿ ಸಂಖ್ಯೆ ______

### ಎಡದಿಂದ ಬಲಕ್ಕೆ

1. ಪ್ರಜ್ವಲ್ ದೇವರಾಜ್‌ನ 'ಮಂಗಳ ಗ್ರಹ' 4
5. ಶ್ರೀನಾಥ್- ಮಂಜುಳಾ ಅಭಿನಯದಲ್ಲಿ ಬೆಸೆದುಕೊಂಡಿರುವ ಪ್ರೀತಿ 5
6. ಪ್ರೀತಿಯಲ್ಲಿ ಮುಳುಗಿರುವ ಆರತಿಗೆ ಮಾರುತಿ ಶಿವರಾಂ ನಿರ್ದೇಶಕ 4
7. ಗಂಗಾಧರ್ – ಭಾರತಿಯ ಬಾಳ ಉಯ್ಯಾಲೆ 6
9. ಉಪೇಂದ್ರನ H2O ನಲ್ಲಿರುವ ನೀರಿನ ತಂದೆ 5
11. ನನಸಾದ 'ಸ್ವಪ್ನ' 3
13. ಗೋರಿ ಕಟ್ಟಿ ಆಡಿದ ದೇಶಿಯ ಆಟ 3
14. ಶ್ರೀಮುರುಳಿ ಆರ್ಭಟಿಸಿದ ಚಿತ್ರವಿದು 3
17. ರಾಜಕುಮಾರ್ ಅಭಿನಯದಲ್ಲಿ ಒಂಬೈನೂರು ಲಕ್ಷಗಳ ಒಡೆಯನಿದ್ದಾನೆ 8

### ಮೇಲಿನಿಂದ ಕೆಳಕ್ಕೆ

1. ಅನಂತ್‌ನಾಗ್ ಅಭಿನಯದ ಸೊಬಗಿನ ರಾಜಗೃಹ 7
2. ಇದೊಂದು ಡಾ. ರಾಜ್‌ಕುಮಾರ್ ಬಿರುದು 6
3. ವಿಷ್ಣುವರ್ಧನ್ – ಜಯಪ್ರದಾಳ ಪ್ರೀತಿಯ ಬೆಸುಗೆ 4
4. ಕನ್ನಡದ ಲೇಡಿ ಟೈಗರ್ 3
5. ಈಕೆ ನಮ್ಮೂರ ಮಂದಾರ ಹೂವೇ 2
7. ವಿಷ್ಣುವರ್ಧನ್ ಬಾಳಿನಲ್ಲಿ ಉರಿದ ಹಣತೆ 5
8. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ದಟ್ಟ ಅರಣ್ಯ ಪ್ರದೇಶ 5
10. 'ಸೌಂದರ್ಯ ___ ___ ಮನೋಹರಿ ಚಂದ್ರನ ನಿಜ ಸೋದರಿ.....', 6
12. ದರ್ಶನ್ ಅಭಿನಯಕ್ಕೆ ಮಹೇಶ್ ಬಾಬು ನಿರ್ದೇಶನವಿದೆ 3
13. ಆಂಗ್ಲದ ಪ್ರೇಮ ಕಥೆ 4
15. ಶ್ರೀನಗರ ಕಿಟ್ಟಿ –ಪ್ರಿಯಾಮಣಿ ಅಭಿನಯದ ಚಿತ್ರ 2
16. ರಾಮ್‌ಕುಮಾರನಿಗೆ ಆದ ಪೆಟ್ಟು 2

## ಸಿನಿ ಪದಬಂಧ 595ರ ಉತ್ತರ

| | | | | | | | | | | |
|---|---|---|---|---|---|---|---|---|---|---|
| ನ | ವ | ರಾ | ತ್ರಿ | | | | ಮೃ | | | ದು |
| ಮ್ಮ | | ಜ | | ಮ | ತ್ತೇ | ಮುಂ | ಗಾ | ರು | | ರ್ಗಾ |
| ಊ | | ಯು | | ಣ್ಣಿ | | | ಲ | | | ಷ್ಟ |
| ರ | ವಿ | ವ | ರ್ಮ | | ವಿ | ಜ | ಯ | ದ | ಶ | ಮಿ |
| ದೇ | | ರಾ | | | ಜ | | | | ಶಿ | |
| ವ | | ಜ | ನ | ನಾ | ಯ | ಕ | | ಅಂ | ಕು | ಶ |
| ತೆ | | | ಮ್ಯೂ | | ಲ | | ಅ | | ಮಾ | |
| | ಸಂ | ಹಾ | ರ | | ಕ್ಷ್ಮಿ | | ಮ | ದ | ರ್ | |
| | ಪ್ರ | | ಹ | | | | ರ್ | | | |
| | ದಾ | | ಮ್ಮೀ | | ರ | | | | ವೀ | |
| | ಯ | | ರ | ಣ | ಧೀ | ರ | ಕಂ | ಠೀ | ರ | ವ |

ವಿಜೇತರು: ವೆಂಕಟರಮಣ ಶೆಟ್ಟಿ,
ಸರಸ್ವತಿಪುರಂ, ಮೈಸೂರು



ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮೈಸೂರು ಮಿತ್ರ ಶನಿವಾರ 4 ಅಕ್ಟೋಬರ್ 2025






ಜಾನಪದ ಗೀತೆ, ಭಜನೆ ಹಾಗೂ ಕೊಡಗಿನ ಸಾಂಪ್ರದಾಯಿಕ ವಾದ್ಯಗಳ ಮೂಲಕ ನಡೆದ ಗೋಣಿಕೊಪ್ಪ ದಸರಾ ಸ್ತಬ್ಧ ಚಿತ್ರ ಮೆರವಣಿಗೆ ಪ್ರೇಕ್ಷಕರ ಗಮನ ಸೆಳೆಯಿತು.

# ಗೋಣಿಕೊಪ್ಪದಲ್ಲಿ ವೈಭವದ ದಸರಾ ಮೆರವಣಿಗೆ

## ಪ್ರೇಕ್ಷಕರ ಗಮನ ಸೆಳೆದ ಸ್ತಬ್ಧ ಚಿತ್ರಗಳು, ಮೆರಗು ನೀಡಿದ ಕಲಾ ತಂಡಗಳು

ಗೋಣಿಕೊಪ್ಪ, ಅ.3– ಜಾನಪದ ಗೀತೆ, ಭಜನೆ ಹಾಗೂ ಕೊಡಗಿನ ಸಾಂಪ್ರದಾಯಿಕ ವಾದ್ಯಗಳ ಮೂಲಕ ಸಾಗಿದ ಗೋಣಿಕೊಪ್ಪ ದಸರಾ ಸ್ತಬ್ಧ ಚಿತ್ರ ಮೆರವಣಿಗೆ ವೈಭವ ಸಾವಿರಾರು ಪ್ರೇಕ್ಷಕರ ಗಮನ ಸೆಳೆಯಿತು.

ಪಟ್ಟಣದ ಆರ್‌ಎಂಸಿ ಆವರಣದಿಂದ ಆರಂಭಗೊಂಡ ಸ್ತಬ್ಧ ಚಿತ್ರಗಳ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಪೊನ್ನಂಪೇಟೆ ಗೆಳೆಯರ ಬಳಗ ನಿರ್ಮಿಸಿದ್ದ ಕೊಪ್ಪಳ ಜಿಲ್ಲೆಯ ಕುಣಿಕೇರಿ ಸರ್ಕಾರಿ ಪ್ರಾಥಮಿಕ ಶಾಲೆಯ ಸ್ತಬ್ಧ ಚಿತ್ರ ಮೆಚ್ಚುಗೆ ಪಡೆಯಿತು. ಈ ಶಾಲೆಗೆ ಗುಡಿಸಿಲಿನಲ್ಲಿ ವಾಸಿಸುತ್ತಿದ್ದ ಹುಚ್ಚಮ್ಮ ಎಂಬ ಬಡ ಮಹಿಳೆ ತನಗಿದ್ದ 2 ಎಕರೆ ಜಾಗವನ್ನು ದಾನವಾಗಿ ನೀಡಿ ಊರಿನ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ಅನುಕೂಲ ಕಲ್ಪಿಸಿದ್ದ ಘೋಷವಾಕ್ಯ ಹಾಗೂ ಗೆಳೆಯರ ಬಳಗದ 'ಹುಚ್ಚಮ್ಮನಿಗೊಂದು ಸಲಾಂ' ವಾಕ್ಯ ಕೂಡ ಸಾವಿರಾರು ಪ್ರೇಕ್ಷರಕ ಗಮನ ಸೆಳೆಯಿತು.

ಬಳಗದ ಆಪರೇಷನ್ ಸಿಂಧೂರ ವಿಜಯೋತ್ಸವದ ಸ್ತಬ್ಧ ಚಿತ್ರ ಕೂಡ ಉತ್ತಮವಾಗಿತ್ತು. ಮೂರು ವಾಹನಗಳನ್ನು ಒಂದುಗೂಡಿಸಿ ಒಂದು ಚೂರೂ ಪ್ಲಾಸ್ಟಿಕ್ ಇಲ್ಲದೆ ಎಲ್ಲವನ್ನೂ ಬಟ್ಟೆಯಿಂದಲೇ ತಯಾರಿಸಿ ರೂಪಿಸಿದ್ದ ಚಿತ್ರ ಪರಿಸರ ಪ್ರೇಮ ಮತ್ತು ದೇಶಭಕ್ತಿಗೆ ಸಾಕ್ಷಿಯಾಗಿತ್ತು. ಸ್ತಬ್ಧ ಚಿತ್ರದಲ್ಲಿ ಇದ್ದ ನೂರಾರು ದೇಶಭಕ್ತಿಯ ವಾಕ್ಯಗಳನ್ನು ಕೈಯಲ್ಲಿಯೇ ಬರೆದುದೊಂದು ವಿಶೇಷವಾಗಿತ್ತು.

ಮೂರು ತಿಂಗಳಿನಿಂದ ಚಿಂತಿಸಿ, ಶ್ರಮಿಸಿ ಚಿತ್ರ ರೂಪಿಸಲಾಗಿತ್ತು. ಇದಕ್ಕೆ ಅಂದಾಜು ರೂ.80 ಸಾವಿರದಷ್ಟು ವೆಚ್ಚವಾಗಿದೆ ಎಂದು ಆಯೋಜಕರು ತಿಳಿಸಿದಾಗ ಸ್ತಬ್ಧ ಚಿತ್ರ ತಯಾರಿಸುವಲ್ಲಿ ಆಯೋಜಕರ ಶ್ರಮದ ಅರಿವಾಯಿತು. ಭಗತ್ ಸಿಂಗ್ ಯುವಕರ ಸಂಘದ ಮಾದಕ ವಸ್ತುಗಳಿಂದಾಗುವ ಹಾನಿಯನ್ನು ಕುರಿತು ತಯಾರಿಸಿದ ಆಕ್ಟೋಪಸ್ ಚಿತ್ರ ಪರಿಣಾಮಕಾರಿಯಾಗಿತ್ತು ಮಾದಕ ವಸ್ತುಗಳಿಗೆ ದಾಸರಾಗಿ ಜೀವನ ಹಾಳು ಮಾಡಿಕೊಳ್ಳುವ ಯುವಕರಿಗೆ ಎಚ್ಚರಿಕೆಯಾಗಿತ್ತು ಈ ಸ್ತಬ್ಧ ಚಿತ್ರ.

ಕೈಕೇರಿಯ ಪರಿಸರ ಪ್ರೇಮಿ ಬಳಗದವರು ನಿರ್ಮಿಸಿದ್ದ ಪರಿಸರ ಸ್ವಚ್ಛತೆ ಮತ್ತು ಮಾದಕ ವಸ್ತುಗಳ ಬಗ್ಗೆ ಕುರಿತ ಚಿತ್ರವೂ ಕೂಡ ಉತ್ತಮ ಸಂದೇಶ ಸಾರಿತು. ಮಕ್ಕಳ ಶಿಕ್ಷಣ ಉತ್ತಮ ಭವಿಷ್ಯದ ಕಡೆಗೆ ಎಂಬ ಘೋಷ ವಾಕ್ಯದ ಸ್ತಬ್ಧ ಚಿತ್ರ ಉತ್ತಮವಾಗಿತ್ತು.


ಆರ್‌ಎಸ್‌ಎಸ್ ಸಂಘಟನೆಗೆ 100 ವರ್ಷ ತುಂಬಿದ ನೆನಪಿಗಾಗಿ ಲೋಪಮುದ್ರ ಮಹಿಳಾ ಸಂಘಟನೆಯವರು ರೂಪಿಸಿದ್ದ ಆರ್‌ಎಸ್‌ಎಸ್ ಸ್ತಬ್ಧ ಚಿತ್ರ, ಬಂಟವಾಳದ ಶ್ರೀರಾಮ ಭಜನಾ ತಂಡದ ಹಾಡು ಮತ್ತು ಕುಣಿತದ ಹಾಗೂ ಆರ್‌ಎಸ್‌ಎಸ್ ಸಮವಸ್ತ್ರ ನೋಡುಗರ ಗಮನ ಸೆಳೆದವು.

ಕೇರಳದ ಎರ್ನಾಕುಲಂನ ಬೊಂಬೆ ಕುಣಿತ, ಹದಿಕೇರಿ ಕೊಡಗು ವಾಲಗ ಮೆರವಣಿಗೆಗೆ ಕಳೆ ತುಂಬಿದವು. ಇವುಗಳ ಜತೆಗೆ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ನರೇಗ, ತಾಪಂ, ಪರಿಶಿಷ್ಟ ಕಲ್ಯಾಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೃಷಿ ಇಲಾಖೆ, ಗ್ರಾಮೀಣ ಕುಡಿಯುವ ನೀರು ಜಲಜೀವನ್ ಮಿಷನ್, ತೋಟಗಾರಿಕೆ ಇಲಾಖೆ ಮೊದಲಾದ ಸ್ತಬ್ಧ ಚಿತ್ರಗಳು ಕೂಡ ಪಾಲ್ಗೊಂಡಿದ್ದವು.

2 ಕಿಮೀ ದೂರ ಸಾಗಿದ ಮೆರವಣಿಗೆ ಸಂಜೆ ಸಮುದಾಯ ಆರೋಗ್ಯ ಕೇಂದ್ರದ ಹಿಂಬದಿಯಲ್ಲಿರುವ ದಸರಾ ನಾಡಹಬ್ಬ ಕಚೇರಿ ಮುಂಭಾಗದಲ್ಲಿ ಆಯೋಜಿಸಿದ್ದ ಬಹುಮಾನ ವಿತರಣೆ ಬಳಿಕ ಮುಕ್ತಾಯಗೊಂಡಿತು.

## ಮಡಿಕೇರಿಯಲ್ಲಿ ವೈಭವದ ದಸರಾ ಜನೋತ್ಸವ

# ಶ್ರೀಕೋಟೆ ಮಹಾಗಣಪತಿ, ಶ್ರೀ ಕೋಟೆ ಮಾರಿಯಮ್ಮ ದೇವಾಲಯದ ದಶಮಂಟಪಕ್ಕೆ ಪ್ರಥಮ ಸ್ಥಾನ

ಮಡಿಕೇರಿ, ಅ.3– ಐತಿಹಾಸಿಕ ಹಿನ್ನೆಲೆಯ ಮಡಿಕೇರಿ ದಸರಾ ಜನೋತ್ಸವದ ವೈಭವಯುತ ದಶಮಂಟಪಗಳ ಶೋಭಾಯಾತ್ರೆಯಲ್ಲಿ ಶ್ರೀಕೋಟೆ ಮಹಾಗಣಪತಿ ಮತ್ತು ಶ್ರೀ ಕೋಟೆ ಮಾರಿಯಮ್ಮ ದೇವಾಲಯ ಸಮಿತಿಗಳ ಮಂಟಪಗಳು ಪ್ರಥಮ ಸ್ಥಾನದ ಗೌರವಕ್ಕೆ ಪಾತ್ರವಾದವು.

ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿದ್ದ ಮಂಟಪಗಳಲ್ಲಿ 'ಪರಶುರಾಮನಿಂದ ಕಾರ್ತಿಕೆ ವೀರನ ಸಂಹಾರ' ಕಥಾ ಸಾರಾಂಶವನ್ನು ಪ್ರದರ್ಶಿಸಿದ ಶ್ರೀ ಕಂಚಿ ಕಾಮಾಕ್ಷಿ ದೇವಾಲಯ ದ್ವಿತೀಯ ಹಾಗೂ 'ಶಿವ ಪುರಾಣದಿಂದ ಆಯ್ದ ಪರಶಿವನಿಂದ ಅಂಧಕಾಸುರನ ವಧೆ' ಕಥಾ ಸಾರಾಂಶವನ್ನು ಪ್ರಸ್ತುತಪಡಿಸಿದ ಶ್ರೀ ದಂಡಿನ ಮಾರಿಯಮ್ಮ ದೇವಾಲಯ ತೃತೀಯ ಬಹುಮಾನ ಗಳಿಸಿತು.

ಇದೇ ಮೊದಲ ಬಾರಿಗೆ ಜಂಟಿಯಾಗಿ ಪ್ರಥಮ ಸ್ಥಾನ ಪಡೆದ ಶ್ರೀಕೋಟೆ ಮಹಾಗಣಪತಿ ದೇವಾಲಯ 'ಶ್ರೀ ವಿಘ್ನರಾಜನಿಂದ ಮಮತಾಸುರನ ಸಂಹಾರ' ಕಥಾ ಸಾರಾಂಶವನ್ನು ಪ್ರದರ್ಶಿಸಿತ್ತು. ಶ್ರೀ ಕೋಟೆ ಮಾರಿಯಮ್ಮ ದೇವಾಲಯ ದಸರಾ ಮಂಟಪ ಸಮಿತಿ ವಿಷ್ಣು ಪುರಾಣದಿಂದ ಆಯ್ದ 'ದೇವ–ದೇವತೆಗಳ ಕಾಳಗ, ಶರಬಾವತಾರ ಹಾಗೂ ಪ್ರತ್ಯುಂಗ ದೇವಿಯಿಂದ ನರಸಿಂಹನ ಉಗ್ರ ಶಮನ' ಕಥಾ ಸಾರಾಂಶವನ್ನು ಮಂಟಪದಲ್ಲಿ ಅಳವಡಿಸಿ ಪ್ರದರ್ಶಿಸುವ ಮೂಲಕ ಜನ ಮೆಚ್ಚುಗೆಯೊಂದಿಗೆ ಮೊದಲ ಸ್ಥಾನದ ಗೌರವ ಪಡೆಯಿತು.

**ಯುವ ಸಮೂಹಕ್ಕೆ ನಿರಾಶೆ:** ದಶಮಂಟಪಗಳ ಆಕರ್ಷಕ ಶೋಭಾ ಯಾತ್ರೆಯೊಂದಿಗೆ ಮಡಿಕೇರಿ ದಸರಾ ಜನೋತ್ಸವಕ್ಕೆ ವೈಭವದ ತೆರೆ ಬಿದ್ದಿದೆ. ರಾಜ್ಯ ಮತ್ತು ಹೊರ ರಾಜ್ಯಗಳ ಸಾವಿರಾರು ಮಂದಿ ವಿದ್ಯುತ್ ಅಲಂಕೃತ ಬೃಹತ್ ಮಂಟಪಗಳ ಶೋಭಾಯಾತ್ರೆಗೆ ಸಾಕ್ಷಿಯಾದರು. ಆದರೆ ಡಿ.ಜೆ ಅಬ್ಬರಕ್ಕೆ ಪೊಲೀಸ್ ಇಲಾಖೆ ಕಡಿವಾಣ ಹಾಕಿದ್ದ ಕಾರಣ ನೆರೆದಿದ್ದ ಯುವ ಸಮೂಹ ನಿರಾಶೆ ವ್ಯಕ್ತಪಡಿಸಿತು.

ದಶಮಂಟಪಗಳ ಶೋಭಾಯಾತ್ರೆಯೇ ಮಡಿಕೇರಿ ದಸರಾ ಜನೋತ್ಸವದ ಪ್ರಮುಖ ಆಕರ್ಷಣೆಯಾಗಿದ್ದು, ಈ ಶೋಭಾಯಾತ್ರೆಯೊಂದಿಗೆ ಸಾಗುವ ಡಿಜೆ ಅಬ್ಬರಕ್ಕೆ ಕುಣಿದು ಸಂಭ್ರಮಿಸಲು ಅತ್ಯಧಿಕ ಸಂಖ್ಯೆಯಲ್ಲಿ ಯುವಕ, ಯುವತಿಯರು ರಾಜ್ಯ ಮಾತ್ರವಲ್ಲದೆ ಹೊರ ರಾಜ್ಯದಿಂದಲೂ ಮಡಿಕೇರಿ ದಸರಾಕ್ಕೆ ಆಗಮಿಸಿದ್ದರು. ಆದರೆ ಈ ಬಾರಿ ನ್ಯಾಯಾಲಯದ ಆದೇಶದ ಕಾರಣ ನೀಡಿ ಪೊಲೀಸ್ ಇಲಾಖೆ ಡಿ.ಜೆ ಸೌಂಡ್‌ಗೆ ಕಡಿವಾಣ ಹಾಕಿತ್ತು. ಕಥಾ ಸಾರಾಂಶ ಪ್ರದರ್ಶನದ ವೇಳೆ ಮಾತ್ರ ಧ್ವನಿವರ್ಧಕಗಳನ್ನು ಬಳಸಿದ ಮಂಟಪಗಳು ನಂತರ ಮೌನವಾಗಿಯೇ ಸಾಗಿದವು. ಇದರಿಂದ ಯುವ ಸಮೂಹ ಭಾರೀ ನಿರಾಶೆಯನ್ನು ಅನುಭವಿಸಿತು.

# ತೀರ್ಪಿಗೆ ಅಸಮಾಧಾನ : ಮಡಿಕೇರಿ ದಸರಾ ಉತ್ಸವದಲ್ಲಿ ದಾಂಧಲೆ

## ಕೈಗೆ ಸಿಕ್ಕ ವಸ್ತುಗಳ ಎಸೆತ, ಡಿವೈಎಸ್‌ಪಿಗೆ ಗಾಯ, ಲಾಠಿ ಪ್ರಹಾರ, ಒಬ್ಬನ ಬಂಧನ



ಮಡಿಕೇರಿ,ಅ.3– ದಸರಾ ಜನೋತ್ಸವದ ದಶಮಂಟಪಗಳ ಶೋಭಾಯಾತ್ರೆಯ ಬಹುಮಾನ ವಿತರಣಾ ಸಮಾರಂಭದಲ್ಲಿ ತೀರ್ಪಿನ ಬಗ್ಗೆ ಅಸಮಧಾನ ವ್ಯಕ್ತಪಡಿಸಿ ಕಲಾ ಸಂಭ್ರಮ ವೇದಿಕೆಯಲ್ಲಿ ದಾಂಧಲೆ ನಡೆಸಿದ ಘಟನೆ ನಡೆದಿದ್ದು, ಮಡಿಕೇರಿ ಐತಿಹಾಸಿಕ ದಸರಾ ಉತ್ಸವಕ್ಕೆ ಕಪ್ಪು ಚುಕ್ಕೆ ಉಂಟು ಮಾಡಿದೆ.

ವೇದಿಕೆಯಲ್ಲೇ ದಾಂಧಲೆ ನಡೆಸಿದ ಸಂದರ್ಭ ಪರಿಸ್ಥಿತಿಯನ್ನು ನಿಯಂತ್ರಿಸಲು ವೇದಿಕೆಯನ್ನೇರಿದ ಡಿವೈಎಸ್‌ಪಿ ಒಬ್ಬರು ಕೆಳಕ್ಕೆ ಬಿದ್ದು ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವ ಆರೋಪಿಯನ್ನು ಬಂಧಿಸಲಾಗಿದೆ. ಈ ಘಟನೆ ಬಗ್ಗೆ ಸಾರ್ವಜನಿಕರಿಂದ ತೀವ್ರ ಆಕ್ಷೇಪ ವ್ಯಕ್ತವಾಗುತ್ತಿದೆ.

ಶೋಭಾಯಾತ್ರೆ ನಡೆಸಿದ ಮಂಟಪಗಳಿಗೆ ಬಹುಮಾನ ಘೋಷಿಸುವ ಸಂದರ್ಭ ಗಾಂಧಿ ಮೈದಾನದ ಕಲಾ ಸಂಭ್ರಮ ವೇದಿಕೆಯನ್ನೇರಿದ ಕರವಲೆ ಶ್ರೀ ಭಗವತಿ ದೇವಾಲಯ ಮಂಟಪದ ಸದಸ್ಯರು ತೀರ್ಪು ಸರಿಯಿಲ್ಲ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಈ ಸಂದರ್ಭ ವೇದಿಕೆಗೆ ನುಗ್ಗಿದ ಸಮಿತಿಯ ಹಲವು ಯುವಕರು ಅಲ್ಲಿದ್ದ ವಸ್ತುಗಳನ್ನು ಎಸೆಯಲು ಆರಂಭಿಸಿ ದಾಂಧಲೆ ನಡೆಸಿದರು.

ಕಾರ್ಯಕ್ರಮ ನಿರೂಪಣೆಯ ಪೋಡಿಯಂ ಅನ್ನು ವೇದಿಕೆಯಿಂದ ಎಸೆದು ಉದ್ಧಟತನ ತೋರಿದರು. ತಕ್ಷಣವೇ ಎಚ್ಚೆತ್ತ ಪೊಲೀಸರು ವೇದಿಕೆಗೆ ಬಂದು ದಾಂಧಲೆ ಮಾಡುತ್ತಿದ್ದವರನ್ನು ನಿಯಂತ್ರಿಸಲು ಹರಸಾಹಸ ಪಟ್ಟರು. ಈ ಸಂದರ್ಭ ಮಡಿಕೇರಿ ಡಿವೈಎಸ್‌ಪಿ ಸೂರಜ್ ಅವರು ವೇದಿಕೆಯಿಂದ ತಳ್ಳಲ್ಪಟ್ಟು ವೇದಿಕೆಯಿಂದ ಕೆಳಗೆ ಬಿದ್ದರು. ಈ ವೇಳೆ ಅವರ ತಲೆ ಹಾಗೂ ಕಾಲಿಗೆ ತೀವ್ರವಾಗಿ ಗಾಯಗೊಂಡ ಅವರನ್ನು ತಕ್ಷಣವೇ ಮಡಿಕೇರಿಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಯಿತು.

**ಲಘು ಲಾಠಿ ಪ್ರಹಾರ:** ವೇದಿಕೆಯಲ್ಲಿ ಗಲಾಟೆ ಮಾಡುತ್ತಿದ್ದ ಯುವಕರನ್ನು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ಮಾಡಿ ಯುವಕರನ್ನು ಚದುರಿಸಿದರು. ಆ ವೇಳೆಗಾಗಲೇ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ನೀಡಬೇಕಾಗಿದ್ದ ನೆನಪಿನ ಕಾಣಿಕೆ, ಪಾರಿತೋಷಕಗಳು ವೇದಿಕೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಹರಡಿ ಬಿದ್ದಿದ್ದವು. ಈ ಘಟನೆಯನ್ನು ಕಂಡು ವೇದಿಕೆ ಕೆಳ ಭಾಗದಲ್ಲಿ ಆಸೀನರಾಗಿದ್ದ ಸಾರ್ವಜನಿಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

**ಓರ್ವನ ಬಂಧನ:** ಡಿವೈಎಸ್‌ಪಿ ಸೂರಜ್ ಅವರು ಗಾಯಗೊಂಡಿರುವ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಎಸ್‌ಪಿ ಕೆ.ರಾಮರಾಜನ್, ತೀರ್ಪುಗಾರಿಕೆ ಕುರಿತು ವೇದಿಕೆ ಏರಿ ಗಲಾಟೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಯಕ್ಷಿತ್ ಎಂಬಾತನನ್ನು ಬಂಧಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದರು.

ದಶಮಂಟಪಗಳಿಗೆ ಬಹುಮಾನ ಘೋಷಿಸುವ ಸಂದರ್ಭ ಪ್ರತಿ ವರ್ಷ ಈ ರೀತಿಯ ಗೊಂದಲ ಮತ್ತು ಅಸಮಾಧಾನ ವ್ಯಕ್ತವಾಗುತ್ತಿದೆ. ಯಾವುದೇ ಗೊಂದಲಗಳಿಗೆ ಅವಕಾಶ ಇಲ್ಲದಂತೆ ನೋಡಿಕೊಳ್ಳಬೇಕೆಂದು ಮಂಟಪ ಸಮಿತಿಗಳಲ್ಲಿ ನಾವು ಮೊದಲೇ ಮನವಿ ಮಾಡಿಕೊಂಡಿದ್ದೆವು. ಆದರೆ ಮತ್ತೆ ಗಲಾಟೆಯಾಗಿದೆ ಎಂದು ಎಸ್.ಪಿ. ರಾಮರಾಜನ್ ಬೇಸರ ವ್ಯಕ್ತಪಡಿಸಿದರು.

# ನಾಪೋಕ್ಲುವಿನಲ್ಲಿ ಪೌರ ಕಾರ್ಮಿಕರಿಗೆ ಸನ್ಮಾನ



ನಾಪೋಕ್ಲು ಲಯನ್ಸ್ ಕ್ಲಬ್ ವತಿಯಿಂದ ಪೌರಕಾರ್ಮಿಕರಿಗೆ ಗಂ ಬೂಟು ಮತ್ತು ಕೈ ಗ್ಲೌಸ್ ಅನ್ನು ವಿತರಿಸಿ ಸನ್ಮಾನಿಸಿ ಗೌರವಿಸಲಾಯಿತು.

**ನಾಪೋಕ್ಲು:** ಸ್ಥಳಿಯ ಲಯನ್ಸ್ ಕ್ಲಬ್ ವತಿಯಿಂದ ಪೌರಕಾರ್ಮಿಕರಿಗೆ ಗಮ್ ಬೂಟು ಮತ್ತು ಕೈಗ್ಲೌಸ್ ವಿತರಿಸಿ ಸನ್ಮಾನಿಸಲಾಯಿತು.

ಲಯನ್ಸ್ ಕ್ಲಬ್ಬಿನ ಅಧ್ಯಕ್ಷರಾದ ಎಂ.ಬಿ ಕುಟಪ್ಪ ಅವರ ಅಧ್ಯಕ್ಷತೆಯಲ್ಲಿ ಸ್ವಚ್ಛ ಭಾರತ್ ಅಭಿಯಾನ ಅಂಗವಾಗಿ ಇಲ್ಲಿಯ ಮಹಿಳಾ ಸಮಾಜದಲ್ಲಿ ಕಾರ್ಯಕ್ರಮ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಇಲ್ಲಿಯ ಪಟ್ಟಣದ ಪೌರ ಕಾರ್ಮಿಕರಾದ ವಿಶ್ವ, ಸೋಮಣ್ಣ, ರವಿ ಅವರುಗಳಿಗೆ ಗಂಬೂಟು ಮತ್ತು ಕೈ ಬ್ಲೌಸ್ ನ್ನು ವಿತರಿಸಿ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಲಯನ್ಸ್ ಪ್ರಾಂತೀಯ ಅಧ್ಯಕ್ಷರ ಡಾ.ಪಂಚಮ್ ತಿಮ್ಮಯ್ಯ, ಲಯನ್ಸ್ ಕ್ಲಬ್ ಕಾರ್ಯದರ್ಶಿ ಬನ್ಸಿಭೀಮಯ್ಯ, ಖಜಾಂಚಿ ವಸಂತ ಮುತ್ತಪ್ಪ, ಸುಧಿ ತಿಮ್ಮಯ್ಯ, ರೇಷ್ಮಾ ಉತ್ತಪ್ಪ, ರಘು ತಿಮ್ಮಯ್ಯ, ಮೇರಿ ಚೆಟ್ಟಿಯಪ್ಪ, ಶುಭಾಷ್ ತಿಮ್ಮಯ್ಯ, ರೇಖಾ ಪೊನ್ನಣ್ಣ ಉಪಸ್ಥಿತರಿದ್ದರು.

## ಅ.7, ವಾಲ್ಮೀಕಿ ಜಯಂತಿ

ಮಡಿಕೇರಿ, ಅ.3– ಜಿಲ್ಲಾಡಳಿತ, ಜಿಪಂ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಅ.7ರಂದು ಬೆಳಗ್ಗೆ 10.30 ಗಂಟೆಗೆ ನಗರದ ಗಾಂಧಿ ಭವನದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಗುವುದು. ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಇತರರು ಪಾಲ್ಗೊಳ್ಳಲಿದ್ದಾರೆ.

# ಮಾದಪ್ಪನ ಬೆಟ್ಟದಲ್ಲಿ ಸಂಭ್ರಮದ ತೆಪ್ಪೋತ್ಸವ



ಗುರುವಾರ ರಾತ್ರಿ ಮಲೆ ಮಹದೇಶ್ವರ ಸ್ವಾಮಿ ಬೆಟ್ಟದಲ್ಲಿ ಸಂಭ್ರಮದಿಂದ ತೆಪ್ಪೋತ್ಸವ ನಡೆಯಿತು.

**ಹನೂರು :** ತಾಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಮಲೆ ಮಹದೇಶ್ವರ ಸ್ವಾಮಿ ಬೆಟ್ಟದಲ್ಲಿ ನವರಾತ್ರಿ ಅಂಗವಾಗಿ ಗುರುವಾರ ರಾತ್ರಿ ಸಂಭ್ರಮದಿಂದ ತೆಪ್ಪೋತ್ಸವ ನಡೆಯಿತು. ಇದರೊಂದಿಗೆ ದಸರಾ ಜಾತ್ರಾ ಮಹೋತ್ಸವಕ್ಕೆ ತೆರೆ ಬಿದ್ದಿತ್ತು.

6 ವರ್ಷಗಳಿಂದ ಸ್ಥಗಿತಗೊಂಡಿದ್ದ ಮಾದಪ್ಪನ ತೆಪ್ಪೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು. ವಿದ್ಯುತ್ ದೀಪಾಲಂಕಾರ ಕಣ್ಮನ ಸೆಳೆಯಿತು. ತೆಪ್ಪೋತ್ಸವಕ್ಕೂ ಮುನ್ನ ಮಹದೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ದೇವಾಲಯದ ಒಳ ಆವರಣದಲ್ಲಿ ಬಿಳಿ ಕುದುರೆಯ ಮೇಲೆ ಪ್ರತಿಷ್ಠಾಪಿಸಿ ದೇಗುಲದ ಒಳ ಆವರಣದಲ್ಲಿ ಪ್ರದಕ್ಷಿಣೆ ಹಾಕಿಸಿ ಕಲ್ಯಾಣಿಯ ಬಳಿ ತರಲಾಯಿತು.

ಉತ್ಸವ ಮೂರ್ತಿಗೆ ಪೂಜೆ ನೆರವೇರಿಸಿ, ತೆಪ್ಪದಲ್ಲಿ ಪ್ರತಿಷ್ಠಾಪಿಸಿ ಮಂಗಳವಾದ್ಯ ಸಮೇತ, ಸಿಡಿಮದ್ದಿನ ಸದ್ದಿನ ನಡುವೆ ತೆಪ್ಪೋತ್ಸವ ನಡೆಯಿತು. ಸಾವಿರಾರು ಭಕ್ತರು ತೆಪ್ಪೋತ್ಸವ ವೈಭವವನ್ನು ಕಣ್ತುಂಬಿಕೊಂಡರು. ನಂತರ ಬಿಳಿ ಕುದುರೆ ವಾಹನ ಉತ್ಸವ ನೆರವೇರಿತು.

**ಭಕ್ತರಿಂದ ಹರಕೆ ಸಲ್ಲಿಕೆ:** ಭಕ್ತರು ತಮ್ಮ ಜಮೀನುಗಳಲ್ಲಿ ಬೆಳೆದಿದ್ದ ದವಸ– ಧಾನ್ಯಗಳನ್ನು ಮಾದಪ್ಪನ ಅನ್ನ ದಾಸೋಹಕ್ಕೆ ಸಮರ್ಪಿಸಿದರು. ಬೆಳಗ್ಗೆ ಬೆಳ್ಳಿ ರಥೋತ್ಸವ, ಹುಲಿ ವಾಹನ, ರುದ್ರಾಕ್ಷಿ ಮಂಟಪ, ಬಸವ ವಾಹನ, ಪಂಜಿನ ಸೇವೆ, ಉರುಳು ಸೇವೆ, ದೂಪದ ಸೇವೆ ಸಹಿತ ಮಾದೇಶ್ವರ ಸ್ವಾಮಿಯ ವಿವಿಧ ಸೇವೆಗಳಲ್ಲಿ ಭಾಗಿಯಾದ ಭಕ್ತರು ಮಾದಪ್ಪನ ಸ್ಮರಣೆ ಮಾಡಿದರು.

ವಿಜಯದಶಮಿ ಅಂಗವಾಗಿ ಬೆಟ್ಟಕ್ಕೆ ರಾಜ್ಯದ ಮೂಲೆ ಮೂಲೆಗಳಿಂದ ಸಾವಿರಾರು ಭಕ್ತರು ಭೇಟಿ ನೀಡಿ, ಮಾದಪ್ಪನ ದರ್ಶನ ಪಡೆದರು. ಈ ಸಂದರ್ಭದಲ್ಲಿ ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಇ.ರಘು, ಬೇಡಗಂಪಣ, ಅರ್ಚಕರು, ದೇವಾಲಯದ ನೌಕರರು ಹಾಗೂ ಭಕ್ತರು ಭಾಗವಹಿಸಿದ್ದರು.

# ಮೂಡುಗೂರಲ್ಲಿ ವಿಜಯದಶಮಿ ಉತ್ಸವ

## ಶ್ರೀ ಕಾಳಿಕಾಂಬ ದೇವಸ್ಥಾನದಲ್ಲಿ ವಿಶೇಷ ಪೂಜೆ, ಶ್ರೀ ಬಸವೇಶ್ವರ ದೇವರ ಉತ್ಸವ



ವಿಜಯದಶಮಿಯ ಹಿನ್ನೆಲೆಯಲ್ಲಿ ವಿಶೇಷ ಪೂಜೆಯನ್ನು ನೆರವೇರಿಸಲಾಯಿತು.

ಗುಂಡ್ಲುಪೇಟೆ, ಅ.3– ತಾಲೂಕಿನ ಮೂಡುಗೂರು ಗ್ರಾಮದಲ್ಲಿ ವಿಜಯದಶಮಿ ಹಿನ್ನೆಲೆಯಲ್ಲಿ ತಾಯಿ ಶ್ರೀ ಕಾಳಿಕಾಂಬ ದೇವಸ್ಥಾನದಲ್ಲಿ ವಿಶೇಷ ಪೂಜೆ ಮತ್ತು ಶ್ರೀ ಬಸವೇಶ್ವರ ದೇವರ ಉತ್ಸವ ಕಾರ್ಯಕ್ರಮವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ವಿಜಯ ದಶಮಿಯ ಹಿನ್ನೆಲೆಯಲ್ಲಿ ಗ್ರಾಮದಲ್ಲಿರುವ ಶ್ರೀ ಕಾಳಿಕಾಂಬ ದೇವಸ್ಥಾನ ಮತ್ತು ಶ್ರೀ ಬಸವೇಶ್ವರ ದೇವಸ್ಥಾನ ಸೇರಿದಂತೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ತಳಿರು ತೋರಣದೊಂದಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು.


ಪ್ರತಿವರ್ಷ ವಿಜಯ ದಶಮಿಯಂದು ಈ ವಿಶೇಷ ಪೂಜೆ ಹಿನ್ನೆಲೆಯಲ್ಲಿ ತಾಯಿ ಕಾಳಿಕಾಂಬ ಮಾತೆಗೆ ವಿಶೇಷ ಹೂವಿನ ಅಲಂಕಾರ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ಭಕ್ತಿ ಭಾವದಿಂದ ನಡೆಯಿತು.

ನಂತರ ಶ್ರೀ ಬಸವೇಶ್ವರ ಮೂರ್ತಿಯ ಉತ್ಸವದೊಂದಿಗೆ ಗ್ರಾಮದ ಹೊರವಲಯದಲ್ಲಿರುವ ಬನ್ನಿಮರಕ್ಕೆ ವಿಶೇಷ ಪ್ರಾರ್ಥನೆ ಪೂಜೆ ಸಲ್ಲಿಸುವುದರೊಂದಿಗೆ ವಿಜಯೋತ್ಸವವನ್ನು ಆಚರಣೆ ಮಾಡಲಾಯಿತು.

ಉತ್ಸವಮೂರ್ತಿಯ ಮೆರವಣಿಗೆಯು ಮಂಗಳವಾದ್ಯ ಮತ್ತು ವೀರಗಾಸೆಯೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗುತ್ತ, ಕುದುರೆಯನ್ನು ಮೆರವಣಿಗೆಯಲ್ಲಿ ಕರೆತಂದು ದೇವಾಲಯದ ಮುಂಭಾಗದಲ್ಲಿ ದೇವರಿಗೆ ಆರತಿ ಬೆಳಗುವುದರೊಂದಿಗೆ ದೇವತಾ ಕಾರ್ಯವನ್ನು ಮುಕ್ತಾಯಗೊಳಿಸಿ ಅನ್ನಸಂತರ್ಪಣೆಯನ್ನು ನಡೆಸಲಾಯಿತು.

ಈ ಪೂಜಾ ಕಾರ್ಯಕ್ಕೆ ಮೂಡುಗೂರು ಶ್ರೀ ಉದ್ದಾನೇಶ್ವರ ವಿರಕ್ತ ಪೀಠಾಧ್ಯಕ್ಷರಾದ ಉದ್ದಾನೇಶ್ವರ ಶ್ರೀಗಳು ಸೇರಿದಂತೆ ನಾಡಿನ ವಿವಿಧ ಭಾಗದ ಹಾಗೂ ತಾಲೂಕಿನ, ಗ್ರಾಮದ ಮತ್ತು ಅಕ್ಕ ಪಕ್ಕ ಗ್ರಾಮಗಳ ಜನತೆ ಆಗಮಿಸಿ ವಿಶೇಷ ಪ್ರಾರ್ಥನೆ ಹಾಗೂ ಪೂಜೆ ಸಲ್ಲಿಸಿದರು.

# ಸ್ವಾತಂತ್ರ್ಯ ಹೋರಾಟಗಾರರ ಪುತ್ರ ಗಾಂಧಿವಾದಿಗೆ ಸನ್ಮಾನ



ಸ್ವಾತಂತ್ರ್ಯ ಹೋರಾಟಗಾರ ಕೃಷ್ಣಮೂರ್ತಿಯವರ ಪುತ್ರನಿಗೆ ಸನ್ಮಾನ.

**ಚಾಮರಾಜನಗರ:** ಗಾಂಧಿ ಚಿಂತನೆ ಆದರ್ಶಗಳನ್ನು ಅಳವಡಿಸಿಕೊಂಡು ಬದುಕು ಸವೆಸುತ್ತಿರುವ ಕೆಲವರು ಇಂದು ನಮ್ಮ ನಡುವೆ ಇರುವುದು ನಮ್ಮೆಲ್ಲರ ಹೆಮ್ಮೆ ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ಬಿ. ಕೆ. ರವಿಕುಮಾರ್ ಅಭಿಪ್ರಾಯ ಪಟ್ಟರು.

ಗಾಂಧಿ ಜಯಂತಿ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರ ಕೃಷ್ಣಮೂರ್ತಿಯವರ ಪುತ್ರ ಗಾಂಧಿ ವಾದಿ, ಆದರ್ಶಪ್ರಾಯ ಸಾಹಿತಿ ಕೆ. ವೆಂಕಟರಾಜು ಅವರನ್ನು ಅವರ ಸ್ವಗೃಹದಲ್ಲಿ ಸನ್ಮಾನಿಸಿ ಮಾತನಾಡಿದರು. ಗಾಂಧೀಜಿಯವರನ್ನೇ ಮರೆಯುತ್ತಿರುವ ಈ ದಿನಗಳಲ್ಲಿ ಅವರ ಆದರ್ಶಗಳನ್ನು ಪಾಲಿಸಿ ಕೊಂಡು ಜಾಗೃತಿ ಮೂಡಿಸುತ್ತಿರುವ ಕೆ.ವೆಂಕಟರಾಜು ಅವರದು ಇಂದಿನ ಯುವಕರಿಗೆ ಮಾದರಿ ಜೀವನ ಎಂದರು.

ಸಾಹಿತಿಯಾಗಿ, ಸಮಾಜ ಸೇವಕರಾಗಿ ಅತ್ಯಂತ ಸರಳ ಜೀವನ ನಡೆಸುತ್ತಿರುವ ಇವರ ಜೀವನ ಇಂದಿನ ಯುವಕರಿಗೆ ಸ್ಪೂರ್ತಿ ಎಂದರು. ಗಾಂಧೀಜಿ ಪ್ರತಿಪಾದಿಸಿದ ಸ್ವದೇಶಿ ಮಂತ್ರ ಇಂದು ಹಿಂದೆಂದಿಗಿಂತಲೂ ಪ್ರಸ್ತುತ ವಾಗಿದ್ದು ನಾವೆಲ್ಲರೂ ಅದನ್ನು ಪಾಲಿಸಬೇಕಾಗಿದೆ. ಅದೇ ಗಾಂಧಿಗೆ ಕೊಡುವ ಗೌರವ ಎಂದರು.

ನಗರಸಭೆ ಉಪಾಧ್ಯಕ್ಷೆ ಮಮತಾ ಬಾಲಸುಬ್ರಮಣ್ಯಂ ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದವರಾದ ಕೆ.ವೆಂಕಟರಾಜು ತಂದೆಯ ಆದರ್ಶಗಳಿಗೆ ಚ್ಯುತಿ ಬರದಂತೆ ಇಂದಿಗೂ ಗಾಂಧಿ ತತ್ವಗಳನ್ನು ಪಾಲಿಸುತ್ತಿರುವುದು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ ಎಂದರು.

ಲಯನ್ ಸಂಸ್ಥೆ ಅಧ್ಯಕ್ಷ ವೈದ್ಯ ಡಾ.ಬಸವರಾಜೇಂದ್ರ ಮಾತನಾಡಿ, ಸೇವಾ ಮನೋಭಾವ ಇಂದು ಮರೀಚಿಕೆಯಾಗಿದ್ದು ಗಾಂಧಿಯವರ ಸೇವಾ ಭಾವನೆ ಎಲ್ಲರಲ್ಲಿ ಬಂದರೆ ಗಾಂಧಿ ಜಯಂತಿಗೆ ಅರ್ಥ ಕಲ್ಪಿಸಿದಂತಾಗುತದೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಗಾಂಧಿವಾದಿ ಕೆ.ವೆಂಕಟರಾಜು, ಸ್ವಾತಂತ್ರ್ಯ ಪೂರ್ವದಲ್ಲಿ ಹೋರಾಡಿದ ಮಹನೀಯರಲ್ಲಿ ಎಂದೂ ಸ್ವಾರ್ಥವಿರಲಿಲ್ಲ ದೇಶಪ್ರೇಮ ಸೇವೆ ಹೋರಾಟ ಅವರ ಜೀವನದ ಅವಿಭಾಜ್ಯ ಅಂಗವಾಗಿತ್ತು. ಅದು ಇಂದು ಕಣ್ಮರೆಯಾಗುತ್ತಿರುವುದು ವಿಷಾದದ ಸಂಗತಿಯಾಗಿದೆ ಎಂದರು. ಮುಖಂಡ ಬಾಲಸುಬ್ರಹ್ಮಣ್ಯ, ನಳಿನಿ ವೆಂಕಟರಾಜು ಉಪಸ್ಥಿತರಿದ್ದರು.

# ಹ್ಯಾಂಡ್ ಬಾಲ್ ಪಂದ್ಯಾವಳಿಗೆ ಚಾಲನೆ

## ಉತ್ತಮ ದೈಹಿಕ, ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡಿ



ಹ್ಯಾಂಡ್‌ಬಾಲ್ ಎಸೆಯುವುದರ ಮೂಲಕ ಜಿಪಂ ಸಿಇಓ ಮೋನಾ ರೋತ್ ಉದ್ಘಾಟಿಸಿದರು.

ಚಾಮರಾಜನಗರ, ಅ.3– ಕ್ರೀಡಾಪಟುಗಳು ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಆದ್ಯತೆ ನೀಡುವಂತೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಸಲಹೆ ನೀಡಿದ್ದಾರೆ.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ 14 ರಿಂದ 17 ವರ್ಷ ವಯೋಮಿತಿಯ ಬಾಲಕ, ಬಾಲಕಿಯರ ಮೈಸೂರು ವಿಭಾಗಮಟ್ಟದ ಎರಡು ದಿನಗಳ ಹ್ಯಾಂಡ್ ಬಾಲ್ ಪಂದ್ಯಾವಳಿಯಲ್ಲಿ ಕ್ರೀಡಾ ಧ್ವಜಾರೋಹಣ ನೆರವೇರಿಸಿ, ಹ್ಯಾಂಡ್‌ಬಾಲ್ ಎಸೆಯುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರು ವಿಭಾಗಮಟ್ಟದ ಹ್ಯಾಂಡ್ ಬಾಲ್ ಪಂದ್ಯಾವಳಿಯನ್ನು ಚಾಮರಾಜನಗರದಲ್ಲಿ ಆಯೋಜಿಸಲಾಗಿದೆ. ಹಾಸನ, ಮೈಸೂರು, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು, ಉಡುಪಿ ಮತ್ತು ಮಂಡ್ಯ ಜಿಲ್ಲೆಗಳಿಂದ ಆಗಮಿಸಿರುವ ಕ್ರೀಡಾಪಟುಗಳು ದೈಹಿಕ, ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡಬೇಕು ಎಂದರು. ಕ್ರೀಡೆಗಳಲ್ಲಿ ಭಾಗವಹಿಸಿ ವಿಜೇತರಾಗಲು ಸಮಯದ ಜೊತೆಗೆ ದೈಹಿಕ ಸಾಮರ್ಥ್ಯಕ್ಕೂ ಪ್ರಾಮುಖ್ಯತೆ ನೀಡಬೇಕು. ಕ್ರೀಡಾಪಟುಗಳು ಪ್ರಾಮಾಣಿಕವಾಗಿ ಆಟಗಳಲ್ಲಿ ಪಾಲ್ಗೊಳ್ಳಬೇಕು. ಕ್ರೀಡಾ ಮನೋಭಾವ ಮೆರೆಯಬೇಕು. ಗೆಲುವು ಯಾವಾಗಲೂ ನಿಮ್ಮದೇ ಆಗಬೇಕು. ಕ್ರೀಡೆಯಲ್ಲಿ ಸೋಲು–ಗೆಲುವು ಮುಖ್ಯವಲ್ಲ, ಭಾಗವಹಿಸುವಿಕೆ ಮುಖ್ಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ ಮಾತನಾಡಿ, ವಿಭಾಗ ಮಟ್ಟದ ಪಂದ್ಯಾವಳಿಗೆ 8 ಜಿಲ್ಲೆಯಿಂದ ನಗರಕ್ಕೆ ಆಗಮಿಸಿದ್ದು, ಉತ್ತಮ ಪ್ರದರ್ಶನ ನೀಡಿ ಕ್ರೀಡೆಗಳಲ್ಲಿ ಆಯ್ಕೆಯಾಗಬೇಕು ಎಂದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಚಂದ್ರಪಾಟೀಲ್, ಯುವ ಸಬಲೀಕರಣ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಕೆ. ಸುರೇಶ್ ಮಾತನಾಡಿದರು.

ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಆರ್. ಶಂಕರ್, ಹಿರಿಯ ದೈಹಿಕ ಶಿಕ್ಷಣ ಶಿಕ್ಷಕ ಚಿಕ್ಕ ಬಸವಯ್ಯ, ಜಿಲ್ಲೆಯ ಶಿಕ್ಷಕರ ಸಂಘಗಳ ಪದಾಧಿಕಾರಿಗಳು, ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು, ಇತರರು ಕಾರ್ಯಕ್ರಮದಲ್ಲಿ ಇದ್ದರು.

## ಶ್ರೀ ಚಾಮುಂಡೇಶ್ವರಿ ಹಬ್ಬದ ಸಂಭ್ರಮ

ಚಾಮರಾಜನಗರ, ಅ.3– ನಗರದ 14ನೇ ವಾರ್ಡ್‌ನ ಡಾ. ಬಿ.ಆರ್.ಅಂಬೇಡ್ಕರ್ ಬಡಾವಣೆಯಲ್ಲಿ ಶ್ರೀಚಾಮುಂಡೇಶ್ವರಿ ಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಬಡಾವಣೆಯಲ್ಲಿರುವ ಶ್ರೀಚಾಮುಂಡೇಶ್ವರಿ ದೇವಸ್ಥಾನವನ್ನು ಹಸಿರು ತೋರಣ, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಬೆಳಿಗ್ಗೆ ದೇವಸ್ಥಾನದಲ್ಲಿ ಶ್ರೀಚಾಮುಂಡೇಶ್ವರಿ ದೇವಿ, ಕಂಡಾಯಗಳಿಗೆ ವಿಶೇಷ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು.ನಂತರ ಬಡಾವಣೆಯ ಪ್ರಮುಖ ಬೀದಿಗಳಲ್ಲಿ ಕಂಡಾಯ ಮೆರವಣಿಗೆ ಮಾಡಲಾಯಿತು. ನಿವಾಸಿಗಳು ಪೂಜೆ ಸಲ್ಲಿಸಿ ದೇವರಕೃಪೆಗೆ ಪಾತ್ರರಾದರು. ಪುಟಾಣಿ ಮಕ್ಕಳಿಂದ ಹಾಲರವಿ ಉತ್ಸವ ನಡೆಯಿತು.

ಮೆರವಣಿಗೆಯಲ್ಲಿ ಶ್ರೀಚಾಮುಂಡೇಶ್ವರಿ ಟ್ರಸ್ಟ್ ಅಧ್ಯಕ್ಷ ರಮೇಶ್, ಉಪಾಧ್ಯಕ್ಷ ಶಿವಸ್ವಾಮಿ ಕಾರ್ಯದರ್ಶಿ ಪ್ರಕಾಶ್.ಆರ್, ನಿರ್ದೇಶಕರಾದ ಜಯರಾಮ್, ಮಂಜುನಾಥ್ ಸಿ.ಬಿ., ಮಹದೇವಸ್ವಾಮಿ, ಸಿದ್ದರಾಜು, ಮಹೇಶ್, ರಾಜಣ್ಣ ಇತರರು ಹಾಜರಿದ್ದರು.

## ಪಿಹೆಚ್.ಡಿ ಪದವಿ



ಮೈಸೂರು, ಅ.3–ಡಾ. ಬಿ.ಪಿ. ಮಹೇಶ್ ಚಂದ್ರಗುರು ಅವರ ಮಾರ್ಗದರ್ಶನದಲ್ಲಿ ಬಿ.ಸಿ. ಸಂಜಯ್ ಅವರು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

# ದಸರಾ ಪೊಲೀಸ್ ಬಂದೋಬಸ್ತ್ ಮುಂದುವರೆಸಲು ಆಗ್ರಹೆ

ಮೈಸೂರು,ಅ.3– ದಸರಾ ಮಾದರಿ ಪೊಲೀಸ್ ಬಂದೋಬಸ್ತ್ ಅನ್ನು ಇನ್ನೂ ಕೆಲ ದಿನಗಳ ಕಾಲ ವಿಸ್ತರಣೆ ಮಾಡುವಂತೆ ಮೈಸೂರು ಹೋಟೆಲ್ ಮಾಲೀಕರ ಸಂಘವು ಆಗ್ರಹಿಸಿದೆ.



ನಾರಾಯಣಗೌಡ

ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಹಿನ್ನೆಲೆಯಲ್ಲಿ ಶಾಲೆಗಳಿಗೆ ದಸರಾ ರಜೆಯನ್ನು ಅ.10ರವರೆಗೂ ವಿಸ್ತರಿಸುವ ಸಾಧ್ಯತೆ ಇದೆ. ಆ ದಿನದವರೆಗೆ ದಸರಾ ದೀಪಾಲಂಕಾರವೂ ಇರಲಿದ್ದು, ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದಾರೆ. ಆದ್ದರಿಂದ ದಸರಾ ಮಾದರಿಯ ಬಂದೋಬಸ್ತ್ ಹಾಗೂ ಸಂಚಾರ ನಿರ್ವಹಣೆ ವ್ಯವಸ್ಥೆಯನ್ನು ವಿಸ್ತರಿಸುವಂತೆ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮನವಿ ಮಾಡಿದ್ದಾರೆ.

ಪ್ರವಾಸಿಗರು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಅ.5ರವರೆಗೆ ಪೊಲೀಸ್ ಬಂದೋಬಸ್ತ್ ವಿಸ್ತರಿಸಲು ಸೆ.29ರಂದೇ ಸಂಘದ ವತಿಯಿಂದ ಪೊಲೀಸ್ ಆಯುಕ್ತರಿಗೆ ಮನವಿ ಮಾಡಲಾಗಿತ್ತು. ಆದರೆ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಂಡಂತೆ ಕಾಣುತ್ತಿಲ್ಲ. ನಿನ್ನೆವರೆಗೂ ವ್ಯವಸ್ಥಿತವಾಗಿದ್ದ ಸಂಚಾರ ನಿರ್ವಹಣೆ ಇಂದು ಅಸ್ತವ್ಯಸ್ತವಾಗಿತ್ತು. ಈ ಬಗ್ಗೆ ಪೊಲೀಸ್ ಆಯುಕ್ತರು ಗಮನಹರಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.

# ಸಿಎಂ ಸ್ಟಾಲಿನ್, ನಟಿ ತ್ರಿಷಾ ಮನೆಗೆ ಬಾಂಬ್ ಬೆದರಿಕೆ



ಸ್ಟಾಲಿನ್



ತ್ರಿಶಾ

**ಚೆನ್ನೈ:** ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ನಿವಾಸ, ನಟಿ ತ್ರಿಷಾ ಅವರ ಮನೆ ಮತ್ತು ತಮಿಳು ನಾಡು ರಾಜ್ಯಪಾಲರ ಬಂಗಲೆಯನ್ನು ಗುರಿಯಾಗಿಸಿ ಕೊಂಡು ಏಕಕಾಲದಲ್ಲಿ ಬಾಂಬ್ ಬೆದರಿಕೆ ಕರೆಗಳು ಬಂದಿವೆ. ಜೊತೆಗೆ ಬಿಜೆಪಿ ರಾಜ್ಯ ಕಚೇರಿ ಹಾಗೂ ಹಲವಾರು ಪ್ರಮುಖ ಸ್ಥಳಗಳಿಗೆ ಬಾಂಬ್ ಬೆದರಿಕೆ ಕರೆಗಳು ಬಂದಿವೆ.

ಗುರುವಾರ (ಅ.2) ಸಂಜೆ ಬಾಂಬ್ ಬೆದರಿಕೆಗಳು ಪ್ರಾರಂಭವಾದವು. ಸಿಎಂ ಸ್ಟಾಲಿನ್ ಅವರ ಮನೆಗೆ ಬೆದರಿಕೆ ಕರೆಯ ಜೊತೆಗೆ, ರಾಜಭವನ, ಬಿಜೆಪಿ ಕಚೇರಿ ಮತ್ತು ತ್ರಿಶಾ ಅವರ ಮನೆಗೂ ಇದೇ ರೀತಿಯ ಕರೆಗಳು ಬಂದ ನಂತರ ಪೊಲೀಸರಿಗೆ ಎಚ್ಚರಿಕೆ ನೀಡಲಾಯಿತು. ಈ ಬೆದರಿಕೆಗಳು ರಾಜಕೀಯ ಮತ್ತು ಚಲನಚಿತ್ರ ವ್ಯಕ್ತಿಗಳನ್ನು ಗುರಿಯಾಗಿಸಿ ಕೊಂಡಿರುವಂತೆ ತೋರುತ್ತಿದೆ. ಈ ಕರೆಗಳ ಹಿಂದೆ ಯಾರಿದ್ದಾರೆ ಎಂಬುದನ್ನು ಕಂಡು ಹಿಡಿಯಲು ಪೊಲೀಸರು ಸೈಬರ್ ಅಪರಾಧ ತಂಡವನ್ನು ನಿಯೋಜಿಸಿದ್ದಾರೆ.

# 286 ರನ್ ಮುನ್ನಡೆ: ಬೃಹತ್ ಮೊತ್ತದತ್ತ ಭಾರತ



ಅಹಮದಾಬಾದ್, ಅ.3– ಕೆ.ಎಲ್. ರಾಹುಲ್, ರವೀಂದ್ರ ಜಡೇಜಾ ಹಾಗೂ ಧ್ರುವ್ ಜುರೇಲ್ ಅವರ ಶತಕಗಳ ನೆರವಿನಿಂದ ಭಾರತ ವೆಸ್ಟ್‌ಇಂಡೀಸ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ 2ನೇ ದಿನ ದಂತ್ಯಕ್ಕೆ 5 ವಿಕೆಟ್ ನಷ್ಟಕ್ಕೆ 448 ರನ್ ಗಳಿಸಿದ್ದು, 286 ರನ್‌ಗಳ ಮುನ್ನಡೆ ಗಳಿಸಿದೆ.

ವೆಸ್ಟ್ ಇಂಡೀಸ್‌ನ 162 ರನ್‌ಗಳಿಗೆ ಪ್ರತ್ಯುತ್ತರವಾಗಿ ಮೊದಲ ಇನ್ನಿಂಗ್ಸ್ ಆರಂಭಿಸಿದ್ದ ಭಾರತ ಮೊದಲ ದಿನದ ಅಂತ್ಯಕ್ಕೆ 2 ವಿಕೆಟ್ ನಷ್ಟಕ್ಕೆ 121 ರನ್ ಗಳಿಸಿತ್ತು. ಇಂದು ಆಟ ಮುಂದುವರೆಸಿದ ಭಾರತ ಪರ ನಾಯಕ ಶುಭ್‌ಗಿಲ್ 50 ರನ್ ಗಳಿಸಿ ಔಟಾದರೇ, ಕೆ.ಎಲ್. ರಾಹುಲ್ 100, ಧ್ರುವ ಜುರೇಲ್ 125 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ಅಜೇಯ 104 ರನ್ ಗಳಿಸಿರುವ ಜಡೇಜಾ, 9 ರನ್ ಗಳಿಸಿರುವ ವಾಷಿಂಗ್ಟನ್ ಸುಂದರ್ 3ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ವಿಂಡೀಸ್ ಪರ ರೋಸ್ಟನ್ ಚೇಸ್ 2, ಜೇಡನ್ ಸೇಲ್ಸ್, ಪೀರ್ರೆ ತಲಾ ಒಂದೊಂದು ವಿಕೆಟ್ ಉರುಳಿಸಿದರು.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

**ಬಸ್ ಚಾಲಕರು ಬೇಕಾಗಿದ್ದಾರೆ**
ಮೈಸೂರಿನ ವಿಜಯನಗರ 4ನೇ ಹಂತ ಹಾಗೂ ಶ್ರೀನಗರ (ಜೆ.ಪಿ.ನಗರ)ದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಶಾಲೆಗಳಿಗೆ ಬಸ್ ಚಾಲಕರು ಬೇಕಾಗಿದ್ದಾರೆ. ಅನುಭವದ ಆಧಾರದ ಮೇಲೆ ಆಕರ್ಷಕ ಸಂಬಳವನ್ನು ನಿರ್ಧರಿಸಲಾಗುತ್ತದೆ. ಸಂಪರ್ಕ ಸಂಖ್ಯೆ
ವಿಜಯನಗರ: 9483670193
ಶ್ರೀನಗರ(ಜೆ.ಪಿ.ನಗರ): 6366761766

**NAIRUTHI CHIT FUND PVT LTD**
Vijaynagar 2nd Stage, Mysuru
WANTED BUSINESS DEVELOPMENT OFFICER
With any Degree
Salary 25000/-
9739799766, 9972669899

**ನಿರ್ಮಲಧಾರೆ ಸಲ್ಯೂಷನ್ಸ್**
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

**SITE FOR SALE**
30x50 East Face
ಬೆಳವಾಡಿ
(Near Vijayanagar 4th Stage
Price: 40 Lakhs
Mob: 8105506211

**ಕೆಲಸಕ್ಕೆ ಬೇಕಾಗಿದ್ದಾರೆ**
SSLC, PUC ANY DEGREE ಓದಿರುವವರು ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ, ವಯಸ್ಸು 18ರಿಂದ 50 ವರ್ಷ ಒಳಗೆ, ಸಂಬಳ : 15000 – 23000, ಸರ್ಕಾರಿ ನೋಂದಾಯಿತ ಸಂಸ್ಥೆ, ಮೈಸೂರು
9739595555, 9071042555

**ಕಾರ್ನರ್ ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ**
32x60, East Face, 80 Feet ಮೇನ್ ರೋಡ್ ಸರ್ದಾರ್ ವಲ್ಲಭಬಾಯಿ ಪಟೇಲ್ ನಗರ, ಪೋಲೀಸ್ ಲೇಔಟ್, 2ನೇ ಸ್ಟೇಜ್, ಮೈಸೂರು
9342188102, 7019050766

**ವಧು–ವರಾನ್ವೇಷಣೆ**
ಒಕ್ಕಲಿಗ/ಕುರುಬ/ಲಿಂಗಾಯತ ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

**GO MYSORE HOLIDAYS**
LUXURY TOURIST BUS
Available for Family Trips, Corporate, Wedding, College & all types of Package Tours.
Call : Sudhir Ganapathy
94487 38617 / 90361 54301
90361 54302

**WANTED**
RECEPTIONIST
(Female)
with knowledge of speaking english, kannada & having Tally Knowledge for a Branded UPS Company
HI-TECH UPS & BATTERY
99456 23202 98443 55870
#44, 5th Main, 6th Cross, S.puram, Mysore - 09

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ವೇತನ, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ.
ಸ್ಥಳ: ಹೆಬ್ಬಾಳು ಕೈಗಾರಿಕ ನಗರ, ಹಿನಕಲ್ ಮತ್ತು J.P. ನಗರ, ಮೈಸೂರು
Contact no: 9739376832/ 7829393555/9886200104

**ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ**
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

**ಶ್ರೀ ಗಜಾನನ ಸರ್ವೀಸ್**
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7483296927

**HOUSE FOR SALE**
20x30 East face, Ground floor, 1st floor, both 2 Bedrooms House 10x20 Terese hall, Washroom House, All Facilities in HPO & RMC Layout, Sathagalli Layout, Near Dr. Rajkumar Road, Mysore-29.
9845116744

**ನಿರ್ಮಲ ಸರ್ವೀಸ್**
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
ಹಿನಕಲ್, ಹಳೇ ಕೆಸರೆ, Chopra, N.R. Mohalla, ರಾಜೀವ್‌ನಗರ, ದೇವರಾಜ್ ಅರಸ್ ರಸ್ತೆ ಮೈಸೂರು ಸಿಟಿ ಸುತ್ತಮುತ್ತ
9964263516, 8123563128

**ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ**
ವಯಸ್ಸಾದವರನ್ನು, ರೋಗಿಗಳನ್ನು ಅವರ ಮನೆಯಲ್ಲೇ ನೋಡಿಕೊಳ್ಳಲು ಗಂಡಸರು/ಹೆಂಗಸರು ಮೈಸೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ ನೀಡಲಾಗುವುದು.
9880102700

**ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ**
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

**OLD AGE HOME**
We offer nursing and Medical Services to Bedridden and Senior Citizens with Veg. Food and Accomodation at Our Centre in Gokulam Mysore at a Reasonable Cost
9880102700

**FOR SALE**
1. 20x30 Old Houses @ Kuvempunagar, RK Nagar
2. 20x30 MUDA Approved Site @ 22L Near Rainbow School Bogadi
3. 20x30 New Duplex House @ Utthanahalli & Site @ Dattagalli
4. 30x40 Sites Near RT Nagar BSNL Layout @ Just 22 Lakhs
Apartments @ Ramkrishna Ngr.
Commercial Properties For Sale.
PRAKRUTHI PROPERTIES
95386 90359, 90359 90359

**ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ**
Mob: 8618373596

**ತಕ್ಷಣ ಬೇಕಾಗಿದ್ದಾರೆ**
ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
(SSLC ಮತ್ತು ITI Any Trade)
Age Limit - 18 - 30
Salary 15000/-
ಸೌಲಭ್ಯತೆ : ESI, PF ಮತ್ತು Canteen ಸೌಲಭ್ಯವಿರುತ್ತದೆ.
7019380847, 7019822622

**ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್**
Mob: 8197383645

**ಸೈಟು ಬೇಕಾಗಿದೆ**
ದೇವನೂರು 3ನೇ ಹಂತ, ಸಾತಗಳ್ಳಿ A ಮತ್ತು B ವಲಯದಲ್ಲಿ ಸುತ್ತಮುತ್ತಲೂ, ಎಲ್ಲಾ ಅಳತೆಯ ಸೈಟು ಬೇಕಾಗಿದೆ ಮತ್ತು ಬೃಂದಾವನ್ ಬಡಾವಣೆಯಲ್ಲಿ 20X40 ಅಳತೆಯ ಮನೆ ಬೇಕಾಗಿದೆ. ಸಂಪರ್ಕಿಸಿ ಶಿವಪ್ಪ ಬನ್ನಿಮಂಟಪ, ಮೈಸೂರು
9141050266

**SITES FOR SALE**
Residential and semi-commercial sites Measuring 30x40 for Sale Hale Kesare, Main Road adjecent to Army Layout From city only 6.5 km.
9606975149

**ಸೈಟು ಬೇಕಾಗಿದೆ**
ವರುಣ ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ.
Mob: 9844436672

**ಸೈಟು ಮಾರಾಟಕ್ಕಿದೆ**
20x30 - 22.50 ಲಕ್ಷ, 30x30 - 38 ಲಕ್ಷ ಬೋಗಾದಿ ರೋಡ್.
30x40 - 68 ಲಕ್ಷ, 60x40 - 1.20 Cr. ಶ್ರೀರಾಂಪುರ ರಿಂಗ್ ರಸ್ತೆ ಹತ್ತಿರ.
30x40 - 36 ಲಕ್ಷ, 60x40 - 65 ಲಕ್ಷ ಜೆ.ಪಿ. ನಗರ ರಿಂಗ್ ರಸ್ತೆ ಹತ್ತಿರ.
Mob: 9341624462

**SITES FOR SALE**
30x40, 30x50
MUDA Approved
Near R.T. Nagar, Srirampura Ring Road.
Mob: 8296832513

**FOR SALE**
3 BHK flat with pooja room is for sale in Vontikoppal.
Contact:
Mob: 9980014574

**SITES FOR SALE**
52x60 site for sale in HPO and RMS Layout, near Dr. Rajkumar Road and 40x60 site for sale in Devanuru 3rd Stage.
Contact:
Mob: 9880344263

**SITE FOR SALE**
20x30
Vijayanagar 4th Stage, Second Phase.
9611339705, 9380338443

**ಕೆಲಸಕ್ಕೆ ಬೇಕಾಗಿದ್ದಾರೆ**
ಮೈಸೂರಿನ MRP ವೈನ್‌ಸ್ಟೋರ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಯೋಮಿತಿ 22–35
9448351930

**ಬೇಕಾಗಿದ್ದಾರೆ**
ಮೈಸೂರಿನಲ್ಲಿರುವ ಪ್ರತಿಷ್ಠಿತ ಆಸ್ಪತ್ರೆಯ ಕ್ಯಾಂಟೀನ್ ಮತ್ತು ಡಯಟರಿಯಲ್ಲಿ ಕೆಲಸ ಮಾಡಲು, ಇಂಗ್ಲೀಷ್ ಮತ್ತು ಕನ್ನಡ ಓದಲು, ಬರೆಯಲು S.S.L.C ಅಥವಾ P.U.C ಪಾಸ್ ಅಥವಾ ಫೇಲ್ ಆದ ಹುಡುಗರು ಮತ್ತು ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
SUPERVISORS, Desk Co-Ordinators, STEWARDS, WASHING ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಪಿ.ಇ.ಎಫ್ ಮತ್ತು ಇ.ಎಸ್.ಐ, ಹಾಗೂ ಊಟ ತಿಂಡಿ ಸೌಲಭ್ಯವಿರುತ್ತದೆ, ವಯಸ್ಸು 18 ತುಂಬಿರಬೇಕು.
HOTEL MANAGEMENT ಮಾಡಿರುವವರಿಗೆ ಅವಕಾಶವಿರುತ್ತದೆ. ಸಂಪರ್ಕಿಸಬೇಕಾದ ವಿಳಾಸ Mysore
Contact No.
7899309537, 9740491192

**S.K. Constructions**
ನಿಮ್ಮ ಕನಸಿನ ಮನೆ ಕಟ್ಟಬೇಕೆ ಚಿಂತೆ ಬೇಡ. ಅತಿ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕೈಗೆಟುಕುವ ಬೆಲೆಯಲ್ಲಿ Plan, 3-D Elevation and Loan ಸಹಿತ ಮಾಡಿ ಮನೆ ಕಟ್ಟಿಕೊಡುತ್ತೇವೆ.
Mob: 9620528490

**ಬೇಕಾಗಿದ್ದಾರೆ**
ಪ್ರತಿಷ್ಠಿತ ಶಾಲೆಗೆ, ಕಾರು ಚಾಲಕ ಮತ್ತು ಸೆಕ್ಯೂರಿಟಿ ಕುಟುಂಬ ಬೇಕಾಗಿದ್ದಾರೆ (ವಸತಿ ಉಚಿತ).
ಸ್ಥಳ: ಇಲವಾಲ ಬಳಿ. ಸಂಪರ್ಕಿಸಿ:
7204284724 / 8722963130

**SITE FOR SALE**
East facing corner site, Jnanbharathi Layout 30x40, Highway Road, behind Airport, MUDA Khata & E-Khata, 42 Lakhs slightly negotiable. Clear titles, Direct owner.
Mob: 93421-23373

**ತಕ್ಷಣ ಬೇಕಾಗಿದ್ದಾರೆ**
ಮೈಸೂರಿನ ಪ್ರತಿಷ್ಠಿತ ಲ್ಯಾಂಡ್ ಡೆವಲಪರ್ಸ್ ಕಂಪನಿಯಲ್ಲಿ ಕೆಲಸ ಮಾಡಲು ಟೆಲಿಕಾಲರ್ಸ್‌ಗಳು ಬೇಕಾಗಿದ್ದಾರೆ. ವಯೋಮಿತಿ: 25 ರಿಂದ 40 ವರ್ಷ. ಸಂಬಳ: 12 ರಿಂದ 15 ಸಾವಿರ.
ಸ್ಥಳ: ಜೆ.ಪಿ. ನಗರ. ಸಂಪರ್ಕಿಸಿ:
Mob: 9901702323

**ತಕ್ಷಣ ಬೇಕಾಗಿದ್ದಾರೆ**
ಮೈಸೂರಿನ ಪ್ರತಿಷ್ಠಿತ ಲ್ಯಾಂಡ್ ಡೆವಲಪರ್ಸ್ ಕಂಪನಿಯಲ್ಲಿ ಕೆಲಸ ಮಾಡಲು ಪುರುಷ ಲೇಔಟ್ ಎಕ್ಸಿಕ್ಯೂಟಿವ್‌ಗಳು ಬೇಕಾಗಿದ್ದಾರೆ. ವಯೋಮಿತಿ: 25 ರಿಂದ 40 ವರ್ಷ. ಸಂಬಳ: 15 ಸಾವಿರ.
ಸ್ಥಳ: ಜೆ.ಪಿ. ನಗರ. ಸಂಪರ್ಕಿಸಿ:
Mob: 8618393537

**SITE FOR SALE**
30x43 West face, Muda approved Govt employee layout, next to anandsagar layout(ilwala). Near st Joseph school Hunsur road. Rate 3200 per sqft.
9972399939

**ಬೇಕಾಗಿದ್ದಾರೆ**
ಮೈಸೂರಿನ ಬನ್ನಿಮಂಟಪದಲ್ಲಿ ಇರುವ ಸೆಂಟ್ ಜೋಸೆಫ್ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸಲು ಸ್ವಚ್ಛತಾ ಕೆಲಸಗಾರರು(Housekeeper) ಪುರುಷರು/ಮಹಿಳೆಯರು ಬೇಕಾಗಿದ್ದಾರೆ. ಆಕರ್ಷಕ ವೇತನ, ವಾರದ ರಜೆ, ಇಎಸ್‌ಐ ಮತ್ತು ಪಿಎಫ್ ಸೌಲಭ್ಯವಿರುತ್ತದೆ. ಮೂಲ ದಾಖಲಾತಿಗಳೊಂದಿಗೆ ಸಂಪರ್ಕಿಸಿ ಬನ್ನಿಮಂಟಪ ಆಸ್ಪತ್ರೆ ಸಮಯ ಬೆಳಿಗ್ಗೆ 10.30 ರಿಂದ 12.30 ರವರೆಗೆ.
ದೂ. 9845111480

**SITE FOR SALE**
30x40 West face, Brahmanandasagar Phase-2, Opp. St. Joseph Central School, Yelwala. Contact:
Mob: 9972399939
Direct Owner

**ನಿವೇಶನ ಮಾರಾಟಕ್ಕಿದೆ**
ಇಲವಾಲ ಸಮೀಪ ಬಿಳಿಕೆರೆಗೆ ಹೊಂದಿಕೊಂಡಂತೆ 30X40 ಅಳತೆಯ 'A' ಖಾತಾ ನಿವೇಶನಗಳು ಮಾರಾಟಕ್ಕಿದೆ. Investment ಮತ್ತು ಮನೆ ಕಟ್ಟಲು ಯೋಗ್ಯವಾಗಿದೆ. ಬ್ಯಾಂಕ್ ಲೋನ್ ಸೌಲಭ್ಯವಿರುತ್ತದೆ. DSS ಸಂಪರ್ಕಿಸಿ:
9945245946 / 9845114304

**ಮಾರಾಟಕ್ಕಿದೆ**
ರನ್ನಿಂಗ್ ಮೆನ್ಸ್ ಸಲೂನ್, ಬೋಗಾದಿ ರಿಂಗ್ ರೋಡ್, ಮೈಸೂರು. ಸಂಪರ್ಕಿಸಿ:
Mob: 9845073374

**ತಕ್ಷಣವೇ ಬೇಕಾಗಿದ್ದಾರೆ**
ಮೈಸೂರು, ಹೆಬ್ಬಾಳಿನ ಕಂಪನಿಯೊಂದರಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು, ಡ್ರೈವರ್ ಕಂ ಮಾರ್ಕೆಟಿಂಗ್, ಸಿಎನ್‌ಸಿ ಮೆಷಿನ್ ಆಪರೇಟರ್‌ಗಳು, ಟೈಲರುಗಳು, ಹೆಲ್ಪರುಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
8105249880 / 7795285485

**ಬೇಕಾಗಿದ್ದಾರೆ**
ಮೈಸೂರಿನ ವಿಜಯನಗರದಲ್ಲಿರುವ ಫರ್ನಿಚರ್ ಶೋರೂಂನಲ್ಲಿ ಕೆಲಸ ಮಾಡಲು ಸೇಲ್ಸ್‌ಮ್ಯಾನ್ ಮತ್ತು ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 9980556642

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಹುಡುಗರು/ಹೆಂಗಸರು ಬೇಕಾಗಿದ್ದಾರೆ.
ದೋಸೆ, ಟೀ, ಪಾರ್ಸಲ್ ಕೌಂಟರ್
9606238790, 9986998606

**ತಕ್ಷಣ ಮನೆ ಕಟ್ಟಲು ಸೈಟ್ಸ್ ನಮ್ಮ ಲೇಔಟ್ಸ್‌ನಲ್ಲಿ ಲಭ್ಯವಿದೆ**
ಬನ್ನೂರು ರಸ್ತೆ ಜಲಮಹಲ್ ಪಕ್ಕ 30–45 ಲಕ್ಷ, ಲಲಿತಾದ್ರಿಪುರ ರಿಂಗ್ ರಸ್ತೆ ಹತ್ತಿರ 37 ಲಕ್ಷ, ವಿಜಯನಗರ NPS ಸ್ಕೂಲ್ ಹಿಂದೆ 58 ಲಕ್ಷ, ಬೋಗಾದಿ ರಸ್ತೆ ಹಾಗೂ ಇಲವಾಲ 28 ಲಕ್ಷ, ಮೈ–ಬೆಂ ರಸ್ತೆ ಪಕ್ಕ ನಗುವನಹಳ್ಳಿ 40 ಲಕ್ಷ, R.T. ನಗರ ರಿಂಗ್ ರಸ್ತೆ ಹತ್ತಿರ 55 ಲಕ್ಷ
Brokers Excuse, No Commission
8123075038

**ತಕ್ಷಣ ಬೇಕಾಗಿದ್ದಾರೆ**
ನಂಜನಗೂಡಿನ ಕಡಕೊಳ ಮತ್ತು ಅಡಕನಹಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು, ಸಂಬಳ: 18,800 + W/o (8 hours). ಸಂಪರ್ಕಿಸಿ:
9620667819 / 9620777819

**ತಕ್ಷಣ ಬೇಕಾಗಿದ್ದಾರೆ**
ಕುವೆಂಪುನಗರ ಮತ್ತು ಬೋಗಾದಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು, ಸಂಬಳ: 20,000 + W/o. ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9880727819 / 9620777819

**ಸದ್ಗುರು ಮ್ಯಾರೇಜಸ್**
1) ಲಿಂಗಾಯತ BE M.Tech ಸುಂದರ ಶ್ರೀಮಂತ
2) ಒಕ್ಕಲಿಗ BE ಸುಂದರ ಶ್ರೀಮಂತ
3) ಕುರುಬ BE ಸುಂದರ ಶ್ರೀಮಂತ
4) ನಾಯಕ BE ಸುಂದರ ಶ್ರೀಮಂತ
5) ಬ್ರಾಹ್ಮಣ BCA ಸುಂದರ
6) ತಮಿಳು M.Sc ಸುಂದರ ಶ್ರೀಮಂತ
ವಧುಗಳಿಗೆ ಸೂಕ್ತ ವರಗಳು ಬೇಕು
9448229184 / 7899625268




SUNZONE SOLAR SYSTEM
VM Double Road, Kuvempunagar, Mysuru
9845175443

**ಮನೆ ಮಾರಾಟಕ್ಕಿದೆ**
ಮೈಸೂರಿನ ಪ್ರತಿಷ್ಠಿತ ಏರಿಯಾ ವಿಜಯನಗರ 4ನೇ ಹಂತ, 2ನೇ ಫೇಸ್‌ನಲ್ಲಿ 30x40, 3 ವರ್ಷದ ಹೊಸ ಡ್ಯೂಪ್ಲೆಕ್ಸ್ ಮನೆ, ವಿಟ್ರಿಫೈಡ್, ಆಲ್ ಟೀಕ್‌ವುಡ್, ಬೋರ್ ವೆಲ್ ಇತ್ಯಾದಿ ಇದೆ. ಸಂಪರ್ಕಿಸಿ:
Ph: 0821-4247018, 8762602574, 9482074574

**APARTMENT FOR SALE**
2 BHK Not Furnished
Sq feet 1424- East Face
At HINKAL- NEAR NOTRE DAME SCHOOL
8762277031

**ಬೇಕಾಗಿದ್ದಾರೆ**
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು/ ಹುಡುಗರು ಬೇಕಾಗಿದ್ದಾರೆ.
ಸಂಬಳ : 15000/–
7899754149

**SITE FOR SALE**
40x50 South face, 500 mts from Manipal Hospital, Hale Kesare, Mysore. 2,999/- sq.ft.
Direct Owner. Brokers excuse.
Mob: 8277261970

**NEW HOUSE FOR RENT**
14th Cross, Ramanuja Road, no car parking, ground floor. Contact:
8050259938, 8073733963

**ಸೈಟು ಮಾರಾಟಕ್ಕಿದೆ**
30x50 N/F, KBL SILICON CITY PHASE 2, BEML ಹತ್ತಿರ, K.R.S. Road,
9243536373

**ಜಮೀನು ಮಾರಾಟಕ್ಕಿದೆ**
ಮೈಸೂರು ತಾಲ್ಲೂಕು ಜಯಪುರ ಹೋಬಳಿ ಮಾವಿನಹಳ್ಳಿ ಗ್ರಾಮದಲ್ಲಿ 3 ಎಕರೆ 7 ಗುಂಟೆ ಜಮೀನು ಮತ್ತು ಮುರುಡಗಳ್ಳಿಯಲ್ಲಿ 1 ಎಕರೆ 4 ಗುಂಟೆ ಜಮೀನು, ಹಾರೋಹಳ್ಳಿ ಹೈವೆ ರಸ್ತೆಯಲ್ಲಿ 20 ಗುಂಟೆ ಹಾಗೂ ಹಂಪಾಪುರ ಹೋಬಳಿಯಲ್ಲಿ 25 ಗುಂಟೆ ಮತ್ತು 1 ಎಕರೆ 10 ಗುಂಟೆ, 10 ಗುಂಟೆ, 35 ಗುಂಟೆ ಜಮೀನು ಮಾರಾಟಕ್ಕಿದೆ.
9945661696

**ಬೇಕಾಗಿದ್ದಾರೆ**
ಮೈಸೂರಿನ ಹೆಬ್ಬಾಳಿನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ನೈಟ್ ಶಿಫ್ಟ್‌ನಲ್ಲಿ ಗಾಳಿ ಹಾಕಲು ಬೇಕಾಗಿದ್ದಾರೆ.
ಸಂಬಳ : 10,000/–
8892258814

**ಬೇಕಾಗಿದ್ದಾರೆ**
ನ್ಯೂ ಶಾರದ ರೆಸಾರ್ಟ್ ಕೆ.ಆರ್.ಎಸ್ ಮೇನ್ ರೋಡ್
1) ಕಾರ್ ಪೇಂಟರ್, 2) ಪೇಂಟರ್ 3) ವೆಲ್ಡರ್, ಡೈಲಿ ವೇಜಸ್ ವಾರಕೊಮ್ಮೆ ಸಂಬಳ ನೀಡಲಾಗುವುದು, ಸಂಪರ್ಕಿಸಿ:
9880185785

**ಉದ್ಯೋಗ ಅವಕಾಶಗಳು**
1) ಸೆಕ್ಯೂರಿಟಿ ಗಾರ್ಡ್‌ಗಳು (Night Security) ಬಲ್ಲಾಳ ಸರ್ಕಲ್, BMC ನಗರ, ಸಿದ್ದಪ್ಪ ಸ್ಕ್ವೇರ್ ಸುತ್ತಮುತ್ತ, 2) ಹೌಸ್ ಕೀಪಿಂಗ್(ಹೆಂಗಸರು) : ಸಿದ್ದಪ್ಪ ಸ್ಕ್ವೇರ್, ನಂಜುಮಳಿಗೆ ಸುತ್ತಮುತ್ತ, 8 hr duty, Weakly off ಇರುತ್ತದೆ(13,000 ಸಂಬಳ ಜೊತೆ ESI & PF) 3) ಅನುಭವಿ ಮಾರ್ಕೆಟಿಂಗ್ ವ್ಯವಸ್ಥಾಪಕರು ಬೇಕಾಗಿದ್ದಾರೆ. ಸ್ಥಳ : ಮಂಡ್ಯ ಸುತ್ತ–ಮುತ್ತ ವಿಶ್ವಾಸಾರ್ಹ ಹೆಸರಿನೊಂದಿಗೆ ನಿಮ್ಮ ಜೀವನವನ್ನು ಬೆಳಸಲು ಈ ಅವಕಾಶವನ್ನು ಕಳೆದುಕೊಳ್ಳಬೇಡಿ ತಕ್ಷಣ ಸೇರ್ಪಡೆ.
PH: 8867197599, 8217563349, 9148975329

**ವೃದ್ಧರ ಮನೆ(ಚಾರಿಟೇಬಲ್ ಹೋಂ)**
ವಯಸ್ಸಾದ ವೃದ್ಧರನ್ನು ಮಕ್ಕಳಂತೆ ಆರೈಕೆ ಮಾಡುತ್ತಿರುವ ಸಂಸ್ಥೆ, ಶುದ್ಧ ಸಸ್ಯಹಾರಿ ಆಹಾರ ಮತ್ತು ಶುದ್ಧತೆಯೇ ನಮ್ಮ ಮೊದಲ ಆದ್ಯತೆ, 24 ಗಂಟೆ ಬಿಸಿ ನೀರು ಓಡಾಡಲು ಸುಸಜ್ಜಿತವಾದ ಜಾಗ ಮತ್ತು ನಿರಂತರ ಚಟುವಟಿಕೆಗಳು ಇತ್ಯಾದಿ. ಹೆಚ್ಚಿನ ಮಾಹಿತಿಗೆ
9916905188

**ಜಮೀನು ಮಾರಾಟಕ್ಕಿದೆ**
ಮೈಸೂರು–ಬೆಂಗಳೂರು ಹೊಸ ಹೆದ್ದಾರಿಯ ಸರ್ವೀಸ್ ರಸ್ತೆ ಪಕ್ಕದಲ್ಲಿ, ಮೈಸೂರಿನ ರಿಂಗ್ ರಸ್ತೆಯ, ಮಣಿಪಾಲ್ ಆಸ್ಪತ್ರೆಯಿಂದ 6.K.M. ದೂರದಲ್ಲಿ 1 ರಿಂದ 2 ಎಕರೆ ಜಮೀನು ಮಾರಾಟಕ್ಕಿದೆ. ಎಲ್ಲಾ ರೀತಿಯ "ಕಮರ್ಷಿಯಲ್"ವ್ಯಾಪಾರಗಳಿಗೆ ಸೂಕ್ತವಾಗಿರುತ್ತದೆ. ಸಂಪರ್ಕಿಸಿ
7348831599

**ಸೈಟು ಬೇಕಾಗಿದೆ**
ಚಿಕ್ಕಹಳ್ಳಿ / ವಾಜಮಂಗಲ / ವರುಣ ಕ್ಯಾಲಿಬರ್ / ಜೆವಿಎಸ್ 3ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್‌ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750

**ಬೇಕಾಗಿದ್ದಾರೆ**
ಮೈಸೂರಿನಲ್ಲಿರುವ ಹೆಸರಾಂತ ಬಜಾಜ್‌ನ ದ್ವಿಚಕ್ರ ವಾಹನದ ಶೋರೂಂಗೆ ಕೂಡಲೇ ಬೇಕಾಗಿದ್ದಾರೆ.
* Marketing sales Executive. (Qualification-Any degree-fresher or experienced) ನಿಮ್ಮ ಅರ್ಜಿಗಳನ್ನು ಶೀಘ್ರವೇ ಕಳಿಸಿ. ಮೇಲ್ ಐಡಿ:– starmysoreresume@gmail.com
ಕರೆ ಮಾಡಿ:
9743647484

**ಮೈಸೂರು ಮಿತ್ರ 46**
**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ



# ಸರಗೂರಲ್ಲಿ 'ಪ್ರಜಾಸೌಧ' ಕಟ್ಟಡಕ್ಕೆ ಭೂಮಿ ಪೂಜೆ

## ತಾಲೂಕಿನ ಸಮಗ್ರ ಅಭಿವೃದ್ಧಿಗೆ ಕ್ರಮ: ಶಾಸಕ ಅನಿಲ್ ಭರವಸೆ



ಪ್ರಜಾಸೌಧ ಕಟ್ಟಡಕ್ಕೆ ಭೂಮಿ ಪೂಜೆ ನೆರವೇರಿಸಿ ಶಾಸಕ ಅನಿಲ್ ಮಾತನಾಡಿದರು.

ಸರಗೂರು, ಅ.3– ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳಿಗೆ ಅಲೆಯುವುದನ್ನು ತಪ್ಪಿಸುವ ಸಲುವಾಗಿ ಒಂದೇ ಸೂರಿನಡಿ 32 ಇಲಾಖೆಗಳು ಬರುವಂತೆ 'ಪ್ರಜಾಸೌಧ' ಕಟ್ಟಡ ವಿನ್ಯಾಸಗೊಳಿಸಲಾಗಿದೆ ಎಂದು ಶಾಸಕರು, ಅರಣ್ಯ ಮತ್ತು ವಸತಿ ವಿಹಾರಧಾಮ ಸಂಸ್ಥೆಗಳ ಅಧ್ಯಕ್ಷ ಅನಿಲ್ ತಿಳಿಸಿದರು.

ಪಟ್ಟಣದ ನೀರಾವರಿ ಇಲಾಖೆ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 8.60 ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸುತ್ತಿರುವ 'ಪ್ರಜಾಸೌಧ' ಕಟ್ಟಡಕ್ಕೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಮಾಜಿ ಶಾಸಕ ದಿ.ಎಸ್.ಚಿಕ್ಕಮಾದು, ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರ ಸತತ ಪರಿಶ್ರಮದಿಂದಾಗಿ ಹೋಬಳಿ ಕೇಂದ್ರವಾಗಿದ್ದ ಸರಗೂರು, ಕೋಟೆ ತಾಲೂಕಿನಿಂದ ಬೇರ್ಪಟ್ಟು ನೂತನ ತಾಲೂಕಾಗಿ 8 ವರ್ಷ ಕಳೆದಿದೆ. ಸದ್ಯ ನೀರಾವರಿ ಇಲಾಖೆ ಜಾಗವನ್ನು ಕಂದಾಯ ಇಲಾಖೆಗೆ ಹಸ್ತಾಂತರಿಸಿಕೊಂಡು ಸಿಎಂ ಸಿದ್ದರಾಮಯ್ಯ ಅವರಿಂದ ಅನುದಾನ ಬಿಡುಗಡೆ ಮಾಡಿಸಿ 'ಪ್ರಜಾಸೌಧ' ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗಿದೆ. ಇಲ್ಲಿ 32 ಇಲಾಖೆಗಳೂ ಕಾರ್ಯನಿರ್ವಹಿಸಲಿವೆ ಎಂದರು.

**ಆಸ್ಪತ್ರೆ, ಕೋರ್ಟ್, ಅಗ್ನಿಶಾಮಕ ಠಾಣೆ:** ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರವಿದ್ದಾಗ ಪದವಿ ಕಾಲೇಜು ಮಂಜೂರಾಯಿತು. ಕಾಂಗ್ರೆಸ್ ಸರ್ಕಾರದಲ್ಲಿ ಪ್ರಜಾಸೌಧ ಕಟ್ಟಡ ನಿರ್ಮಾಣ, 32 ಕೋಟಿ ವೆಚ್ಚದಲ್ಲಿ 100 ಹಾಸಿಗೆಯುಳ್ಳ ದೊಡ್ಡಾಸ್ಪತ್ರೆ, ನೀರಾವರಿ ಇಲಾಖೆ ಜಾಗದಲ್ಲಿಯೇ ನ್ಯಾಯಾಲಯ, 2 ಎಕರೆ ಜಾಗದಲ್ಲಿ ಅಗ್ನಿಶಾಮಕದಳ ಕಟ್ಟಡ ನಿರ್ಮಾಣಕ್ಕೆ 4 ಕೋಟಿ ರೂ.ಅನುದಾನ ಬಂದಿದೆ. ಹಂತ ಹಂತವಾಗಿ ಇಲಾಖೆಗಳ ಕಟ್ಟಡಗಳ ನಿರ್ಮಿಸಲಾಗುವುದು. ಹಳ್ಳಿಗಳಿಂದ ಕೂಡಿದ ಸರಗೂರು ತಾಲೂಕಿನ ಅಭಿವೃದ್ಧಿಗೆ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

**ಪ್ರವೇಶಾತಿ ಕೊರತೆ:** ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮಕ್ಕಳ ಪ್ರವೇಶಾತಿ ಕೊರತೆ ಇದ್ದು, ಮುಚ್ಚುವ ಭೀತಿಯಲ್ಲಿದೆ. ಕಾಲೇಜು ಮುಚ್ಚುವುದು ಸುಲಭ. ಆದರೆ, ಮಂಜೂರು ಮಾಡಿಸಿಕೊಂಡು ಬರುವುದು ಬಹಳ ಕಷ್ಟ ಹೀಗಾಗಿ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಕಾಲೇಜಿಗೆ ಸೇರಿಸಬೇಕು. ಆ ಮೂಲಕ ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು. ಬಿಡುಗಲು 3.20 ಎಕರೆ ಜಾಗದಲ್ಲಿ ನಿವೇಶನ ಹಂಚಿಕೆ ಮಾಡಲಾಗುವುದು. ಮುಂದಿನ ದಿನಗಳಲ್ಲಿ ಬಾಕಿ ಇರುವ ಸಾಗುವಳಿ ಕೊಡಿಸಲಾಗುವುದು ಎಂದರು.

ಪ್ರತಿ ವಾರ್ಡ್‌ಗೆ ಪ್ರತ್ಯೇಕವಾಗಿ ಅನುದಾನ ಬಿಡುಗಡೆ ಮಾಡಲಾಗುವುದು. 1ನೇ ಮುಖ್ಯ ರಸ್ತೆಯಲ್ಲಿ ಬಾಕಿ ಇರುವ ರಸ್ತೆ ಕಾಮಗಾರಿ ಪೂರ್ಣಗೊಳಿಸಲಾಗುವುದು. 2ನೇ ಮುಖ್ಯ ರಸ್ತೆ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಲಾಗುವುದು. ಕ್ರೀಡಾಂಗಣದ ಅಭಿವೃದ್ಧಿಗೆ ಕ್ರಮವಹಿಸಲಾಗುವುದು. ಹ್ಯಾಂಡ್‌ಪೋಸ್ಟ್–ಸರಗೂರು ಡಬ್ಬಲ್ ರಸ್ತೆ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು. ಸರಗೂರು ಪಟ್ಟಣ ಪಂಚಾಯಿತಿ ಕಚೇರಿ ಕಟ್ಟಡ ನಿರ್ಮಾಣಕ್ಕೂ ಮುಂದಾಗಲಾಗುವುದು ಎಂದರು.

ತಹಸೀಲ್ದಾರ್ ಮೋಹನಕುಮಾರಿ ಮಾತನಾಡಿ, ಒಂದೇ ಸೂರಿನಡಿ ವಿವಿಧ ಇಲಾಖೆಗಳು ಕಾರ್ಯನಿರ್ವಹಿಸಲು ಕಟ್ಟಡ ನಿರ್ಮಿಸಿ ಆದಷ್ಟು ಬೇಗ ಮುಗಿಸಿ ಇಲಾಖೆಗೆ ಹಸ್ತಾಂತರಿಸಬೇಕು ಎಂದರು.

ಪಪಂ ಸದಸ್ಯ ಶ್ರೀನಿವಾಸ್ ಮಾತನಾಡಿದರು.

ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ಚಲುವಕೃಷ್ಣ, ರಾಧಿಕಾ, ವಿನಾಯಕ ಪ್ರಸಾದ್, ನವೀನ್, ರಮೇಶ್, ಸ್ವಾಮಿ, ಮುಖ್ಯಾಧಿಕಾರಿ ಸಂತೋಷ್ ಕುಮಾರ್, ತಾಲೂಕು ಆರೋಗ್ಯಾಧಿಕಾರಿ ರವಿಕುಮಾರ್, ಕಾಂಗ್ರೆಸ್ ಮುಖಂಡರಾದ ಶಂಭುಲಿಂಗನಾಯಕ, ಅಣ್ಣಯ್ಯಸ್ವಾಮಿ, ಕುರುಬ ಸಮಾಜದ ಅಧ್ಯಕ್ಷ ಎಂ.ಬಿ.ಆನಂದ್, ಚಿಕ್ಕವೀರನಾಯಕ, ಕಂದೇಗಾಲ ಶಿವರಾಜು, ನವೀನ್, ಸಿದ್ದರಾಜು, ಚಿನ್ನಸ್ವಾಮಿ ಮೂರ್ತಿ, ಗುತ್ತಿಗೆದಾರ ಮೈಸೂರು ಚಂದ್ರು, ಶಾಸಕರ ಆಪ್ತ ಕಾರ್ಯದರ್ಶಿ ಮಂಜುನಾಥ್ ಸೇರಿದಂತೆ ಇನ್ನಿತರರಿದ್ದರು.

# ಪ್ರತಿಯೊಬ್ಬರೂ ಗಾಂಧಿ, ಶಾಸ್ತ್ರಿಯವರ ಸಂದೇಶ ಪಾಲಿಸಿ

## ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್



ತಿ.ನರಸೀಪುರ ಪುರಸಭೆಯಲ್ಲಿ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ನಡೆಯಿತು.

ತಿ.ನರಸೀಪುರ, ಅ.3– ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರ ಸಂದೇಶಗಳನ್ನು ಪ್ರತಿಯೊಬ್ಬರೂ ಪಾಲಿಸಿದರೆ ದೇಶದಲ್ಲಿ ಮಹತ್ತರ ಬದಲಾವಣೆ ಕಾಣಲು ಸಾಧ್ಯ ಎಂದು ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಅಭಿಪ್ರಾಯಪಟ್ಟರು.

ಪಟ್ಟಣದ ಪುರಸಭೆಯಲ್ಲಿ ನಡೆದ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಜಯಂತಿಯಲ್ಲಿ ಮಹನೀಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಗಾಂಧೀಜಿ ಹಾಗೂ ಶಾಸ್ತ್ರಿ ಅವರು ದೇಶ ಕಂಡ ಮಹಾನ್ ನಾಯಕರು. ಇವರಿಬ್ಬರ ಜನ್ಮದಿನ ಒಂದೇ ದಿನ ಆಗಿರುವುದು ಭಾರತದ ಪಾಲಿಗೆ ಸುದಿನವಾಗಿದೆ. ಅವರ ಆದರ್ಶ ಜೀವನ, ತತ್ವಗಳು ಅವರು ನಡೆದು ಬಂದ ಹಾದಿ ನೋಡಿದರೆ ದೇಶದ ಅಭಿವೃದ್ಧಿಗೆ ಅವರ ಕೊಡುಗೆ ಏನೆಂಬುದು ತಿಳಿಯುತ್ತದೆ ಎಂದರು.

ಪುರಸಭಾಧ್ಯಕ್ಷೆ ಬಿ.ವಸಂತ ಶ್ರೀಕಂಠ ಮಾತನಾಡಿ, ಜಗತ್ತಿನಲ್ಲಿ ಶಾಂತಿ, ಅಹಿಂಸೆ ಬಗ್ಗೆ ಮಾತನಾಡುವಾಗ ಮೊದಲು ನೆನಪಾಗುವುದೇ ಮಹಾತ್ಮ ಗಾಂಧಿ. ಸ್ವಾತಂತ್ರ್ಯ ಹೋರಾಟದ ಹಾದಿಯಲ್ಲಿ ಅಹಿಂಸೆ ಪ್ರತಿಪಾದಿಸುತ್ತಾ ತಮ್ಮ ಜೀವನವನ್ನು ರಾಷ್ಟ್ರಕ್ಕಾಗಿ ಮುಡಿಪಾಗಿಟ್ಟವರು. ಹೀಗಾಗಿ ಭಾರತ ಸ್ವಾತಂತ್ರ್ಯಗಳಿಸುವಲ್ಲಿ ಗಾಂಧೀಜಿ ಪ್ರಮುಖ ಪಾತ್ರ ವಹಿಸಿದ್ದರು ಹಾಗೂ ಶಾಂತಿ ಮತ್ತು ಅಹಿಂಸೆ ಪ್ರತಿಪಾದಕರಾಗಿದ್ದರು ಎಂದು ಬಣ್ಣಿಸಿದರು.

ಇದೇ ವೇಳೆ ರಾಷ್ಟ್ರೀಯ ಯಾಂತ್ರೀಕೃತ ನೈರ್ಮಲ್ಯ ಪರಿಸರ ವ್ಯವಸ್ಥೆ ಯೋಜನೆಯಡಿ ಒಳಚರಂಡಿ ಮತ್ತು ಸೆಪ್ಟಿಕ್ ಟ್ಯಾಂಕ್ ನಿರ್ವಹಣೆ ಕಾರ್ಮಿಕರಿಗೆ ವೈಯಕ್ತಿಕ ರಕ್ಷಣಾ ಸಾಧನ ಕಿಟ್‌ಗಳನ್ನು ಇದೇ ವೇಳೆ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸದಸ್ಯ ಸಿದ್ದು, ಪ್ರಭಾರ ಮುಖ್ಯಾಧಿಕಾರಿ ಕೆ.ಸ್ತ್ರೀವೇಣಿ, ಕಚೇರಿ ವ್ಯವಸ್ಥಾಪಕ ಮಹೇಂದ್ರ ಹಿರಿಯ ಆರೋಗ್ಯ ನಿರೀಕ್ಷಕ ಚಂಪಾಶ್ರೀ, ಪ್ರಥಮ ದರ್ಜೆ ಸಹಾಯಕಿ ಜಯಲಕ್ಷ್ಮಮ್ಮ, ದ್ವಿತೀಯ ದರ್ಜೆ ಸಹಾಯಕಿ ಆಶಾ, ಗೋಪಾಲ್, ರಾಮು, ನಿಂಗರಾಜು, ಮಾದೇಶ್ ಇದ್ದರು.

# ಸುತ್ತೂರು ಗ್ರಾಪಂನಲ್ಲಿ ಗಾಂಧಿ ಜಯಂತಿ ಆಚರಣೆ

## ಸರ್ಕಾರದ ಸಹಾಯಧನ ಒಟ್ಟುಗೂಡಿಸಿ ಬಟ್ಟೆ ವಿತರಿಸಿದ ಅಧ್ಯಕ್ಷ ರಂಗಸ್ವಾಮಿ



ಸುತ್ತೂರು ಗ್ರಾಪಂನಲ್ಲಿ ಗಾಂಧಿ ಜಯಂತಿ ಆಚರಿಸಲಾಯಿತು.

ತಿ.ನರಸೀಪುರ, ಅ.3– ವರುಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಸುತ್ತೂರು ಗ್ರಾಪಂನಲ್ಲಿ ಗಾಂಧಿ ಜಯಂತಿ ಆಚರಿಸಲಾಯಿತು.

ಅಲ್ಲದೇ ಆಯುಧ ಪೂಜೆ ಹಾಗೂ ವಿಜಯ ದಶಮಿ ಅಂಗವಾಗಿ ಪೌರ ಕಾರ್ಮಿಕರು, ಆಶಾ, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಗ್ರಾಪಂ ಸಿಬ್ಬಂದಿಗಳಿಗೆ ಸೀರೆ, ಪ್ಯಾಂಟು ಷರ್ಟ್ ವಿತರಿಸಿ ಮಾತನಾಡಿದ ಅಧ್ಯಕ್ಷ ರಂಗಸ್ವಾಮಿ, ನಮ್ಮ ಗ್ರಾಪಂನಲ್ಲಿ ನನಗೆ ಪ್ರತಿ ತಿಂಗಳು ನೀಡುವ ಸರ್ಕಾರದ ಸಹಾಯಧನವನ್ನು ಕ್ರೋಢಿಕರಿಸಿ ಇಂದು ಗ್ರಾಪಂನಲ್ಲಿ ಕೆಲಸ ಮಾಡುವ ನೂರಕ್ಕೂ ಹೆಚ್ಚು ಮಂದಿಗೆ ಹೊಸ ಬಟ್ಟೆ ವಿತರಿಸಿರುವುದು ಸಂತೋಷವಾಗಿದೆ. ಆಯುಧ ಪೂಜೆ ವೇಳೆ ದೊಡ್ಡ ಕಂಪನಿಗಳಲ್ಲಿ, ಕಚೇರಿಗಳಲ್ಲಿ ಕಾರ್ಮಿಕರಿಗೆ ಉಡುಗೊರೆ ಮತ್ತು ಬೋನಸ್ ನೀಡುತ್ತಾರೆ. ಆದರೆ ಕಡಿಮೆ ಸಂಬಳಕ್ಕೆ ದುಡಿಯುವ ಬಹುಪಾಲು ಮಹಿಳೆಯರು ಅದರಲ್ಲೂ ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಪೌರ ಕಾರ್ಮಿಕರು ದೇಶದ ಬೆನ್ನೆಲುಬು. ಅವರ ಪರಿಶ್ರಮದಿಂದ ನಾವೆಲ್ಲರೂ ನೆಮ್ಮದಿಯಾಗಿ ಬದುಕುತ್ತಿದ್ದೇವೆ. ಅಂತಹವರನ್ನು ಗುರ್ತಿಸಿ ನನ್ನ ಅಕ್ಕ ತಂಗಿಯರ ಹಾಗೇ ಅವರಿಗೆ ಸೀರೆ ವಿತರಣೆ ಮಾಡಿದ್ದು ವೈಯಕ್ತಿಕವಾಗಿ ಸಂತೋಷ ತಂದಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದ ಜನತೆಗೆ ಸಾಕಷ್ಟು ಅನುಕೂಲ ಕಲ್ಪಿಸಿದ್ದಾರೆ. ಅವರ ಅನುಯಾಯಿಯಾದ ನಾನು ಸುತ್ತೂರು ಗ್ರಾಪಂ ಅಧ್ಯಕ್ಷನಾಗಿದ್ದು, ನನ್ನ ಮೇಲೆ ಭರವಸೆ ಇಟ್ಟು ಮತ ನೀಡಿದ ಪ್ರತಿಯೊಬ್ಬ ಮತದಾರರು ನನ್ನ ಆಸ್ತಿಯಾಗಿದ್ದಾರೆ. ಹೀಗಾಗಿ ನನ್ನ ಅಧಿಕಾರವಧಿಯಲ್ಲಿ ಸರ್ಕಾರದ ಅನುದಾನಕ್ಕೆ ಕಾಯದೇ ಹಲವು ಬಾರಿ ಸಾರ್ವಜನಿಕರಿಗೆ ಮೂಲ ಸೌಕರ್ಯ ಕಲ್ಪಿಸಿದ್ದೇನೆ ಎಂದರು. ಕಾರ್ಯಕ್ರಮದಲ್ಲಿ ಸುತ್ತೂರು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ರಮ್ಯಾ, ಆರೋಗ್ಯ ನಿರೀಕ್ಷಣಾಧಿಕಾರಿ ರೋಹಿತ್, ಪಿಡಿಓ ಮಹದೇವಸ್ವಾಮಿ, ಉಪಾಧ್ಯಕ್ಷೆ ಪ್ರತಿಮಾ, ಸದಸ್ಯರಾದ ಗೌರಮ್ಮ, ಲಕ್ಷ್ಮಿ, ಲಕ್ಷ್ಮಣ್, ಮಹೇಶ್ ಹಾಗೂ ಪಂಚಾಯತಿ ಸಿಬ್ಬಂದಿ ವರ್ಗ ಮತ್ತು ಸುತ್ತೂರು ಗ್ರಾಮಸ್ಥರಿದ್ದರು.

# ಹಳೇಬೀಡು ಗ್ರಾಪಂನಲ್ಲಿ ವಿಶೇಷ ಗ್ರಾಮಸಭೆ



ಹಳೇಬೀಡು ಗ್ರಾಪಂನಲ್ಲಿ ಗ್ರಾಮ ಸಭೆ ನಡೆಯಿತು.


ಹುಣಸೂರು, ಅ.3– ಸ್ವಚ್ಛತೆ ಪದವಾಗಿ ಉಳಿಯುವ ಬದಲು ಕ್ರಿಯೆಯಾಗಿ ಪರಿವರ್ತನೆಯಾಗಬೇಕು. ಆ ಮೂಲಕ ನಮ್ಮ ಸುತ್ತಮುತ್ತಲ ಪರಿಸರದಲ್ಲಿನ ಕೆರೆ, ನದಿ, ಬಾವಿ ಮತ್ತು ಇತರೆ ಜಲಮೂಲವನ್ನು ಸ್ವಚ್ಛವಾಗಿಟ್ಟುಕೊಂಡು ರಾಸಾಯನಿಕ ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ಸೇರದಂತೆ ನೋಡಿಕೊಳ್ಳಬೇಕು ಎಂದು ಹಳೇಬೀಡು ಗ್ರಾಪಂ ಪಿಡಿಓ ರಾಮಣ್ಣ ತಿಳಿಸಿದರು.

ತಾಲೂಕಿನ ಹಳೇಬೀಡು ಗ್ರಾಪಂ ವತಿಯಿಂದ ಐಟಿ ಸಿಎಂಎಸ್‌ಕೆ, ಔಟ್‌ರೀಚ್ ಸಂಸ್ಥೆ ಸಹಯೋಗದಲ್ಲಿ ಗಾಂಧಿ ಜಯಂತಿ ಅಂಗವಾಗಿ ಸುಣ್ಣದ ವೆಂಕಟನಾಯಕ ಅಂಗಡಿ ಸರ್ಕಲ್‌ನಲ್ಲಿ ನಡೆದ ವಿಶೇಷ ಗ್ರಾಮ ಸಭೆಯಲ್ಲಿ ಅವರು ಮಾತನಾಡಿದ ಅವರು, ರೈತರ ಜಮೀನಿಗೆ ಹೋಗುವ ರಸ್ತೆಗಳು, ವೈಯಕ್ತಿಕ ಕಾಮಗಾರಿಗಳಾದ ಕೊಟ್ಟಿಗೆ, ಇಂಗು ಗುಂಡಿ, ಶೌಚಾಲಯ ಹಾಗೂ ಸಮುದಾಯದ ಕಾಮಗಾರಿಗಳಾದ ದ್ರವ ತ್ಯಾಜ್ಯ ನಿರ್ವಹಣೆಗೆ ಬೂದು ನೀರು ಚರಂಡಿ, ಕೃಷಿ ಹೊಂಡ, ರೇಷ್ಮೆ ಇಲಾಖೆ ಕಾಮಗಾರಿಗಳು ಮತ್ತು ತೋಟಗಾರಿಕೆ ಬೆಳೆಗಳಾದ ತೆಂಗು, ಬಾಳೆ, ಸಪೋಟಾ ಬೆಳೆಯಲು ಬೇಡಿಕೆ ಪಟ್ಟಿಯನ್ನು ಹಾಗೂ ಸಭೆಯಲ್ಲಿ ಪಟ್ಟಿ ಮಾಡಿದ ಕಾಮಗಾರಿಗಳನ್ನು 2026ರ ಮಾರ್ಚ್‌ನೊಳಗೆ ಮಾಡಿ ಮುಗಿಸಲಾಗುವುದು ಎಂದರು.

ಐಟಿಸಿಎಂಎಸ್‌ಕೆ, ಔಟ್‌ರೀಚ್ ಸಂಸ್ಥೆ ತರಬೇತಿದಾರ ಜಿ.ಎಸ್.ಜಗದೀಶ್ ಮಾತನಾಡಿ, ಸ್ವಚ್ಛತಾ ಹೀ ಸೇವಾ ಪಾಕ್ಷಿಕ 11ನೇ ವರ್ಷದ ಅಂಗವಾಗಿ ಗ್ರಾಪಂ ವ್ಯಾಪ್ತಿಯಲ್ಲಿ ಸೆ.17ರಿಂದ ಅ.2ರವರೆಗೆ ಸ್ವಚ್ಛತಾ ಹೀ ಸೇವಾ ರೂಪಾಂತರ ಅಭಿಯಾನ ಲೈಟ್‌ಹೌಸ್ ಪೇಸ್–02ರಲ್ಲಿ ಸಾಮೂಹಿಕ ಶ್ರಮದಾನದ ಮೂಲಕ ಮಹದೇಶ್ವರ, ಬಸವೇಶ್ವರ, ಸಿದ್ದೇಶ್ವರ ಸಮುದಾಯ ದೇವಸ್ಥಾನಗಳು ಹಾಗೂ ವಡ್ಡರಹಳ್ಳಿ, ಹಳ್ಳದಕಲ್ಲಹಳ್ಳಿ, ಮೈದನಹಳ್ಳಿ, ಮೂಡಲಕೊಪ್ಪಲು ಸರ್ಕಾರಿ ಶಾಲೆಗಳ ಆವರಣ ಹಾಗೂ ಹಳೇಬೀಡು ಗ್ರಾಮದ ಉಪ ಆರೋಗ್ಯ ಕೇಂದ್ರದ ಆವರಣವನ್ನು ಸ್ವಚ್ಛಗೊಳಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಬೀದಿ ನಾಟಕದ ಮೂಲಕ ಪ್ರಚಾರ ಮಾಡಲಾಯಿತು. ಎಲ್ಲಾ ನಾಗರಿಕರು ಗ್ರಾಮೀಣ ಪ್ರದೇಶದಲ್ಲಿ ಸಂಪೂರ್ಣ ನೈರ್ಮಲ್ಯ ಸಾಧಿಸಲು ಕೈಜೋಡಿಸಬೇಕು ಎಂದರು.

ಸ್ವಚ್ಛತಾ ಹೀ ಸೇವಾ ಪಾಕ್ಷಿಕ ಅಂಗವಾಗಿ ಏರ್ಪಡಿಸಿದ್ದ ವಿಶೇಷ ಗ್ರಾಮ ಸಭೆಯಲ್ಲಿ ಘೋಷ ವಾಕ್ಯವಾದ ಸ್ವಚ್ಛತೆಯ ರೂಪಾಂತರ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಗ್ರಾಪಂ ಅಧ್ಯಕ್ಷೆ ತಾಯಮ್ಮ, ಉಪಾಧ್ಯಕ್ಷರಾದ ಮಲ್ಲೇಶ.ಪಿ., ಮಾಜಿ ಅಧ್ಯಕ್ಷ ಮಹೇಶ, ಸದಸ್ಯರಾದ ಪಿ.ಉಮೇಶ, ಲೀಲಾವತಿ, ಪವಿತ್ರ, ಗೌರಮ್ಮ, ಶೃತಿ, ಸಂಜೀವಿನಿ ಒಕ್ಕೂಟದ ಎಂ.ಬಿ.ಕೆ ಮಾನಸ, ಗ್ರಾಪಂ ಸಿಬ್ಬಂದಿಗಳಾದ ಮಮತ, ಅನಿತ, ಚಂದ್ರೇಗೌಡ, ನೀರುಗಂಟಿಗಳಾದ ಗೋವಿಂದೇಗೌಡ, ರಘು, ಪುಟ್ಟರಾಜನಾಯಕ, ಕೃಷ್ಣೇಗೌಡ, ಸುರೇಶ, ಸ್ವಾಮೀಗೌಡ ಸೇರಿದಂತೆ ಗ್ರಾಮದ ಮುಖಂಡರು ಹಾಗೂ ಸಾರ್ವಜನಿಕರು ಇದ್ದರು.

# ಚಿರತೆ ಮರಿ ಸಾವು



**ಹೆಚ್.ಡಿ.ಕೋಟೆ:** ಸುಮಾರು 8 ರಿಂದ 10 ತಿಂಗಳ ಚಿರತೆ ಮರಿ ಸಾವನ್ನಪ್ಪಿರುವ ಘಟನೆ ತಾಲೂಕಿನಲ್ಲಿ ಬೆಳಕಿಗೆ ಬಂದಿದೆ.

ತಾಲೂಕಿನ ಮಾದಾಪುರ ಸಮೀಪದ ಕುಣಗಲು ಗ್ರಾಮದ ನಿವಾಸಿ ಪುಟ್ಟಚಂದ್ರಯ್ಯ ಅವರ ತೋಟದ ಮನೆಯಲ್ಲಿ ಗುರುವಾರ ಹೆಣ್ಣು ಚಿರತೆ ಮರಿ ಪ್ರತ್ಯಕ್ಷವಾಗಿದೆ. ಅದನ್ನು ಕಂಡ ಪುಟ್ಟಚಂದ್ರಯ್ಯ ಅವರು ಗಾಬರಿಗೊಂಡು ತಕ್ಷಣ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಸುರಕ್ಷಿತವಾಗಿ ಸೆರೆ ಹಿಡಿದು, ಬೋನ್‌ನಲ್ಲಿ ತಂದರಾದರೂ ಚಿರತೆ ಮರಿ ಸಾವನ್ನಪ್ಪಿದೆ ಎನ್ನಲಾಗಿದೆ.

ಚಿರತೆ ಮರಿ ಗದ್ದಿಗೆ ಭಾಗದಿಂದ ದಾರಿತಪ್ಪಿ ತೋಟದ ಮನೆ ಬಳಿ ಬಂದಿದೆ. ನಮಗೆ ಮಾಹಿತಿ ತಿಳಿದ ಬಳಿಕ ತಕ್ಷಣ ಚಿರತೆ ಮರಿ ರಕ್ಷಿಸಲು ಸತತ ಪ್ರಯತ್ನ ಪಟ್ಟಿದ್ದೇವೆ. ಆದರೂ ಚಿರತೆ ಸಾವನ್ನಪ್ಪಿದೆ. ಡಾ.ಪ್ರಸನ್ನ ಕುಮಾರ್ ಚಿರತೆ ಮರಣೋತ್ತರ ಪರೀಕ್ಷೆ ನಡೆಸಿದ್ದು, ವರದಿ ಬಂದ ಬಳಿಕ ತನಿಖೆ ಕೈಗೊಳ್ಳಲಾಗುವುದು ಎಂದರು.

ಈ ವೇಳೆ ಡಿಸಿಎಫ್ ಕೆ.ಪರಮೇಶ್, ಎಸಿಎಫ್ ಸುಮಿತ್ರ, ಆರ್‌ಎಫ್‌ಓ ನಿಖಿಲ್, ಸಿಬ್ಬಂದಿ ವರ್ಗ ಹಾಜರಿದ್ದರು.

# ಗಾಂಧೀಜಿ ತ್ಯಾಗ, ಬಲಿದಾನ ಸದಾ ಆದರ್ಶಪ್ರಾಯ

## ಭೇರ್ಯ ಗ್ರಾಪಂ ಪಿಡಿಓ ಮಮತಾ



ಮಹಾತ್ಮ ಗಾಂಧಿ ಭಾವಚಿತ್ರಕ್ಕೆ ಗ್ರಾಪಂ ಅಧ್ಯಕ್ಷೆ ರೇಖಾ ಪುಷ್ಪಾರ್ಚನೆ ಮಾಡಿದರು.

ಭೇರ್ಯ, ಅ.3– ದೇಶಾದ್ಯಂತ ಗಾಂಧಿ ಜಯಂತಿ ಆಚರಿಸಲಾಗುತ್ತಿದ್ದು, ಅವರ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ ನಾವಿಂದು ಸ್ವಾತಂತ್ರ್ಯ ಅನುಭವಿಸುತ್ತಿದ್ದೇವೆ. ಅವರ ತ್ಯಾಗ, ಬಲಿದಾನ ನಮಗೆ ಸದಾ ಆದರ್ಶಪ್ರಾಯ ಎಂದು ಪಿಡಿಓ ಮಮತಾ ತಿಳಿಸಿದರು.

ಇಲ್ಲಿನ ಗ್ರಾಪಂ ಕಚೇರಿಯಲ್ಲಿ ನಡೆದ ಮಹಾತ್ಮ ಗಾಂಧಿ ಜಯಂತಿಯಲ್ಲಿ ಗಾಂಧೀಜಿ ಅವರ ಭಾವಚಿತ್ರಕ್ಕೆ ಅಧ್ಯಕ್ಷೆ ರೇಖಾ ಅವರೊಂದಿಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಜಗತ್ತಿನಲ್ಲಿ ಶಾಂತಿ, ಅಹಿಂಸೆ ಬಗ್ಗೆ ಮಾತನಾಡುವಾಗ ಮೊದಲು ನೆನಪಾಗುವುದೇ ರಾಷ್ಟ್ರಪಿತ ಮಹಾತ್ಮ ಗಾಂಧಿ. ಸ್ವಾತಂತ್ರ್ಯ ಹೋರಾಟದ ಹಾದಿಯಲ್ಲಿ ಅಹಿಂಸೆ ಪ್ರತಿಪಾದಿಸುತ್ತಾ ತಮ್ಮ ಜೀವನವನ್ನು ರಾಷ್ಟ್ರಕ್ಕಾಗಿ ಮುಡಿಪಾಗಿಟ್ಟ ವ್ಯಕ್ತಿ. ಹೀಗಾಗಿ ಭಾರತದ ಸ್ವಾತಂತ್ರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ ಹಾಗೂ ಶಾಂತಿ ಮತ್ತು ಅಹಿಂಸೆ ಪ್ರತಿಪಾದಕರಾಗಿದ್ದರು ಮಹಾತ್ಮ ಗಾಂಧಿ ಎಂದು ಬಣ್ಣಿಸಿದರು.

ಮಹಾತ್ಮ ಗಾಂಧಿಯವರು ರಾಷ್ಟ್ರಕ್ಕೆ ನೀಡಿದ ಕೊಡುಗೆ ಗೌರವಿಸಲು ಈ ದಿನ ಮೀಸಲಿಡಲಾಗಿದೆ. ಇದೇ ದಿನವನ್ನು ಜಾಗತಿಕ ಮಟ್ಟದಲ್ಲಿ ಅಂತಾರಾಷ್ಟ್ರೀಯ ಅಹಿಂಸಾ ದಿನವನ್ನಾಗಿ ಕೂಡ ಆಚರಿಸಲಾಗುತ್ತದೆ. ಮಹಾತ್ಮ ಗಾಂಧೀಜಿಯವರು ದೇಶಕ್ಕಾಗಿ ಹೋರಾಟ ನಡೆಸಿದರೂ ಅವರ ಮೂಲತತ್ವವು ಅಹಿಂಸೆ ಉತ್ತೇಜಿಸುವುದಾಗಿತ್ತು. ಗಾಂಧಿ ಅವರು ಸಾಮಾಜಿಕ ಕಾರ್ಯಕರ್ತರಾಗಿ ತನ್ನ ತತ್ವ ಸಿದ್ಧಾಂತಗಳಿಂದಲೇ ದೇಶ ವಿದೇಶಗಳಲ್ಲಿ ಚಿರಪರಿಚಿತರಾಗಿದ್ದರು. ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದ್ದ ಗಾಂಧೀಜಿಯವರ ಹೋರಾಟದ ಹಾದಿಯಲ್ಲಿ ಅವರ ಸಿದ್ಧಾಂತಗಳು ಮತ್ತು ಹೋರಾಟಗಳು 1947 ರಲ್ಲಿ ಭಾರತದ ಸ್ವಾತಂತ್ರ್ಯಕ್ಕೆ ದೊಡ್ಡ ಮಟ್ಟದಲ್ಲಿ ತಿರುವು ನೀಡಿತು. ಹೀಗಾಗಿ ಮಹಾತ್ಮಾ ಗಾಂಧೀಜಿಯವರು ತತ್ವ ಸಿದ್ಧಾಂತಗಳು ಇಂದಿಗೂ ಪ್ರಸ್ತುತವಾಗಿದೆ ಎಂದರು.

ಇಂದು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನವೂ ಆಗಿದ್ದು ದೇಶ ಕಂಡ ಅತ್ಯಂತ ಪ್ರಾಮಾಣಿಕ ಪ್ರಧಾನಿ ಅವರು ಎಂದು ಲಾಲ್ ಬಹದ್ದೂರ್ ಶಾಸ್ತ್ರೀ ಅವರನ್ನು ಸ್ಮರಿಸಿದರು. ಗ್ರಾಪಂ ಅಧ್ಯಕ್ಷೆ ರೇಖಾ, ಉಪಾಧ್ಯಕ್ಷೆ ಶಾಂತಮ್ಮ, ಸದಸ್ಯರಾದ ಮೊಹಸೀನ್ ತಾಜ್, ಹರ್ಷವರ್ಧನಿ, ಲೆಕ್ಕ ಸಹಾಯಕಿ ಬಿ.ಎಸ್.ಅಶ್ವಿನಿ, ಉಪನ್ಯಾಸಕ ಗಿರೀಶ್, ಸಿಬ್ಬಂದಿಗಳಾದ ಕುಮಾರ್, ಜಯಂತ್, ಯೋಗಾ, ರಮೇಶ್, ಸ್ವಾಮೀಗೌಡ, ಹರೀಶ್ ಸೇರಿದಂತೆ ಅನೇಕರಿದ್ದರು.

# ಕುಪ್ಪೆ ರೈತ ಘಟಕದಿಂದ ಗಾಂಧಿ ಜಯಂತಿ



ಕುಪ್ಪೆ ಕರ್ನಾಟಕ ರಾಜ್ಯ ರೈತ ಸಂಘ ಗ್ರಾಮ ಘಟಕದಿಂದ ಗಾಂಧಿ ಜಯಂತಿ ಹಾಗೂ ಸಂಘದ ವಾರ್ಷಿಕೋತ್ಸವ ನಡೆಯಿತು.

ಹುಣಸೂರು, ಅ.3– ತಾಲೂಕಿನ ಕುಪ್ಪೆ ಕರ್ನಾಟಕ ರಾಜ್ಯ ರೈತ ಸಂಘ ಗ್ರಾಮ ಘಟಕದಿಂದ ಗಾಂಧಿ ಜಯಂತಿ ಹಾಗೂ ಸಂಘದ ವಾರ್ಷಿಕೋತ್ಸವ ನಡೆಯಿತು.

ರೈತ ಮುಖಂಡ ಕುಮಾರ್ ಮಾತನಾಡಿ, ಕುಪ್ಪೆ ಗ್ರಾಮ ಘಟಕದಿಂದ ಪ್ರತಿ ವರ್ಷ ಗಾಂಧಿ ಜಯಂತಿ ಆಚರಿಸಲಾಗುತ್ತಿದೆ. ಅಲ್ಲದೇ ಗ್ರಾಮದ ಪದಾಧಿಕಾರಿಗಳು ರೈತ ಸಂಘದ ಚಳವಳಿಯನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ. ರೈತ ಚಳುವಳಿ ಗಾಂಧಿ ತತ್ವ ಸಿದ್ಧಾಂತದಲ್ಲಿ ನಡೆಯುತ್ತಿದೆ. ಸಂಘವು ಶಾಂತಿಯುತವಾಗಿ ಜನರ ಸಮಸ್ಯೆಗೆ ಸ್ಪಂದಿಸುವ ಕೆಲಸ ಮಾಡಬೇಕು. ಅಲ್ಲದೇ ಚಳವಳಿಯನ್ನು ದುರ್ಬಳಕೆ ಮಾಡಿಕೊಳ್ಳಬಾರದು ಎಂದರು.

ಈ ವೇಳೆ ತಾಲೂಕು ಅಧ್ಯಕ್ಷ ಚಿಕ್ಕಣ್ಣ, ಈಶ್ವರ, ಜಿಲ್ಲಾ ಪದಾಧಿಕಾರಿಗಳಾದ ಬಸವರಾಜೇಗೌಡ, ರಾಮೇಗೌಡ, ತಂಬಾಕು ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಣ್ಣ, ಚಂದ್ರೇಗೌಡ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಹದೇವು, ರವಿ, ಮಹೇಶ್, ಗಾಗನಹಳ್ಳಿ ಗ್ರಾಮ ಘಟಕದ ಅಧ್ಯಕ್ಷ ಮಹದೇವು, ಕಾರ್ಯದರ್ಶಿ ಶಂಕರ್, ಮುಳ್ಳೂರು ಗ್ರಾಮ ಘಟಕದ ಅಧ್ಯಕ್ಷ ಮಾದೇವು, ವೆಂಕಟೇಶ್, ಅಣ್ಣೇಗೌಡ ಸೇರಿದಂತೆ ಇನ್ನಿತರರಿದ್ದರು.

# ಗಾಂಧಿ, ಶಾಸ್ತ್ರಿಯವರ ತತ್ವಾದರ್ಶ ಅಳವಡಿಸಿಕೊಳ್ಳಿ



ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಮಹಾತ್ಮ ಗಾಂಧೀಜಿ, ಶಾಸ್ತ್ರಿ ಜಯಂತಿ ನಡೆಯಿತು.

ಸರಗೂರು, ಅ.3– ಪಟ್ಟಣದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಮಹಾತ್ಮ ಗಾಂಧೀಜಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಹನೀಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಮಹದೇವಸ್ವಾಮಿ, ಪ್ರತಿಯೊಬ್ಬರೂ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಂಡು ಸಮಾಜದ ಶ್ರೇಷ್ಠತೆಯನ್ನು ಕಂಡುಕೊಳ್ಳಬೇಕು ಎಂದರು.

ಇದೇ ವೇಳೆ ವಿದ್ಯಾರ್ಥಿಗಳಿಗೆ ಮಹಾತ್ಮ ಗಾಂಧೀಜಿ ಕುರಿತು ರಸಪ್ರಶ್ನೆ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಜೆಎಸ್‌ಎಸ್ ಪ್ರೌಢಶಾಲೆ ಮುಖ್ಯಶಿಕ್ಷಕಿ ನಾಗರತ್ನ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಜಯಣ್ಣ, ಉಪನ್ಯಾಸಕರಾದ ಮಹದೇವಸ್ವಾಮಿ, ವೆಂಕಟೇಶ್, ನಂದೀಶ್, ಪ್ರವೀಣ, ಗುರುಪ್ರಸಾದ್, ಜೀವಿತಾ, ಮಧು, ರಂಜನಿ, ದೈಹಿಕ ಶಿಕ್ಷಕರಾದ ಕೃಷ್ಣಮೂರ್ತಿ, ಮ್ಯಾನೇಜರ್ ಅಶೋಕ್, ಶಾಲಾ ಶಿಕ್ಷಕ ವೃಂದ ಹಾಗೂ ಸಿಬ್ಬಂದಿ ವರ್ಗದವರು ಇದ್ದರು.

## ಜೆ.ಶಿವಮೂರ್ತಿಗೆ ಪಿಹೆಚ್.ಡಿ



ಮೈಸೂರು, ಅ.3– ಡಾ. ಎಸ್.ಎಂ. ಮಂಗಳ ಅವರ ಮಾರ್ಗದರ್ಶನದಲ್ಲಿ ಜೆ. ಶಿವಮೂರ್ತಿ ಅವರು ಅಭಿವೃದ್ಧಿ ಅಧ್ಯಯನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

## ವಿವಿಧ ಬೇಡಿಕೆಗೆ ಆಗ್ರಹಿಸಿ ಪ್ರತಿಭಟನೆ




ಹುಣಸೂರಿನ ಡಿ.ದೇವರಾಜ ಅರಸು, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಸೇರಿದಂತೆ ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರ ನೇಮಕ, ಪರೀಕ್ಷಾ ಶುಲ್ಕ ಪಾವತಿ ದಿನಾಂಕ ಮತ್ತು ಪರೀಕ್ಷೆ ಮುಂದೂಡುವಂತೆ ಹಾಗೂ ಹೆಚ್ಚಿಸಿರುವ ಪರೀಕ್ಷಾ ಶುಲ್ಕ ಕಡಿಮೆ ಮಾಡುವಂತೆ ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ನೇತೃತ್ವದಲ್ಲಿ ನಗರದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

# ಸಾಹಿತಿ ಭೈರಪ್ಪ ನಿಧನ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟ

## ನುಡಿನಮನ ಕಾರ್ಯಕ್ರಮದಲ್ಲಿ ತಾಲೂಕು ಕಸಾಪ ಅಧ್ಯಕ್ಷ ಶಂಕರ್



ಕೆ.ಆರ್.ನಗರ ಕಸಾಪದಿಂದ ಸಾಹಿತಿ ಎಸ್.ಎಲ್.ಭೈರಪ್ಪ ಅವರಿಗೆ ನುಡಿ ನಮನ ಸಲ್ಲಿಸಲಾಯಿತು.

ಕೆ.ಆರ್.ನಗರ, ಅ.3– ಕನ್ನಡ ಸಾರಸ್ವತ ಲೋಕದ ಹಿರಿಯ ಬರಹಗಾರ ಎಸ್.ಎಲ್.ಭೈರಪ್ಪ ಅವರ ಅಗಲಿಕೆ ಸಾಹಿತ್ಯ ಕ್ಷೇತ್ರ ಮತ್ತು ದೇಶಕ್ಕೆ ತುಂಬಲಾರದ ನಷ್ಟ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಿಂಡಿಮ ಶಂಕರ್ ತಿಳಿಸಿದರು.

ಪಟ್ಟಣದ ರೋಟರಿ ಕ್ಲಬ್ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ ಎಸ್.ಎಲ್.ಭೈರಪ್ಪನವರ ನುಡಿನಮನ ಕಾರ್ಯಕ್ರಮದಲ್ಲಿ ಭೈರಪ್ಪನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಪರ್ವ' ಮತ್ತು 'ಉತ್ತರಕಾಂಡ' ಕಾದಂಬರಿಗಳ ಮೂಲಕ ಮಹಾಭಾರತ ಹಾಗೂ ರಾಮಾಯಣ ನೋಡುವ ಮತ್ತು ಓದುವ ಕ್ರಮವನ್ನೇ ಬದಲಿಸಿದ ಅಭಿಜಾತ ಕಾದಂಬರಿಕಾರ ಸರಸ್ವತಿ ಸಮ್ಮಾನ ಪುರಸ್ಕೃತರು, ಪದ್ಮಭೂಷಣ ಎಸ್.ಎಲ್.ಭೈರಪ್ಪನವರು ನಿಧನರಾದರೆಂಬ ಸುದ್ದಿ ಕೇಳಿ ತೀವ್ರ ಆಘಾತವಾಯಿತು ಎಂದರು.

ಅನಕೃ, ಕುವೆಂಪು, ಡಾ.ರಾಜ್ ಕುಮಾರ್ ನಂತರದಲ್ಲಿ ಜನಮಾನಸವನ್ನು ಆವರಿಸಿದ ಮಹಾನ್ ಚೇತನ ಭೈರಪ್ಪನವರಾಗಿದ್ದು, ಅವರು ಶತಮಾನ ಕಂಡ ಅಪರೂಪದ ಕಾದಂಬರಿಕಾರರಾಗಿದ್ದರು. ಭೈರಪ್ಪನವರ ಆದರ್ಶ, ಮೌಲ್ಯ, ವಿಚಾರಧಾರೆಗಳು ಮುಂದಿನ ಪೀಳಿಗೆಗೆ ದಾರಿದೀಪವಾಗಿದ್ದು, ಅವರ ಸೇವೆ ಸ್ಮರಿಸಿ ಜ್ಞಾನಪೀಠ ಪ್ರಶಸ್ತಿ ನೀಡುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಸರಸ್ವತಿ ಪುತ್ರರೆನಿಸಿ, ಕಾದಂಬರಿ ಜಗತ್ತಿನ ಸಾಮ್ರಾಟರಾಗಿ, ಭಾರತೀಯ ಸಾಹಿತ್ಯ ಲೋಕದ ದಿಗ್ಗಜರಾಗಿದ್ದ ಭೈರಪ್ಪನವರು ಎಂದಿಗೂ ಯಾವುದೇ ವಿವಾದ, ಟೀಕೆ ಟಿಪ್ಪಣಿಗಳಿಗೆ ಜಗ್ಗದ ಪ್ರತಿಭೆಯಾಗಿದ್ದರು. ಒಬ್ಬ ಲೇಖಕ ಉತ್ಸವ ಮೂರ್ತಿಯಾಗದೆ ಗರ್ಭಗುಡಿಯೊಳಗಿನ ಮೂರ್ತಿಯಾಗಿರಬೇಕು ಎಂಬ ನಿಲುವಿನೊಂದಿಗೆ ತಮ್ಮ ಸಾಹಿತ್ಯ ಲೋಕದಲ್ಲಿ ಭೈರಪ್ಪನವರು ಸೋಜಿಗ, ವಿಸ್ಮಯ, ಬೆರಗು ಮೂಡಿಸಿದ್ದರಲ್ಲದೆ, ತಮ್ಮದೇ ಆದ ಓದುಗ ಬಳಗವನ್ನು ಸೃಷ್ಟಿಸಿ ಬೆಳೆಸಿದ್ದರು ಎಂದರು.

ಇದೇ ವೇಳೆ ಎಸ್.ಎಲ್.ಭೈರಪ್ಪನವರ ಅಭಿಮಾನಿಗಳು, ಕಸಾಪ ಪದಾಧಿಕಾರಿಗಳು, ಕನ್ನಡಾಭಿಮಾನಿಗಳು ಸಾಹಿತಿ ಭೈರಪ್ಪನವರ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಔಷಧಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಸಿ.ವಿ.ಮೋಹನ್ ಕುಮಾರ್, ಒಕ್ಕಲಿಗರ ಸಂಘದ ನಿರ್ದೇಶಕ ಮಿರ್ಲೆ ರಾಧಾಕೃಷ್ಣ, ರೋಟರಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ, ಅಶೋಕ್, ನಿವೃತ್ತ ಮುಖ್ಯ ಶಿಕ್ಷಕ ಚಂದ್ರಶೇಖರ್, ಬಿಎಸ್ ಎನ್‌ಎಲ್ ಕೃಷ್ಣ, ಮಂಜುನಾಥ್, ಬೀರನಹಳ್ಳಿ ರಾಮರಾಜು, ಶೇಷಾದ್ರಿ ಅಯ್ಯಂಗಾರ್, ಶಿಕ್ಷಕ ರಾಜು, ನಿವೃತ್ತ ಶಿಕ್ಷಕ ತುಕ್ಕೋಜಿರಾವ್, ಸಿದ್ದರಾಜು, ಕೃಷ್ಣ ರಾಮಶೆಟ್ಟಿ, ಬ್ಯಾಂಕ್ ರಾಮೇಗೌಡ, ಜಾನಪದಲೋಕೇಶ್, ಚಂದ್ರಕುಮಾರ್, ಗೋಪಾಲ್ ರಾವ್ ಕದಂ, ಗೋಪಾಲ್‌ರಾಜ್ ಹಾಜರಿದ್ದರು.

## ಮೈಲ್ಯಾಕ್ ನೂತನ ಅಧ್ಯಕ್ಷರಿಗೆ ಸನ್ಮಾನ



ಕೆ.ಆರ್.ನಗರ ತಾಲೂಕು ಕುರುಬರ ಸಂಘದಿಂದ ಮೈಸೂರು ಪೇಯಿಂಟ್ಸ್ ಮತ್ತು ವಾರ್ನಿಷ್(ಮೈಲ್ಯಾಕ್) ನೂತನ ಅಧ್ಯಕ್ಷ ಹೆಚ್.ಡಿ.ಗಣೇಶ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಶಿವಣ್ಣ, ನಿರ್ದೇಶಕರಾದ ರಾಮಕೃಷ್ಣೇಗೌಡ, ಬುಡೀಗೌಡ, ಕೃಷ್ಣೇಗೌಡ, ಶ್ರೀನಿವಾಸ್, ಅನಂತು ಇತರರಿದ್ದರು.

## ಚಂದ್ರಶೇಖರಯ್ಯ ನಿಧನ



ಪಿರಿಯಾಪಟ್ಟಣ, ಅ.3– ತಾಲೂಕು ಅಖಿಲ ಭಾರತ ವೀರಶೈವ ಮಹಾಸಭಾ ಮಾಜಿ ಅಧ್ಯಕ್ಷ ಕೆ.ಪಿ.ಚಂದ್ರಶೇಖರಯ್ಯ(72) ಗುರುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಶುಕ್ರವಾರ ಮಧ್ಯಾಹ್ನ ಮೃತರ ಸ್ವಗ್ರಾಮ ಕಂದೇಗಾಲದ ತೋಟದ ಮನೆಯಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ದಸರಾ ಕರ್ತವ್ಯಕ್ಕೆ ನಿಯೋಜಿತ ಅನ್ಯ ಜಿಲ್ಲೆ ಪೊಲೀಸರು, ಹೋಂ ಗಾರ್ಡ್‌ಗಳಿಗೆ ಪ್ರಶಂಸಾಪೂರ್ವಕ ಬೀಳ್ಕೊಡುಗೆ

ಮೈಸೂರು, ಅ.3(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಬಂದೋಬಸ್ತ್‌ಗಾಗಿ ಹೊರ ಜಿಲ್ಲೆಗಳಿಂದ ಆಗಮಿಸಿದ್ದ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಹಾಗೂ ಗೃಹರಕ್ಷಕ ಸಿಬ್ಬಂದಿಗೆ ಅತ್ಯಂತ ವಿಶ್ವಾಸದ ಬೀಳ್ಕೊಡುಗೆ ನೀಡಲಾಯಿತು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸಿಎಆರ್(ನಗರ ಸಶಸ್ತ್ರ ಮೀಸಲು ಪಡೆ) ಆವರಣದಲ್ಲಿ 61 ಕೆಎಸ್‌ಆರ್‌ಟಿಸಿ ಬಸ್ ಹಾಗೂ 10ಕ್ಕೂ ಹೆಚ್ಚು ಇಲಾಖಾ ಬಸ್‌ಗಳಲ್ಲಿ ತಮ್ಮ ತಮ್ಮ ಕಾರ್ಯ ಸ್ಥಾನದತ್ತ ಪೊಲೀಸರು ಹಾಗೂ ಗೃಹ ರಕ್ಷಕ ಸಿಬ್ಬಂದಿ, ದಸರಾ ಮಹೋತ್ಸವ ಸಂಭ್ರಮವನ್ನು ಮೆಲುಕು ಹಾಕುತ್ತಾ ಸಾಗುತ್ತಿದ್ದ ದೃಶ್ಯಗಳು ಕಂಡುಬಂದವು.

ಕಳೆದ 11 ದಿನಗಳಿಂದ ಮೈಸೂರಿನ ಎಲ್ಲೆಡೆ ಸರ್ಪಗಾವಲು ಹಾಕಲಾಗಿತ್ತು. ಭದ್ರತೆಗೆ ನಿಯೋಜಿತ 6000ಕ್ಕೂ ಹೆಚ್ಚು ಪೊಲೀಸರು ಹಾಗೂ ಗೃಹ ರಕ್ಷಕ ಸಿಬ್ಬಂದಿಗಳಲ್ಲಿ ಅರ್ಧದಷ್ಟು ಮಂದಿ ಜಿಲ್ಲೆಗಳಿಂದ ಬಂದವರಾಗಿದ್ದರು. ಅಧಿಕಾರಿಗಳು ತಮಗೆ ನೀಡಿರುವ ವಾಹನಗಳಲ್ಲಿಯೇ ತೆರಳಿದರೆ, ಸಿಬ್ಬಂದಿ ಹಾಗೂ ಗೃಹ ರಕ್ಷಕರಿಗೆ ಬಸ್ ವ್ಯವಸ್ಥೆ ಮಾಡಲಾಗಿತ್ತು.

ಎರಡು ಹಂತದಲ್ಲಿನ ಪೊಲೀಸ್ ಬಂದೋಬಸ್ತ್‌ನಲ್ಲಿ 6,384 ಸಿವಿಲ್, ಟ್ರಾಫಿಕ್ ಅಧಿಕಾರಿ ಮತ್ತು ಸಿಬ್ಬಂದಿ, 35 ಕೆಎಸ್‌ಆರ್‌ಪಿ ತುಕಡಿಗಳು, 15 ಸಿಎಆರ್ ಮತ್ತು ಡಿಎಆರ್ ತುಕಡಿಗಳು, 29 ಎಎಸ್‌ಸಿ (ಆರ್ಮಿ ಸರ್ವೀಸ್ ಕಾರ್ಪ್ ಟೀಂ), 1 ಗರುಡಾ ಫೋರ್ಸ್ ಹಾಗೂ 1,200 ಹೋಂ ಗಾರ್ಡ್ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿತ್ತು. ಜೊತೆಗೆ ಐವರು ಎಸ್ಪಿ, 35 ಡಿವೈಎಸ್ಪಿ, 140 ಸಿವಿಲ್ ಇನ್ಸ್‌ಪೆಕ್ಟರ್‌ಗಳು ಬಂದೋಬಸ್ತ್ ನೇತೃತ್ವ ವಹಿಸಿದ್ದರು.

ದಸರಾ ಭದ್ರತಾ ಕಾರ್ಯಕ್ಕೆ ಚಿತ್ರದುರ್ಗ, ಹಾಸನ, ಕಡೂರು, ಚನ್ನಪಟ್ಟಣ, ರಾಮನಗರ, ಕೋಲಾರ ಸೇರಿದಂತೆ ರಾಜ್ಯ ಹಲವು ಜಿಲ್ಲೆಗಳಿಂದ ಆಗಮಿಸಿದ್ದವರಿಗೆ ಸರ್ಕಾರಿ ಹಾಸ್ಟೆಲ್‌ಗಳು, ಶಾಲೆಗಳು ಹಾಗೂ ಹೋಟೆಲ್‌ಗಳಲ್ಲಿ ವಸತಿ ವ್ಯವಸ್ಥೆ ಮಾಡಲಾಗಿತ್ತು. ಕರ್ತವ್ಯ ನಿರ್ವಹಿಸುವ ಸ್ಥಳಕ್ಕೆ ಊಟದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿತ್ತು.

**ದಸರಾದಲ್ಲಿ ಕರ್ತವ್ಯ ನಿರ್ವಹಿಸುವುದೇ ವಿಶೇಷ:** ಮೈಸೂರು ದಸರಾ ಮಹೋತ್ಸವದಲ್ಲಿ ಕರ್ತವ್ಯ ನಿರ್ವಹಿಸುವುದೇ ವಿಶೇಷ. ಅದರಲ್ಲೂ ಜಂಬೂ ಸವಾರಿ ದಿನದಂದು ಜನಸಾಗರ ನೋಡಿದರೆ, ಆಶ್ಚರ್ಯದ ಜೊತೆಗೆ ನಮ್ಮಲ್ಲಿ ಭಕ್ತಿ ಹೆಚ್ಚಾಗುತ್ತದೆ. ಹೇಗಾದರೂ ಮಾಡಿ ಅಂಬಾರಿ ಮುಂದೆ ಒಂದು ಫೋಟೋ ಕ್ಲಿಕ್ಕಿಸಿಕೊಳ್ಳಬೇಕು ಎನ್ನಿಸುತ್ತದೆ ಎಂದು ತಮ್ಮೂರಿಗೆ ವಾಪಸ್ ತೆರಳುತ್ತಿದ್ದ ಕೆಲ ಪೊಲೀಸ್ ಸಿಬ್ಬಂದಿ 'ಮೈಸೂರು ಮಿತ್ರ'ನೊಂದಿಗೆ ತಮ್ಮ ಅನುಭವ ಹಂಚಿಕೊಂಡರು.

ಪ್ರಶಿಕ್ಷಣಾರ್ಥಿಯಾಗಿ ಇನ್ನೆರಡು ತಿಂಗಳಲ್ಲಿ ಕರ್ತವ್ಯಕ್ಕೆ ಹಾಜರಾಗುವ ಮುನ್ನವೇ ದಸರಾ ಬಂದೋಬಸ್ತ್‌ಗೆ ಬಂದಿದ್ದ ಕಲಬುರ್ಗಿಯ ತರಬೇತಿ ನಿರತ ಪೊಲೀಸ್ ಕಾನ್‌ಸ್ಟೇಬಲ್ ಶರಣಕುಮಾರ್ ಮಾತನಾಡಿ, ಇದು ನನ್ನ ಮೊದಲನೇ ದಸರಾ ಬಂದೋಬಸ್ತ್ ಡ್ಯೂಟಿ. ಇನ್ನೂ ಎರಡು ತಿಂಗಳು ಪೊಲೀಸ್ ತರಬೇತಿ ಬಾಕಿ ಇದೆ. ಇದರ ನಡುವೆ ದಸರಾ ಬಂದೋಬಸ್ತ್‌ಗಾಗಿ ಮೈಸೂರಿಗೆ ಬಂದೆವು. ದಸರಾ ನೋಡುವುದು, ಇಲ್ಲಿ ಕೆಲಸ ಮಾಡುವುದು ನಿಜಕ್ಕೂ ಖುಷಿಯಾಗುತ್ತದೆ ಎಂದರು.

ಸೆ.29ಕ್ಕೆ ಬಂದೆವು(ಎರಡನೇ ಹಂತ) ಬಸ್ ಸ್ಟ್ಯಾಂಡ್, ಹಾರ್ಡಿಂಗ್ ಸರ್ಕಲ್‌ನಲ್ಲಿ ಡ್ಯೂಟಿಗೆ ಹಾಕಿದ್ದರು. ದಸರಾ ಲೈಟಿಂಗ್ಸ್ ಸೂಪರ್. ಡ್ಯೂಟಿ ಟೈಂನಲ್ಲಿ ಜನರ ಸಹಕಾರ ಉತ್ತಮವಾಗಿತ್ತು. ಗಲಾಟೆ, ಜಗಳ ಎನ್ನುವುದು ಎಲ್ಲಿಯೂ ಕಂಡು ಬರಲಿಲ್ಲ ಎಂದು ಸಂತಸ ವ್ಯಕ್ತಪಡಿಸಿದರು.

ಮೊದಲ ಬಾರಿಗೆ ದಸರಾ ಬಂದೋಬಸ್ತ್‌ಗೆ ಹೊಳೆನರಸೀಪುರದಿಂದ ಬಂದಿದ್ದ ಹೋಂ ಗಾರ್ಡ್ ಲಕ್ಷ್, ದಸರಾ ತುಂಬಾ ಚೆನ್ನಾಗಿತ್ತು ಅರಮನೆ ಒಳಗೆ ಕೆಲವರಿಗೆ ಬಿಡದಿರುವುದನ್ನು ಕಂಡು ಬೇಸರವಾಯಿತು. ಒಟ್ಟಿನಲ್ಲಿ ದಸರಾದ ಎಲ್ಲಾ ಕಾರ್ಯಕ್ರಮಗಳ ವ್ಯವಸ್ಥೆ ಅಚ್ಚುಕಟ್ಟಾಗಿತ್ತು ಎಂದು ಸಂತೋಷದಿಂದಲೇ ಪ್ರತಿಕ್ರಿಯಿಸಿದರು.

## ನಾಡಹಬ್ಬ ಸವಿ ಸವಿ ನೆನಪಿನೊಂದಿಗೆ ಮರಳಿದ ಸಿಬ್ಬಂದಿ ವರ್ಗ



ದಸರಾ ಬಂದೋಬಸ್ತ್ ಕರ್ತವ್ಯ ಮುಗಿಸಿ ತಮ್ಮ ತಮ್ಮ ಜಿಲ್ಲೆಗಳಿಗೆ ಮರಳುತ್ತಿರುವ ಪೊಲೀಸ್ ಹಾಗೂ ಹೋಂಗಾರ್ಡ್ ಸಿಬ್ಬಂದಿ.

### ಧನ್ಯವಾದಗಳು...!

ಬಂದೋಬಸ್ತ್ ತುಂಬಾ ಚೆನ್ನಾಗಿತ್ತು. ಹೊರಗಡೆಯಿಂದ ಬಂದವರು ತಮಗೆ ನೀಡಿದ ಜವಾಬ್ದಾರಿಯನ್ನು ಅತ್ಯುತ್ತಮವಾಗಿ ನಿರ್ವಹಿಸಿದ್ದಾರೆ. ನಮ್ಮವರು ಅವರಿಗೆ ಪೂರಕವಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಜಿಲ್ಲಾಡಳಿತದ ಎಲ್ಲಾ ಇಲಾಖೆಗಳ ಟೀಂ ವರ್ಕ್‌ನಿಂದಾಗಿ ಈ ವರ್ಷದ ದಸರಾ ಯಶಸ್ವಿಯಾಗಿದ್ದು, ಎಲ್ಲರಿಗೂ ಧನ್ಯವಾದ ತಿಳಿಸಲು ಬಯಸುತ್ತೇನೆ.

- ಸೀಮಾ ಲಾಟ್ಕರ್.
ಆಯುಕ್ತರು, ಮೈಸೂರು ನಗರ ಪೊಲೀಸ್

# ಬಿಜೆಪಿ ಮುಖಂಡರೊಂದಿಗೆ ಕಾಂತಾರ ಚಾಪ್ಟರ್–1 ಚಿತ್ರ ವೀಕ್ಷಿಸಲು

## ಡಿಆರ್‌ಸಿ ಒಂದು ಸ್ಕ್ರೀನ್‌ನ ಪೂರ್ಣ ಸೀಟು ಖರೀದಿಸಿದ ಪ್ರತಾಪ್ ಸಿಂಹ!





Screen 2

| Class | Tkts | Price | Amount |
|---|---|---|---|
| Luxury | 15 | 450.00 | 6,750.00 |
| Premium | 131 | 350.00 | 45,850.00 |
| Standard | 51 | 320.00 | 16,320.00 |
| Total | 197 | | 68,920.00 |

ಮೈಸೂರು, ಅ.3(ಜಿಎ)–ಕಾಂತಾರ ಚಾಪ್ಟರ್–1 ಚಿತ್ರವನ್ನು ಬಿಜೆಪಿ ಕಾರ್ಯಕರ್ತರೊಂದಿಗೆ ವೀಕ್ಷಿಸಲು ಮಾಜಿ ಸಂಸದ ಪ್ರತಾಪ್ ಸಿಂಹ ಮಲ್ಟಿಪ್ಲೆಕ್ಸ್‌ನಲ್ಲಿ ಒಂದು ಸ್ಕ್ರೀನ್‌ನ ಪೂರ್ಣ ಸೀಟು ಬುಕ್ ಮಾಡಿದ್ದಾರೆ.

ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ ಕಾಂತಾರ ಚಾಪ್ಟರ್–1 ಚಿತ್ರ ಗುರುವಾರ ಬಿಡುಗಡೆಗೊಂಡು ಎಲ್ಲೆಡೆ ಭರ್ಜರಿ ಪ್ರದರ್ಶನ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರತಾಪ್‌ಸಿಂಹ ಬಿಜೆಪಿ ಕಾರ್ಯಕರ್ತರೊಂದಿಗೆ ಚಿತ್ರ ವೀಕ್ಷಿಸಲು ಶನಿವಾರ ಸಂಜೆ 4 ಗಂಟೆಗೆ ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಡಿಆರ್‌ಸಿ ಸಿನಿಮಾಸ್ ಮಲ್ಟಿಪ್ಲೆಕ್ಸ್‌ನಲ್ಲಿನ ಒಂದು ಸ್ಕ್ರೀನ್‌ನ ಎಲ್ಲಾ ಸೀಟು ಬುಕ್ ಮಾಡಿ ಸಾಮಾಜಿಕ ಜಾಲತಾಣದ ಮೂಲಕ ಆಹ್ವಾನಿಸಿದ್ದಾರೆ.

'ನಾಳೆ 4 ಗಂಟೆಗೆ ಕಾರ್ಯಕರ್ತರೆಲ್ಲ ಒಗ್ಗೂಡಿ ಕಾಂತಾರ ಚಾಪ್ಟರ್–1 ನೋಡೋಣ. ಡಿಆರ್‌ಸಿಯಲ್ಲಿ ಫುಲ್ ಸ್ಕ್ರೀನ್ ಬುಕ್ ಮಾಡಿದ್ದೇನೆ' ಎಂದು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿರುವ ಪ್ರತಾಪ್ ಸಿಂಹ, 450 ರೂ. ಮೌಲ್ಯದ ಲಕ್ಸುರಿ 15, 350 ರೂ ಮೌಲ್ಯದ ಪ್ರೀಮಿಯರ್ 131, 320 ರೂ. ಮೌಲ್ಯದ ಸ್ಟಾಂಡರ್ಡ್ 51 ಸೇರಿದಂತೆ 197 ಟಿಕೆಟ್‌ಗಳನ್ನು ಒಟ್ಟು 68,920 ರೂ. ನೀಡಿ ಖರೀದಿಸಿದ್ದು, ಅದರ ಫೋಟೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಕಾಂತಾರ ಚಾಪ್ಟರ್–1 ಚಿತ್ರದ ಬಗ್ಗೆ ಎಲ್ಲೆಡೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಈ ಬಗ್ಗೆ ಸಾಕಷ್ಟು ಜನ ನೀವು ಚಿತ್ರ ನೋಡಲ್ವ ಎಂದು ಕೇಳಿದರು. ಮೊದಲೇ ನಟ ರಿಷಬ್ ನನ್ನ ಆತ್ಮೀಯ ಗೆಳೆಯ. ಅವರ ಚಿತ್ರ ಮಿಸ್ ಮಾಡುವುದಿಲ್ಲ. ಎಲ್ಲೆಡೆ ಟಿಕೆಟ್ ಬುಕ್ ಆಗಿದ್ದವು. ಈ ಹಿನ್ನೆಲೆಯಲ್ಲಿ ಡಿಆರ್‌ಸಿ ಮುಖ್ಯಸ್ಥರ ಬಳಿ ಮನವಿ ಮಾಡಿಕೊಂಡು ಒಂದು ಸ್ಕ್ರೀನ್‌ನಲ್ಲಿ ಇದ್ದ ಹಿಂದಿ ಚಿತ್ರವನ್ನು ತೆಗೆಸಿ ಕಾಂತಾರ ಹಾಕಿಸಿಕೊಂಡು ನೋಡುತ್ತಿದ್ದೇವೆ ಎಂದು ಪ್ರತಾಪ್ ಸಿಂಹ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಾನು ಮಾತ್ರವಲ್ಲ, ಮೈಸೂರಿನ ಎಲ್ಲಾ ವಿಧಾನಸಭಾ ಕ್ಷೇತ್ರ, ಬಿಜೆಪಿಯ ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಒಟ್ಟಿಗೆ ಸಿನಿಮಾ ನೋಡಲು ನಿರ್ಧರಿಸಿ, ಮಲ್ಟಿಪ್ಲೆಕ್ಸ್‌ನಲ್ಲಿ ಸ್ಕ್ರೀನ್ ಬುಕ್ ಮಾಡಿದ್ದೇನೆ. ಸಾಮಾಜಿಕ ಜಾಲತಾಣದಲ್ಲಿ ಈ ವಿಷಯ ಹಂಚಿಕೊಂಡ ನಂತರ ಮತ್ತಷ್ಟು ಬೇಡಿಕೆ ಹೆಚ್ಚಳವಾಗಿದ್ದು, ಮುಂದಿನ ದಿನಗಳಲ್ಲಿ ಮತ್ತೊಂದು ಶೋ ಬುಕ್ ಮಾಡಿ ಎಲ್ಲರೊಟ್ಟಿಗೆ ಇದೇ ಸಿನಿಮಾ ವೀಕ್ಷಿಸುತ್ತೇನೆ ಎಂದರು.

# ಮುಕ್ತ ವಿವಿಯಿಂದ ಗಾಂಧಿ ಜಯಂತಿ



ಕೆಎಸ್‌ಒಯುನಲ್ಲಿ ಗಾಂಧಿ ಜಯಂತಿ ಆಚರಣೆ

ಮೈಸೂರು, ಅ.3(ಎಂಕೆ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ಕೆಎಸ್‌ಒಯು)ದ ಗಾಂಧಿ ಅಧ್ಯಯನ ಪೀಠದ ವತಿಯಿಂದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 156ನೇ ಜಯಂತಿ ಆಚರಿಸಲಾಯಿತು.

ಗಾಂಧೀಜಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದ ಕೆಎಸ್‌ಒಯು ಡೀನ್(ಶೈಕ್ಷಣಿಕ) ಪ್ರೊ.ಎಂ.ರಾಮನಾಥ್ ನಾಯ್ಡು ಮಾತನಾಡಿ, ಮಹಾತ್ಮ ಗಾಂಧೀಜಿಯವರ ತತ್ವಗಳಾದ ಅಹಿಂಸೆ, ಸಮಾನತೆ ಮತ್ತು ಗ್ರಾಮೀಣ ಸ್ವರಾಜ್ಯ ಸ್ಥಾಪನೆ ನಾವೆಲ್ಲರೂ ಶ್ರಮಿಸಬೇಕು. ಗಾಂಧೀಜಿಯವರ ತತ್ವ–ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಪ್ರಸ್ತುತ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ಗಾಂಧೀಜಿಯವರ ಆದರ್ಶಗಳನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯವಾಗಿದೆ. ಎಲ್ಲಾ ಸಮುದಾಯದವರು ನೆಮ್ಮದಿಯಿಂದ ಬದುಕಬೇಕಾದರೆ ಅದು ಅಹಿಂಸೆಯಿಂದ ಮಾತ್ರ ಸಾಧ್ಯ ಎಂದರು.

ಮಹಾತ್ಮ ಗಾಂಧಿ ಅಧ್ಯಯನ ಪೀಠದ ನಿರ್ದೇಶಕಿ ಪ್ರೊಆರ್.ಹೆಚ್.ಪವಿತ್ರ ಮಾತನಾಡಿ, ಗಾಂಧೀಜಿಯವರ ಜೀವನ, ಕೃತಿಗಳು ಮತ್ತು ಅವರ ಸಂದೇಶ, ಅವರ ಚಿಂತನೆಗಳು ಸಮಾಜದ ಪ್ರತಿಯೊಂದು ಸ್ತರಕ್ಕೂ ದಾರಿದೀಪವಾಗಿವೆ ಎಂದು ತಿಳಿಸಿದರು.

ಕೆಎಸ್‌ಒಯು ಪರೀಕ್ಷಾಂಗ ಕುಲಸಚಿವ ಡಾ.ಸಿ.ಎಸ್.ಆನಂದ್ ಕುಮಾರ್, ಡಾ.ಶರಣಮ್ಮ ಸೇರಿದಂತೆ ಕೆಎಸ್‌ಒಯು ಬೋಧಕ–ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಪುಷ್ಪಾರ್ಚನೆ ಮಾಡಿ, ಗೌರವ ಸಲ್ಲಿಸಿದರು.

## 50 ದಿನಗಳ ವಿಶೇಷ ತರಬೇತಿ ಕಾರ್ಯಕ್ರಮ

ಮೈಸೂರು,ಅ.3–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಲ್ಲಿ ಬ್ಯಾಂಕಿಂಗ್ ಮತ್ತು ಕೇಂದ್ರ ಸರ್ಕಾರದ ಹುದ್ದೆಗಳ ನೇಮಕಾತಿ ಪರೀಕ್ಷೆಗಳಿಗೆ 50 ದಿನಗಳ ವಿಶೇಷ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಆಸಕ್ತರು ಅ.10ರೊಳಗಾಗಿ ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಲ್ಲಿ ತಮ್ಮ ಹೆಸರನ್ನು ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯೊಳಗಾಗಿ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ 0821–2515944, 9964760090 ಅನ್ನು ಸಂಪರ್ಕಿಸಬಹುದು ಎಂದು ಕರಾಮುವಿ ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅ.6ಕ್ಕೆ ಚಾಮುಂಡೇಶ್ವರಿ ರಥೋತ್ಸವ; ಅ.8ಕ್ಕೆ ತೆಪ್ಪೋತ್ಸವ

ಮೈಸೂರು, ಅ.3(ಎಂಟಿವೈ)– ನಾಡಹಬ್ಬ ದಸರಾ ಹಿನ್ನೆಲೆಯಲ್ಲಿ ಚಾಮುಂಡಿ ಬೆಟ್ಟದಲ್ಲಿ ಅ.6ರಂದು ರಥೋತ್ಸವ ಹಾಗೂ ಅ.8ರಂದು ತೆಪ್ಪೋತ್ಸವ ನಡೆಯಲಿದ್ದು, ಅದಕ್ಕಾಗಿ ಸಿದ್ಧತೆ ನಡೆದಿದೆ.




ದಸರಾ ಮಹೋತ್ಸವದ ಜಂಬೂ ಸವಾರಿ ನೆರವೇರಿದ ನಂತರ ನಿಗದಿತ ಮುಹೂರ್ತದಲ್ಲಿ ಚಾಮುಂಡಿಬೆಟ್ಟದಲ್ಲಿ ಭವ್ಯ ರಥೋತ್ಸವ ನಡೆಸುವ ಸಂಪ್ರದಾಯವಿದೆ. ಈಗಾಗಲೇ ದೇವಾಲಯದ ಮುಂಭಾಗ ದೊಡ್ಡ ರಥವನ್ನು ಅಣಿಗೊಳಿಸಲಾಗಿದ್ದು, ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಅ.6ರಂದು ಬೆಳಗ್ಗೆ 9.36 ರಿಂದ 9.58ರೊಳಗೆ ಸಲ್ಲುವ ಶುಭ ಲಗ್ನದಲ್ಲಿ ಚಾಮುಂಡೇಶ್ವರಿ ದೇವಾಲಯದ ಮುಂಭಾಗ ರಥೋತ್ಸವಕ್ಕೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಲಿದ್ದಾರೆ. ಈ ಧಾರ್ಮಿಕ ಉತ್ಸವದಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ.

ರಥೋತ್ಸವಕ್ಕೆ ಚಾಲನೆ ದೊರೆತ ಬಳಿಕ ಮಂಗಳವಾದ್ಯ, ಪೊಲೀಸ್ ಬ್ಯಾಂಡ್ ವಾದನ ಹಾಗೂ ವಿವಿಧ ಸಾಂಸ್ಕೃತಿಕ ಕಲಾ ತಂಡಗಳು ರಥೋತ್ಸವದಲ್ಲಿ ಪಾಲ್ಗೊಳ್ಳಲಿದ್ದು, ಫಿರಂಗಿ ದಳದ ಸಿಬ್ಬಂದಿ ಚಿಕ್ಕ ಸಿಡಿಮದ್ದು ಟ್ರ್ಯಾಲಿ ಬಳಸಿ ರಥೋತ್ಸವದ ಮಾರ್ಗದ ಉದ್ದಕ್ಕೂ ಸಿಡಿಮದ್ದು ಸಿಡಿಸಲಿದ್ದಾರೆ. ದೇವಾಲಯ ಒಂದು ಸುತ್ತು ಪ್ರದಕ್ಷಿಣೆ ಹಾಕಲು ಒಂದು ಗಂಟೆ ಸಮಯ ಬೇಕಾಗಲಿದ್ದು, ಅಪಾರ ಸಂಖ್ಯೆಯ ಭಕ್ತರು ಚಾಮುಂಡಿಬೆಟ್ಟಕ್ಕೆ ಆಗಮಿಸಿ ಇಷ್ಟಾರ್ಥ ಸಿದ್ದಿಗಾಗಿ ಪ್ರಾರ್ಥಿಸಿ, ರಥಕ್ಕೆ ಹಣ್ಣು–ಜವನ ಎಸೆದು ಪ್ರಾರ್ಥಿಸಲಿದ್ದಾರೆ.

ರಥೋತ್ಸವ ಜರುಗಿದ ಎರಡು ದಿನದ ನಂತರ ಅ.8ರಂದು ಸಂಜೆ 6 ಗಂಟೆ ನಂತರ ಚಾಮುಂಡಿಬೆಟ್ಟದ ದೇವಿಕೆರೆಯಲ್ಲಿ ಚಾಮುಂಡೇಶ್ವರಿ ತಾಯಿಯ ಉತ್ಸವ ಮೂರ್ತಿಗೆ ತೆಪ್ಪೋತ್ಸವ ಸೇವೆ ಜರುಗಲಿದೆ. ತೆಪ್ಪೋತ್ಸವದ ವೇಳೆ ರಾಜವಂಶಸ್ಥರು ಪಾಲ್ಗೊಳ್ಳಲಿದ್ದಾರೆ. ತೆಪ್ಪೋತ್ಸವದ ಮೂಲಕ ಈ ಸಾಲಿನ ದಸರಾ ಮಹೋತ್ಸವದ ಧಾರ್ಮಿಕ ಕಾರ್ಯ ಸಂಪನ್ನಗೊಳ್ಳಲಿದೆ.

## ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಅಭಿನಂದನೆ




ಮೈಸೂರು ಲ್ಯಾಕ್ ಅಂಡ್ ಪೇಯಿಂಟ್ ನಿಗಮಕ್ಕೆ ನೂತನ ಅಧ್ಯಕ್ಷರಾಗಿ ನೇಮಕಗೊಂಡ ಪಿರಿಯಾಪಟ್ಟಣ ಗಣೇಶ್ ಅವರು ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ.ವಿಜಯ್ ಕುಮಾರ್, ಆನಂದ್, ಸುನಿಲ್, ಜವರೇಗೌಡ, ಪರಶಿವಮೂರ್ತಿ, ಶಿವಪ್ರಸಾದ್, ಸಂತೋಷ್, ಪ್ರಕಾಶ್ ಇತರೆ ಪದಾಧಿಕಾರಿಗಳು ಅಭಿನಂದಿಸಿದರು.

## ಅಭಿನಂದನೆ



ದಿ ಮೈಸೂರ್ ಕೋ ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾಗಿ ಆಯ್ಕೆಯಾದ ವಿಕಾಶ್.ವೈ ಅವರನ್ನು ಹೆಬ್ಬಾಳ್ ಸತೀಶ್, ದೀಪಕ್, ಮುಖಂಡರಾದ ನರಸಿಂಹೇಗೌಡ, ಪುರುಷೋತ್ತಮ್, ಭರತ್ , ಸಮರ್ಥ್ ಎಂ.ಗೌಡ , ರಾಘು, ರಿಷಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರು, ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಎಸ್‌ಬಿಎಂ ಮಂಜು ಉಪಸ್ಥಿತರಿದ್ದರು.

# ದಸರಾ ಗೋಲ್ಡ್ ಕಾರ್ಡ್ ಖರೀದಿಸಿದರೂ ಅರಮನೆ ಆವರಣಕ್ಕೆ ಪ್ರವೇಶ ಸಿಗದವರ ಹಣ ಮರುಪಾವತಿಸಿ

### ವಿಪಕ್ಷ ನಾಯಕ ಅಶೋಕ್ ಆಗ್ರಹ

ಬೆಂಗಳೂರು, ಅ.3(ಕೆಎಂಶಿ)–ಮೈಸೂರು ದಸರಾ ಹಾಗೂ ಜಂಬೂ ಸವಾರಿ ವೀಕ್ಷಣೆಗೆ 6,500 ರೂ. ನೀಡಿ ಗೋಲ್ಡ್ ಕಾರ್ಡ್ ಪಡೆದರೂ ಒಳ ಪ್ರವೇಶಿಸಲು ಸಾಧ್ಯವಾಗದವರಿಗೆ ಹಣ ಹಿಂತಿರುಗಿಸುವಂತೆ ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದ್ದಾರೆ.



ಹಣ ಪಾವತಿಸಿಯೂ ಪ್ರವೇಶ ಸಿಗದೆ ಪ್ರವಾಸಿಗರು ಪರದಾಡಿದ ಘಟನೆ ಕಾಂಗ್ರೆಸ್ ಸರ್ಕಾರದ ದಿವ್ಯ ನಿರ್ಲಕ್ಷ್ಯ ಮತ್ತು ಅಸಡ್ಡೆಯನ್ನು ತೋರುತ್ತದೆ.

ಪ್ರವೇಶ ನೀಡಲು ಸಾಧ್ಯವಿಲ್ಲ ಎಂದ ಮೇಲೆ ಗೋಲ್ಡ್ ಕಾರ್ಡ್ ಏಕೆ ವಿತರಿಸಬೇಕಿತ್ತು. ಲಭ್ಯವಿರುವ ಸ್ಥಳಾವಕಾಶಕ್ಕಿಂತ ಹೆಚ್ಚು ಗೋಲ್ಡ್ ಕಾರ್ಡ್ ಮಾರಾಟ ಮಾಡಿದ ನಿರ್ಧಾರ ಯಾರದ್ದು, ಇದರ ನಿರ್ವಹಣೆ ಜವಾಬ್ದಾರಿ ಯಾರದು? ಎಂಬೆಲ್ಲಾ ಪ್ರಶ್ನೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರಿಸಬೇಕು. ಟಿಕೆಟ್ ಪಡೆದ ಮೇಲೂ ಪ್ರವೇಶ ಸಿಗದ ಪ್ರವಾಸಿಗರಲ್ಲಿ ಕ್ಷಮೆಯಾಚಿಸಿ ಹಣ ಹಿಂತಿರುಗಿಸಬೇಕು ಎಂದು ಟ್ವೀಟ್ ಮೂಲಕ ಅಶೋಕ್ ಒತ್ತಾಯಿಸಿದ್ದಾರೆ.

# ತಮ್ಮ ತಮ್ಮ ಊರುಗಳಿಗೆ ಮರಳಿದ ಜಂಬೂ ಸವಾರಿಯಲ್ಲಿ ಕಲಾ ಸಿರಿವಂತಿಕೆ ಪ್ರದರ್ಶಿಸಿದ ಕಲಾ ತಂಡಗಳು



### ಒಟ್ಟು 64 ಸ್ತಬ್ಧ ಚಿತ್ರಗಳು...

ಜಂಬೂಸವಾರಿಯಲ್ಲಿ ಸಾಗುವ ಕಲಾತಂಡಗಳು ಹಾಗೂ ಸ್ತಬ್ಧಚಿತ್ರಗಳ ಮಾಹಿತಿ ಕಾರ್ಡ್‌ನಲ್ಲಿ 90 ಕಲಾತಂಡಗಳು ಹಾಗೂ 58 ಸ್ತಬ್ಧಚಿತ್ರಗಳ ಮಾಹಿತಿ ಮಾತ್ರ ಮುದ್ರಣವಾಗಿತ್ತು. ಒಟ್ಟಾರೆ 112 ಕಲಾತಂಡಗಳು ಹಾಗೂ 64 ಸ್ತಬ್ಧ ಚಿತ್ರಗಳು ಮೆರವಣಿಗೆಯಲ್ಲಿ ಸಾಗಿದವು.

- ಡಾ. ಎಂ.ಡಿ.ಸುದರ್ಶನ್.
ಮೆರವಣಿಗೆ ಉಪಸಮಿತಿ ಸಮನ್ವಯಾಧಿಕಾರಿ

ಮೈಸೂರು, ಅ.3(ಎಂಕೆ)– ದಸರಾ ಮಹೋತ್ಸವದ ಜನಾಕರ್ಷಣೆಯ 'ಜಂಬೂ ಸವಾರಿ' ಅದ್ದೂರಿ ಮೆರವಣಿಗೆಗೆ ಸಾಂಸ್ಕೃತಿಕ ಕಲಾ ಮೆರಗು ನೀಡಲು ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ನೂರಕ್ಕೂ ಅಧಿಕ ಕಲಾತಂಡಗಳ ಸಾವಿರಾರು ಕಲಾವಿದರು ಶುಕ್ರವಾರ ತಮ್ಮ ಸ್ವಸ್ಥಾನಗಳಿಗೆ ಮರಳಿದರು.

ಆಯುಧ ಪೂಜೆಯ ದಿನವೇ ಮೈಸೂರಿಗೆ ಆಗಮಿಸಿದ್ದ ಕಲಾವಿದರಿಗೆ ನಂಜರಾಜ ಬಹದ್ದೂರ್ ಛತ್ರ, ಆಲಮ್ಮ ಛತ್ರ, ಯೂತ್ ಹಾಸ್ಟೆಲ್ ಸೇರಿದಂತೆ ನಾಲ್ಕು ಕಡೆ ವಸತಿ ಹಾಗೂ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಈ ವರ್ಷದ ದಸರಾ ಜಂಬೂ ಸವಾರಿಯಲ್ಲಿ 112 ಕಲಾತಂಡಗಳ 1470 ಮಂದಿ ಕಲಾವಿದರು ಭಾಗವಹಿಸಿದ್ದರು. ಒಬ್ಬರಿಗೆ ದಿನವೊಂದಕ್ಕೆ 1750 ರೂ. ಜೊತೆಗೆ ಪ್ರಯಾಣ ಭತ್ಯೆ ಹಾಗೂ ಊಟ ಮತ್ತು ವಸತಿ ಸೌಲಭ್ಯ ವ್ಯವಸ್ಥೆ ಮಾಡಲಾಗಿತ್ತು ಎಂದು ಜಂಬೂ ಸವಾರಿ ಮೆರವಣಿಗೆ ಉಪಸಮಿತಿಯ ಸಮನ್ವಯಾಧಿಕಾರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕರ್ನಾಟಕ ಎಲ್ಲಾ ಜಿಲ್ಲೆಗಳ ಕಲಾವಿದರಿಗೂ ದಸರಾ ಜಂಬೂ ಸವಾರಿಯಲ್ಲಿ ಅವಕಾಶ ಮಾಡಿಕೊಡಲಾಗಿದೆ. ಮುಖ್ಯವಾಗಿ ಹಳೇ ಮೈಸೂರು ಭಾಗದ ಕಲಾವಿದರಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಹಾಗೆಯೇ ವಿಶೇಷ ಕಲಾತಂಡಗಳನ್ನು ಗುರ್ತಿಸಿ, ಅವಕಾಶ ನೀಡಲಾಗಿತ್ತು ಎಂದು ಮೆರವಣಿಗೆ ಉಪಸಮಿತಿ ಕಾರ್ಯದರ್ಶಿಯೂ ಆದ ವಿಜಯನಗರ ಉಪವಿಭಾಗದ ಎಸಿಪಿ ಜಿ.ರವಿಪ್ರಸಾದ್ ಮಾಹಿತಿ ನೀಡಿದರು.

ಮೈಸೂರು ಭಾಗದಲ್ಲಿನ ವೀರಗಾಸೆ ಕಲಾ ಪ್ರಕಾರವನ್ನು ದಾವಣಗೆರೆ, ಗದಗ ಭಾಗದಲ್ಲಿ 'ಪುರವಂತಿಕೆ' ಎನ್ನಲಾಗುತ್ತದೆ. ಆದರೆ, ವೀರಗಾಸೆಗೂ, ಪುರವಂತಿಕೆಗೂ ವಸ್ತ್ರಾಲಂಕಾರ, ನೃತ್ಯ ಶೈಲಿಯಲ್ಲಿ ವ್ಯತ್ಯಾಸವಿದ್ದು, ಮೆರವಣಿಗೆ ಉಪ ಸಮಿತಿಯ ಎಲ್ಲಾ ಪದಾಧಿಕಾರಿಗಳು ಚರ್ಚಿಸಿ ಕಲಾತಂಡಗಳನ್ನು ಆಯ್ಕೆ ಮಾಡಲಾಗಿತ್ತು ಎಂದು ತಿಳಿಸಿದರು.

**ಯಾವುದೇ ತೊಂದರೆಯಾಗಿಲ್ಲ:** ಕಲಾವಿದರಿಗೆ ಊಟದ ವ್ಯವಸ್ಥೆ ಹಾಗೂ ಪ್ರಯಾಣದಲ್ಲಿ ಯಾವುದೇ ತೊಂದರೆ ಉಂಟಾಗದಂತೆ ನಿರ್ವಹಿಸಲಾಗಿದೆ. ದಸರಾ ಜಂಬೂ ಸವಾರಿ ಮುಗಿದ ನಂತರ ರಾತ್ರಿಯೇ ಸಾಕಷ್ಟು ಕಲಾವಿದರು ತಮ್ಮ ತಮ್ಮ ಊರಿನತ್ತ ಪ್ರಯಾಣ ಬೆಳೆಸಿದರೆ, ಇಂದು(ಶುಕ್ರವಾರ) ಬೆಳಗ್ಗೆಯಿಂದಲೂ ಸಾರಿಗೆ ಬಸ್ ಹಾಗೂ ತಮ್ಮ ವಾಹನಗಳಲ್ಲಿ ತೆರಳಿದ್ದಾರೆ ಎಂದರು.

ನಂದೀಧ್ವಜದಿಂದ ಹಿಡಿದು ವೀರಗಾಸೆ, ಹೆಜ್ಜೆ ಮೇಳ, ಗೊರವರ ಕುಣಿತ, ದಟ್ಟಿ ಕುಣಿತ, ಲೆಂಗಿ ನೃತ್ಯ, ಕಂಸಾಳೆ, ಕೋಲಾಟ, ಪೂಜಾ ಕುಣಿತ, ಲಂಬಾಣಿ ನೃತ್ಯ, ಪುರವಂತಿಕೆ, ಉರುಮೆ ವಾದನ, ಸರಪಣಿ ನೃತ್ಯ, ಚಿಲಿಪಿಲಿ ಗೊಂಬೆ, ಬೀಸು ಕಂಸಾಳೆ, ಝಾಂಜ್ ಪಥಕ್, ರಾಮಫಲಕ ನೃತ್ಯ, ಕರಗ ಕೋಲಾಟ, ಹಕ್ಕಿಪಿಕ್ಕಿ ನೃತ್ಯ, ಕಥಕಳಿ ಗೊಂಬೆ, ಮರಗಾಲು, ತಪ್ಪಟಗುಲು, ವೀರ ಮಕ್ಕಳ ಕುಣಿತ, ತಮಟೆ ವಾದನ, ಬೇಡರ ವೇಷ, 'ಗಾರುಡಿ ಗೊಂಬೆ' ಸೇರಿದಂತೆ ರಾಜ್ಯದಲ್ಲಿನ ಎಲ್ಲಾ ಪ್ರಕಾರದ ಕಲಾತಂಡಗಳಿಗೂ ಅವಕಾಶ ಮಾಡಿಕೊಡಲಾಗಿತ್ತು ಎಂದು ಹೇಳಿದರು.

# ಮೈಸೂರು ದಸರಾದ 11 ದಿನದಲ್ಲಿ ಸಾವಿರ ಟನ್ ಕಸ ಸಂಗ್ರಹಣೆ

## ಪಾಲಿಕೆ ಪೌರ ಕಾರ್ಮಿಕರ 'ಯಶಸ್ವಿ ಸ್ವಚ್ಛತಾ' ಕಾರ್ಯ



ರಾಜಮಾರ್ಗದಲ್ಲಿ ಕಸ ವಿಲೇವಾರಿ ಮಾಡುತ್ತಿರುವ ನಗರಪಾಲಿಕೆ ಪೌರಕಾರ್ಮಿಕರು

ಮೈಸೂರು, ಅ.3(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಹನ್ನೊಂದು ದಿನದ ಅವಧಿಯಲ್ಲಿ ಮೈಸೂರು ನಗರದಾದ್ಯಂತ ಸುಮಾರು 1000 ಟನ್ ಕಸ ಸಂಗ್ರಹಣೆಯಾಗಿದೆ.

ದಸರಾ ಸ್ವಚ್ಛತಾ ನಿರ್ವಹಣೆಗಾಗಿ ನಗರ ಪಾಲಿಕೆ ವತಿಯಿಂದ ಹಾಲಿ ಇರುವ ಪೌರಕಾರ್ಮಿಕರ ಜೊತೆಗೆ ಹೆಚ್ಚುವರಿಯಾಗಿ 500 ಮಂದಿ ಪೌರಕಾರ್ಮಿಕರನ್ನು ನಿಯೋಜಿಸಲಾಗಿತ್ತು. ದಿನನಿತ್ಯ ಮೂರು ಪಾಳಿಯಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸಿದ ಪೌರಕಾರ್ಮಿಕರು, ದಸರಾ ಆಹಾರ ಮೇಳ, ಫಲ–ಪುಷ್ಪ ಪ್ರದರ್ಶನ, ಯುವ ಸಂಭ್ರಮ ಇನ್ನಿತರೆ ದಸರಾ ಕಾರ್ಯಕ್ರಮಗಳಲ್ಲಿ ಸ್ವಚ್ಛತೆ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ಪ್ರತಿದಿನ ಮೈಸೂರಿನಲ್ಲಿ 50 ರಿಂದ 60 ಟನ್ ಕಸ ಸಂಗ್ರಹವಾದರೆ, ದಸರಾ ಸಂದರ್ಭದಲ್ಲಿ ಪ್ರತಿನಿತ್ಯ 90 ರಿಂದ 100 ಟನ್ ಕಸ ಸಂಗ್ರಹಣೆಯಾಗಿದೆ. ಅದರಲ್ಲೂ ಆಹಾರ ಮೇಳದಲ್ಲಿ ಜನಸಂದಣಿ ಹೆಚ್ಚಾಗಿದ್ದು, ಒಂದೇ ಜಾಗದಲ್ಲಿ 300 ಟನ್‌ಗೂ ಅಧಿಕ ಕಸ ಸಂಗ್ರಹವಾಗಿದೆ ಎಂದು ನಗರ ಪಾಲಿಕೆ ಆರೋಗ್ಯಾಧಿಕಾರಿ ಡಾ.ವೆಂಕಟೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

**ರಾಜಮಾರ್ಗದಲ್ಲಿ ಸ್ವಚ್ಛತೆ:** ಜಗತ್ ಪ್ರಸಿದ್ಧ 'ಜಂಬೂ ಸವಾರಿ' ಸಾಗುವ ಮಾರ್ಗದಲ್ಲಿ ಬಿದ್ದಿದ್ದ ರಾಶಿ ರಾಶಿ ಕಸವನ್ನು ಗುರುವಾರ ರಾತ್ರಿಯಿಂದಲೇ ಆರಂಭಿಸಿ, ಶುಕ್ರವಾರ ಮಧ್ಯಾಹ್ನದ ವೇಳೆಗೆ ಎಂದಿನಂತೆ ಸ್ವಚ್ಛತೆಯಿಂದ ಕೂಡಿರುವಂತೆ ಮಾಡಲಾಯಿತು.

ರಾಜಮಾರ್ಗದ ವ್ಯಾಪ್ತಿಯಲ್ಲಿ ಬರುವ ಪ್ರತೀ ವಾರ್ಡ್‌ಗಳಿಂದ 6 ರಿಂದ 10 ಮಂದಿಯನ್ನು ಕಸ ವಿಲೇವಾರಿಗಾಗಿ ನಿಯೋಜನೆ ಮಾಡಲಾಗಿತ್ತು. ಜಂಬೂಸವಾರಿ ಮುಗಿದು ವಾಹನ ಸಂಚಾರ ವಿರಳವಾಗುತ್ತಿದ್ದಂತೆ ಸ್ವಚ್ಛತಾ ಕಾರ್ಯ ಆರಂಭಿಸಿ, ಬೆಳಗಾಗುವಷ್ಟರಲ್ಲಿ ಬಹುತೇಕ ರಸ್ತೆಯನ್ನು ಗುಡಿಸಿ, ಕಸ ವಿಲೇವಾರಿ ಮಾಡಲಾಗಿತ್ತು.

ಬೆಳಗ್ಗೆ 10 ಗಂಟೆ ವೇಳೆಗೆ ರಾಜ ಮಾರ್ಗದ ತಿಲಕ್‌ನಗರ ಸಿಗ್ನಲ್‌ವರೆಗೆ 10–15 ಲೋಡ್ ಕಸ ವಿಲೇವಾರಿ ಮಾಡಲಾಗಿತ್ತು. ನಂತರ ಮಧ್ಯಾಹ್ನದ ವೇಳೆಗೆ ಬನ್ನಿಮಂಟಪದಿಂದ ಅರಮನೆ ಉತ್ತರ ದ್ವಾರದವರೆಗೆ ರಾಶಿ ರಾಶಿ ಬಿದ್ದಿದ್ದ ಕಸವನ್ನು ಸಂಪೂರ್ಣವಾಗಿ ವಿಲೇವಾರಿ ಮಾಡಲಾಯಿತು.

### ಎಲ್ಲರ ಸಹಕಾರದಿಂದ ಸಾಧ್ಯವಾಯಿತು...

ಈ ವರ್ಷದ ದಸರಾ ಕಾರ್ಯಕ್ರಮಗಳೆಲ್ಲವೂ ಜನದಟ್ಟಣೆಯಿಂದ ಕೂಡಿದ್ದು, ಎಲ್ಲಿಯೂ ಲೋಪವಾಗದೆ ಸ್ವಚ್ಛತಾ ಕಾರ್ಯ ನಿರ್ವಹಿಸಲಾಗಿದೆ. ಇದಕ್ಕೆ ಸಾರ್ವಜನಿಕರು ಸೇರಿದಂತೆ ಎಲ್ಲರೂ ಸಹಕಾರ ನೀಡಿದ್ದಾರೆ. ಆಹಾರ ಮೇಳದಲ್ಲಿ ಕಸ ವಿಲೇವಾರಿಗೆ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದ್ದು, ಎಲ್ಲಿಯೂ ಕಸ ಬೀಳದಂತೆ ನಿರ್ವಹಣೆ ಮಾಡಿದ್ದೇವೆ.

- ಡಾ.ವೆಂಕಟೇಶ್.
ಆರೋಗ್ಯಾಧಿಕಾರಿ, ನಗರಪಾಲಿಕೆ



# ಆಹಾರ ಮೇಳಕ್ಕೆ ಹರಿದು ಬರುತ್ತಿದೆ ಜನಸಾಗರ...!

## ಅರೇಬಿಯನ್ ಬಿರಿಯಾನಿ, ರೊಟ್ಟಿ ಸೇರಿದಂತೆ ಸಾಂಪ್ರದಾಯಿಕ ಆಹಾರಗಳಿಗೆ ಬೇಡಿಕೆ




ಅರೇಬಿಯನ್ ಬಿರಿಯಾನಿ ಕೊಂಡುಕೊಳ್ಳಲು ಮುಗಿಬಿದ್ದ ಜನ



12ನೇ ದಿನವೂ ಆಹಾರ ಮೇಳದಲ್ಲಿ ಕಂಡುಬಂದ ಜನಸ್ತೋಮ

ಮೈಸೂರು, ಅ.3(ವಿವಿಹೆಚ್)– ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುತ್ತಿರುವ ಆಹಾರ ಮೇಳಕ್ಕೆ ದಿನದಿಂದ ದಿನಕ್ಕೆ ಜನಸಾಗರವೇ ಹರಿದು ಬರುತ್ತಿದ್ದು, ತಿಂಡಿ ಪ್ರಿಯರು ವಿವಿಧ ರುಚಿಕರವಾದ ಆಹಾರವನ್ನು ಸವಿದು ಬಾಯಿ ಚಪ್ಪರಿಸುತ್ತಿದ್ದಾರೆ.

ಗುರುವಾರ (ಅ.2) ನಾಡಹಬ್ಬ ದಸರಾ ಜಂಬೂ ಸವಾರಿ ಮೆರವಣಿಗೆಯೊಂದಿಗೆ ಮೈಸೂರಿನಾದ್ಯಂತ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳು ಮುಕ್ತಾಯವಾಗಿದ್ದು, ಪ್ರವಾಸಿಗರು ತಮಗೆ ಪ್ರಿಯವಾದ ಆಹಾರ ಮೇಳಕ್ಕೆ ಲಗ್ಗೆಯಿಡುತ್ತಿದ್ದಾರೆ. ಬಗೆ ಬಗೆಯ ಆಹಾರ ಸವಿಯಲು ಇನ್ನೂ ಎರಡು ದಿನಗಳ ಅವಕಾಶವಿದ್ದು, ಈ ಮೇಳದಲ್ಲಿ ಬೊಂಬು ಬಿರಿಯಾನಿ, ಜೋಳದ ರೊಟ್ಟಿಯಂತಹ ಸಾಂಪ್ರದಾಯಿಕ ಖಾದ್ಯಗಳು ಸೇರಿದಂತೆ ಸಸ್ಯಾಹಾರ ಮತ್ತು ಮಾಂಸಾಹಾರಗಳು ಲಭ್ಯವಾಗುತ್ತಿದ್ದು, ಹೇರಳವಾಗಿ ಮಾರಾಟವಾಗುತ್ತಿದೆ.

ಉದ್ಘಾಟನಾ ದಿನದಿಂದಲೇ ಎಲ್ಲ ಮಳಿಗೆಗಳು ತುಂಬಿ, ವ್ಯಾಪಾರ ವಹಿವಾಟು ಜೋರಾಗಿ ನಡೆಯುತ್ತಿದೆ. ಮೊದಲ ದಿನ ಮೇಳಕ್ಕೆ ಬಂದ ಜನರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ತಮಗೆ ಇಷ್ಟವಾದ ತಿಂಡಿಗಳನ್ನು ಸವಿದರು.

ಆಹಾರ ಮೇಳದಲ್ಲಿ ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ, ಹೊರ ರಾಜ್ಯದ ಆಹಾರ ಪದ್ಧತಿಯಡಿಯಲ್ಲಿ ಕಾಶ್ಮೀರಿ, ಪಂಜಾಬಿ, ರಾಜಸ್ಥಾನಿ, ಈಶಾನ್ಯ ಭಾರತ ಆಹಾರ ಪದ್ಧತಿ, ಆಂಧ್ರ ಶೈಲಿ, ಕೇರಳ ಶೈಲಿ, ತಮಿಳುನಾಡು ಶೈಲಿ, ಮರಾಠಿ, ಅರೇಬಿಯನ್ ಶೈಲಿಯಲ್ಲಿನ ಸಸ್ಯಾಹಾರಿ ಮತ್ತು ಮಾಂಸಹಾರಿ ಶೈಲಿಯ ವಿಶೇಷ ಆಹಾರ ಸವಿಯಬಹುದು.

> ಆಹಾರ ಮೇಳ ಆಯೋಜನೆ ದಿನವನ್ನು ಕಡಿತಗೊಳಿಸುವುದು ಉತ್ತಮ. ಅವಧಿ ವಿಸ್ತರಿಸಿದಂತೆ ಬರುವವರು ಮೀನಾಮೇಷ ಎಣಿಸುತ್ತಾರೆ. ವ್ಯಾಪಾರದಲ್ಲೂ ಹಿನ್ನಡೆಯಾಗುತ್ತದೆ. ಈ ಬಾರಿ ಉತ್ತಮ ಪ್ರತಿಕ್ರಿಯೆ ಸಿಕ್ಕಿದ್ದು, ಅವಧಿ ಕಡಿತಗೊಳಿಸುವುದರಿಂದ ಸಮಯದ ಜೊತೆಗೆ ಲಾಭವೂ ಅಧಿಕವಾಗಿರುತ್ತದೆ.
> -ಫಾಸಿಲ್, ಅರೇಬಿಯನ್ ಬಿರಿಯಾನಿ ಸಹ ಮಾಲೀಕ.

**ಮೈಸೂರಲ್ಲೂ ಅರೇಬಿಯನ್ ಬಿರಿಯಾನಿ:** ಆಹಾರ ಮೇಳದ ಸ್ಟಾಲ್ ನಂ.100 ರಲ್ಲಿ ವಿಶಿಷ್ಟ ಮತ್ತು ವಿಶೇಷವಾದ ಅರೇಬಿಯನ್ ಬಿರಿಯಾನಿ ಎಲ್ಲರ ಬಾಯಲ್ಲಿ ನೀರೂರಿಸಿದೆ. ಶುಕ್ರವಾರವೂ ಕೂಡಾ ಎಂದಿನಂತೆ ಜನಸಂದಣಿ ಹೆಚ್ಚಾಗಿದ್ದು, ಅರೇಬಿಯನ್ ಬಿರಿಯಾನಿ ಸವಿಯಲು ಮುಗಿಬೀಳುತ್ತಿದ್ದು, ಕಂಡುಬಂದಿತು.

ಅಂಗಡಿ ಮಾಲೀಕರಾದ ನಿಖಿತ್ ಫಾಸಿಲ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ನಾವು ಕಳೆದ 5 ವರ್ಷದಿಂದ ಆಹಾರ ಮೇಳದಲ್ಲಿ ಮಳಿಗೆ ಹಾಕುತ್ತಿದ್ದೇವೆ. ಜನರಿಂದ ಉತ್ತಮ ಸ್ಪಂದನೆ ಸಿಗುತ್ತಿದೆ. ನಮ್ಮದು ಅರೇಬಿಯನ್ ಶೈಲಿಯ ಅಡುಗೆಯಾಗಿದ್ದು, ಜನರು ಹೆಚ್ಚಾಗಿ ಆಕರ್ಷಿತರಾಗುತ್ತಿದ್ದಾರೆ. 119 ರೂ. ಹಾಗೂ 199 ರೂ. ಕಾಂಬೋ ಆಫರ್ ಇದ್ದು, ಜನರಿಗೆ ಬಹಳ ಇಷ್ಟವಾಗಿದೆ ಎಂದರು.

ನಾಳೆ ಮತ್ತು ನಾಳಿದ್ದು, ಶನಿವಾರ ಮತ್ತು ಭಾನುವಾರವಾಗಿದ್ದು, ಅಧಿಕ ಸಂಖ್ಯೆಯಲ್ಲಿ ಆಹಾರ ಮೇಳಕ್ಕೆ ಭೇಟಿ ನಿಡುವ ಸಾಧ್ಯತೆ ಹೆಚ್ಚಾಗಿದೆ. ಬೇರೆ ಎಲ್ಲಾ ಮಳಿಗೆಗಳಿಂತ ನಮ್ಮಲ್ಲಿ ಬಿರಿಯಾನಿ ದರ ಅಧಿಕ ಆಗಿದ್ದರೂ ನಮ್ಮಲ್ಲಿಗೆ ಜನರು ಧಾವಿಸುತ್ತಿರುವುದು ನಮ್ಮ ಶ್ರಮಕ್ಕೆ ಸಿಕ್ಕ ಪ್ರತಿಫಲ. ಗುಣಮಟ್ಟದ ಆಹಾರ ಒದಗಿಸಿದ್ದಲ್ಲಿ ಆಹಾರ ಪ್ರಿಯರು ಎಂದಿಗೂ ಕೈ ಬಿಡುವುದಿಲ್ಲ ಎಂಬುದಕ್ಕೆ ನಾವೇ ಸಾಕ್ಷಿ ಎಂದು ಸಂತಸ ಹಂಚಿಕೊಂಡರು.

> ಅರೇಬಿಯನ್ ಬಿರಿಯಾನಿ ಸವಿಯಲು ನಾಲ್ಕನೇ ಬಾರಿಗೆ ಬರುತ್ತಿದ್ದೇನೆ. ಟೇಸ್ಟ್‌ನಲ್ಲಿ ಯಾವುದೇ ರಾಜಿಯಿಲ್ಲದೇ ಕೊಡುವ ಅವರ ಗುಣಮಟ್ಟದ ಆಹಾರ ಎಲ್ಲರನ್ನು ಅವರತ್ತ ಕೈಬೀಸಿ ಕರೆಯುತ್ತಿದೆ.
> -ಭರತ್.ಆರ್.ಎನ್, ಬೆಳಗಾವಿ


> ನಮಗೆ ವೆಜ್–ನಾನ್ ವೆಜ್ ಎರಡೂ ಇಷ್ಟ ಬಿರಿಯಾನಿ, ತಮಿಳುನಾಡು ಜಿಗರ್‌ತಂಡ, ಮೊಮೋಸ್, ಎಗ್‌ರೋಲ್, ಕುರುಕ್ ತಿಂಡಿಗಳು ರಿಯಾಯಿತಿ ದರದಲ್ಲಿ ಸವಿಯಬಹುದಾಗಿದೆ.
> -ದಿವ್ಯಾ.ಆರ್, ಮಾಡ್ರಳ್ಳಿ, ನರಸೀಪುರ.

**ದಾವಣಗೆರೆ ಬೆಣ್ಣೆ ದೋಸೆ:** ಬೆಂಗಳೂರಿನ ಅಭಿಷೇಕ್, ನಾಟಿ ದಾವಣಗೆರೆ ಶೈಲಿಯ ನಾಸಾ'ಸ್ ದಾವಣಗೆರೆ ಬೆಣ್ಣೆ ದೋಸೆ ಪರಿಚಯಿಸಿದ್ದಾರೆ. 99 ರೂ. ನಿಂದ 199 ರೂ. ವರೆಗಿನ ಬಗೆ ಬಗೆಯ ಬೆಣ್ಣೆ ದೋಸೆಯನ್ನು ಸವಿಯಬಹುದಾಗಿದೆ.

ಇದಲ್ಲದೆ ಸಸ್ಯಾಹಾರಿ ಮತ್ತು ಮಾಂಸಾಹಾರಿ ಖಾದ್ಯಗಳ ಜೊತೆಗೆ ಬೇಕರಿ ತಿನಿಸುಗಳಲ್ಲಿ ಹೆಸರುವಾಸಿಯಾದ ದಿ ಡೆಸರ್ಟ್ ಹೌಸ್, ಡೊನಟ್ ಹೌಸ್, ಕರದಂಟು, ಕುಂದಾ ಪೇಡಾ, ಥ್ಯಾಂಕೋಸ್ ನ್ಯಾಚುರಲ್, ಐಸ್‌ಕ್ರೀಮ್, ಚುರುಮುರಿ, ಕಬ್ಬಿನ ಹಾಲು, ತಂಪು ಪಾನೀಯ ಮುಂತಾದ ತಿನಿಸುಗಳು ರಿಯಾಯಿತಿ ದರದಲ್ಲಿ ಸವಿಯಬಹುದಾಗಿದೆ.

# ದೀಪಾಲಂಕಾರ ಸವಿಯಲು ಮುಗಿ ಬೀಳುತ್ತಿರುವ ಜನ...





ಮೈಸೂರು,ಅ.3(ಎಸ್‌ಬಿಡಿ)– ಈ ಬಾರಿಯ ದಸರಾ ಮಹೋತ್ಸವಕ್ಕೆ ನಿನ್ನೆ ತೆರೆಬಿದ್ದರೂ ವಿದ್ಯುತ್ ದೀಪಾಲಂಕಾರ ವೀಕ್ಷಣೆಗೆ ಜನಸಾಗರವೇ ಹರಿದು ಬರುತ್ತಿದೆ.

ಶುಕ್ರವಾರ ಸಂಜೆಯಿಂದಲೇ ಸಾವಿರಾರು ಮಂದಿ ದೀಪಾಲಂಕಾರ ವೀಕ್ಷಣೆಗೆ ಆಗಮಿಸಿದ್ದರಿಂದ ಎಲ್ಲಾ ರಸ್ತೆಗಳಲ್ಲೂ ವಾಹನ ದಟ್ಟಣೆ ಹೆಚ್ಚಿತ್ತು. ಅದರಲ್ಲೂ ಅರಮನೆ ಸುತ್ತ, ಕೆ.ಆರ್.ವೃತ್ತ, ದೇವರಾಜ ಅರಸು ರಸ್ತೆ, ಸಯ್ಯಾಜಿ ರಾವ್ ರಸ್ತೆ, ಜೆಎಲ್‌ಬಿ ರಸ್ತೆ ಇನ್ನಿತರ ಪ್ರಮುಖ ರಸ್ತೆಗಳಲ್ಲಿ ದಸರಾ ದಿನಗಳಲ್ಲಿದ್ದಂತೆ ವಾಹನ ಸಂಚಾರ ಕಂಡುಬಂದಿತು.

ಕಾರು, ಬೈಕ್, ಸ್ಕೂಟರ್, ಜೀಪ್‌ಗಳಲ್ಲಿ ಮಾತ್ರವಲ್ಲದೆ ಗೂಡ್ಸ್ ವಾಹನಗಳಲ್ಲಿ ಮನೆಮಂದಿಯೆಲ್ಲಾ ಆಗಮಿಸಿ, ವಿದ್ಯುತ್ ದೀಪಾಲಂಕಾರದ ಸೊಬಗು ಸವಿದರು. ತಮ್ಮ ಮೊಬೈಲ್‌ಗಳಲ್ಲಿ ವಿಡಿಯೋ, ಫೋಟೋ ತೆಗೆದುಕೊಂಡರು. ಝಗಮಗಿಸುವ ವೃತ್ತಗಳಲ್ಲಿ ಸೆಲ್ಫೀ ತೆಗೆದುಕೊಂಡು ಸಂಭ್ರಮಿಸಿದರು. ಅರಮನೆ ಸುತ್ತ ಅಪಾರ ಸಂಖ್ಯೆಯ ಜನ ಕಾಲ್ನಡಿಗೆಯಲ್ಲೇ ಸುತ್ತುಹಾಕಿ, ವರ್ಣರಂಜಿತ ವಿದ್ಯುತ್ ದೀಪಾಲಂಕಾರವನ್ನು ಕಣ್ತುಂಬಿಕೊಂಡರು. ಶನಿವಾರ ಮತ್ತು ಭಾನುವಾರ ಇನ್ನೂ ಹೆಚ್ಚು ಜನ ದೀಪಾಲಂಕಾರ ವೀಕ್ಷಣೆಗೆ ಆಗಮಿಸುವ ಸಾಧ್ಯತೆ ಇದೆ. ಅ.10ರವರೆಗೂ ಝಗಮಗಿಸುವ ದೀಪಾಲಂಕಾರ ವೀಕ್ಷಿಸುವ ಅವಕಾಶವಿದೆ.

**ಆಹಾರ ಮೇಳವೂ ರಶ್:** ದಸರಾ ಆಹಾರ ಮೇಳದಲ್ಲೂ ಶುಕ್ರವಾರ ರಾತ್ರಿ ಭಾರೀ ಜನಸ್ತೋಮವೇ ನೆರೆದಿತ್ತು. ಸುತ್ತಮುತ್ತಲ ರಸ್ತೆಗಳು, ಮಹಾರಾಜ ಕಾಲೇಜು ಆವರಣದಲ್ಲಿ ಒಂದಿಷ್ಟೂ ಜಾಗವಿಲ್ಲದಂತೆ ವಾಹನಗಳ ಪಾರ್ಕಿಂಗ್ ಮಾಡಲಾಗಿತ್ತು. ಆಹಾರ ಪ್ರಿಯರು ಆಹಾರ ಮೇಳವನ್ನು ಸುತ್ತುಹಾಕಿ ತಮಗಿಷ್ಟವಾದ ಖಾದ್ಯಗಳನ್ನು ಸವಿದು, ಸಂತೃಪ್ತರಾದರು. ಒಟ್ಟಾರೆ ದಸರೆ ಮುಗಿದರೂ ಜನರ ಸಂಭ್ರಮ ಮುಂದುವರೆದಿದ್ದು, ವ್ಯಾಪಾರಿಗಳಲ್ಲಿ ಖುಷಿ ತಂದಿದೆ. ಸದ್ಯ ಅ.5ರವರೆಗೆ ಆಹಾರ ಮೇಳ ವಿಸ್ತರಿಸಲಾಗಿದೆ.